## 01-09-2020

**ಬೆಂಗಳೂರಿನ ಮೊದಲ ರೋ ರೋ ಸೇವೆಗೆ ಚಾಲನೆ:** ಬೆಂಗಳೂರು: ಬೆಂಗಳೂರು ಹೊರವಲಯದ ನೆಲಮಂಗಲ ಮತ್ತು ಸೊಲ್ಲಾಪುರ ಸಮೀಪದ ಬೇಲ್ ನಡುವೆ ಮೊದಲ ರೋಲ್‌ಆನ್-ರೋಲ್‌ಆಫ್ ಸೇವೆಗೆ ರಾಜ್ಯದ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಚಾಲನೆ ನೀಡಿದರು.

* ರೈಲ್ವೆ ಸಚಿವಾಲಯ 2020 ರ ಏಪ್ರಿಲ್‌ನಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ರೋಲ್‌ಆನ್-ರೋಲ್‌ಆಫ್ ಸೇವೆಗೆ ಅನುಮತಿ ನೀಡಿತ್ತು.
* ನೈಋತ್ಯ ರೈಲ್ವೆಯು ಆರಂಭಿಸಿರುವ ಮೊಟ್ಟ ಮೊದಲ ರೋ ರೋ ಸೇವೆ ಇದಾಗಿದೆ.
* ಮೊದಲ ರೋ ರೋ ರೈಲು ಸರಕುಗಳನ್ನು ಹೊತ್ತ ಲಾರಿಯನ್ನು ತುಂಬಿಕೊಂಡು ನೆಲಮಂಗಲ ಮಹಾರಾಷ್ಟ್ರದ ಸೊಲ್ಲಾಪುರ ಹತ್ತಿರದ ಬೇಲ್ ಗೆ ಪ್ರಯಾಣ ಬೆಳಸಿದೆ.
* ಈ ರೈಲು 43 ಓಪನ್ ವ್ಯಾಗನ್‌ಗಳನ್ನು ಹೊಂದಿದ್ದು, 682 ಕಿ. ಮೀ. ಪ್ರಯಾಣ ಮಾಡಲಿದೆ.

**35ನೇ ಮಾಸ್ಟರ್ಸ್ ಜಯಿಸಿದ ಜೊಕೊವಿಕ್:**

ನ್ಯೂಯಾರ್ಕ್: ವೆಸ್ಟರ್ನ್ ಅಂಡ್ ಸದರ್ನ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮಿಲೋಸ್ ರಾವೊನಿಕ್ ವಿರುದ್ಧ 1-6, 6-3, 6-4 ಸೆಟ್‌ಗಳಿಂದ ಮಣಿಸುವ ಮೂಲಕ ಜೊಕೊವಿಕ್ ತಮ್ಮ ವೃತ್ತಿಜೀವನದ "35ನೇ ಮಾಸ್ಟರ್ಸ್ 1000" ಪ್ರಶಸ್ತಿಗೆ ಮುತ್ತಿಟ್ಟರು. ಈ ಮೂಲಕ ರಾಫೆಲ್ ನಡಾಲ್ ದಾಖಲೆಯನ್ನು ಸರಿಗಟ್ಟಿದರು.

* ಈ ಮೊದಲು ಜೊಕೊವಿಕ್ 2018ರಲ್ಲಿ ವೆಸ್ಟರ್ನ್ ಆಯಂಡ್ ಸದರ್ನ್ ಓಪನ್ ಜಯಿಸಿದ್ದರು.

**55 ಸಾವಿರ ಕೋಟಿ ಮೌಲ್ಯದ ಸಬ್ ಮರೀನ್ ಖರೀದಿಗೆ ಭಾರತ ಚಿಂತನೆ:** ಭಾರತೀಯ ನೌಕಾಪಡೆಗೆ 55 ಸಾವಿರ ಕೋಟಿ ರೂಪಾಯಿ ಮೌಲ್ಯದ ಆರು ಸಬ್ ಮರೀನ್ ಖರೀದಿಸಲು ರಕ್ಷಣಾ ಸಚಿವಾಲಯ ಚಿಂತನೆ ನಡೆಸಿದೆ. ನೌಕಾಪಡೆ ಸಾಮರ್ಥ್ಯದಲ್ಲಿ ಚೀನಾ ರಾಷ್ಟ್ರಕ್ಕಿಂತ ಹಿಂದಿರುವ ಭಾರತ, ಸಾಮರ್ಥ್ಯವನ್ನು ಸರಿದೂಗಿಸಲು ಸಬ್ ಮರೀನ್‌ಗಳ ಖರೀದಿಗೆ ಮುಂದಾಗಿದೆ. ಈ ಎಲ್ಲ ಸಬ್ ಮರೀನ್‌ಗಳನ್ನು ಭಾರತದಲ್ಲಿಯೇ ತಯಾರಿಸಲು ನಿರ್ಧರಿಸಿದ್ದು, ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿಯೇ ಈ ಸಬ್ ಮರೀನ್‌ಗಳನ್ನು ತಯಾರಿಸಲು ಸಿದ್ಧವಾಗಿರುವ ರಕ್ಷಣಾ ಇಲಾಖೆ, ಇದಕ್ಕೆ P-751ಎಂದು ಹೆಸರಿಟ್ಟಿದೆ.

**ಮುಂಬೈ ವಿಮಾನ ನಿಲ್ದಾಣದ ಶೇ 74ರಷ್ಟು ಶೇರು ಪಡೆದ ಅದಾನಿ ಸಮೂಹ:** ಮುಂಬೈ : ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ (ಎಂಐಎಎಲ್)ದ ಶೇಕಡಾ 74ರಷ್ಟು ಶೇರುಗಳನ್ನು ತನ್ನದಾಗಿಸಿಕೊಂಡಿದೆ.

## 02-09-2020

**ಶ್ರೀನಗರದ CRPF ಮಹಾ ನಿರ್ದೇಶಕಿಯಾಗಿ ಚಾರು ಸಿನ್ಹಾ ನೇಮಕ:** ಇತ್ತೀಚೆಗೆ ಸೇನೆಯ ಎಲ್ಲ ವಿಭಾಗಗಲ್ಲಿಯು ಮಹಿಳಾ ಅಧಿಕ ಘೋಷಿಸಿದ ಬೆನ್ನಲ್ಲೇ ಕೇಂದ್ರ ಸರ್ಕಾರವು ಜಮ್ಮು ಕಾಶ್ಮೀರದ ಶ್ರೀನಗರ ವಲಯದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಕೇಂದ್ರೀಯ ಮೀಸಲು ಪಡೆ ಮಹಾ ನಿರ್ದೇಶಕರಾಗಿ ಮಹಿಳಾ ಐಪಿಎಸ್ ಅಧಿಕಾರಿಯಾದ ಚಾರು ಸಿನ್ಹಾ ಅವರನ್ನು ನೇಮಕ ಮಾಡಿದೆ. 1996ರ ಬ್ಯಾಚ್ ತೆಲಂಗಾಣ ಕೇಡರ್‌ನ ಐಪಿಎಸ್ ಅಧಿಕಾರಿ ಚಾರು ಸಿನ್ಹಾ ಅವರನ್ನು ಈಗ ಶ್ರೀನಗರ ವಲಯದ ಸಿಆರ್‌ಪಿಎಫ್ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಕವಾಗಿದ್ದಾರೆ. ಚಾರು ಸಿನ್ಹಾ ಅವರು ಕರ್ತವ್ಯ ನಿರ್ವಹಿಸಬೇಕಾದ ಸಿಆರ್‌ಪಿಎಫ್ ತುಕಡಿಯಲ್ಲಿ 2 ಶ್ರೇಣಿ, 22 ಕಾರ್ಯನಿರ್ವಾಹಕ ಘಟಕ ಹಾಗೂ 3 ಮಹಿಳಾ ವಿಭಾಗಗಳಿರುತ್ತವೆ. ಅಲ್ಲದೆ ಶ್ರೀನಗರದ ಸಮೂಹ ಕೇಂದ್ರದ ಆಡಳಿತಾತ್ಮಕ ನಿಯಂತ್ರಣವನ್ನು ಇದು ಹೊಂದಿರುತ್ತವೆ.

**ತಮಿಳುನಾಡಿನ ಎಂ ವೀರಲಕ್ಷ್ಮಿ ಅವರು ದೇಶದ ಮೊಟ್ಟ ಮೊದಲ ಮಹಿಳಾ ಆಂಬುಲೆನ್ಸ್ ಚಾಲಕಿ:**



ಇತ್ತೀಚಿಗೆ ತಮಿಳುನಾಡು ಸರ್ಕಾರವು 108 ತುರ್ತು ಸೇವೆಗಳನ್ನು ಮತ್ತಷ್ಟು ಬಲಪಡಿಸಲು 90 ಆಂಬುಲೆನ್ಸ್ ಮತ್ತು ಜೀವ ಉಳಿಸಲು ಸಹಾಯವಾಗುವ ವೈದ್ಯಕೀಯ ಉಪಕರಣಗಳನ್ನು ಸಾಗಿಸುವ ಇತರ ವಾಹನಗಳನ್ನು ರಾಜ್ಯದ ಮುಖ್ಯಮಂತ್ರಿ ಕೆ ಪಳನಿಸ್ವಾಮಿ ಅವರು ಚಾಲನೆ ನೀಡಿದ್ದು, ಇದೆ ವೇಳೆ ಈ ವಾಹನಗಳಿಗೆ ಚಾಲಕರಾಗಿ ನೇಮಕಗೊಂಡ ಚಾಲಕರುಗಳಿಗೆ ಆದೇಶ ಪ್ರತಿಗಳನ್ನು ಹಸ್ತಾಂತರಿಸಿದರು. ಹೊಸದಾಗಿ ನೇಮಕಗೊಂಡವರಲ್ಲಿ ಎಂ. ವೀರಲಕ್ಷ್ಮಿ ಕೂಡ ಸೇರಿ ಸೇರುವ ಮೂಲಕ ದೇಶದ ಮೊಟ್ಟ ಮೊದಲ ಮಹಿಳಾ ಆಂಬುಲೆನ್ಸ್ ಚಾಲಕಿ ಎನ್ನಿಸುವ ಸಾಧನೆ ಮಾಡಿದರು.

**ಸರ್ಕಾರಿ ನೇರ ನೇಮಕಾತಿಯಲ್ಲಿ ಮತ್ತಷ್ಟು ಕ್ರೀಡೆಗಳ ಸೇರ್ಪಡೆ:** ದೆಹಲಿ: ಗ್ರೂಪ್ ಸಿ ಮಟ್ಟದ ಸರ್ಕಾರಿ ಹುದ್ದೆಗಳಲ್ಲಿ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಅವಕಾಶ ನೀಡಲಾಗುತ್ತಿದ್ದು, ಈ ಸಾಲಿಗೆ ಇದೀಗ ಮಲ್ಲಕಂಬ, ಹಗ್ಗ ಜಗ್ಗಾಟ, ಪ್ಯಾರಾ-ಕ್ರೀಡೆ ಸೇರಿ ಒಟ್ಟು 20 ಕ್ರೀಡೆಗಳನ್ನು ಹೆಚ್ಚುವರಿಯಾಗಿ ಸೇರ್ಪಡೆ ಮಾಡಲು ಕ್ರೀಡಾ ಇಲಾಖೆಯು ಸಲ್ಲಿಸಿದ ಪ್ರಸ್ತಾವನೆಗೆ ಕೇಂದ್ರ ಸರಕಾರವು ಅನುಮತಿ

ನೀಡಿದೆ. ಈ ಮೂಲಕ ಕ್ರೀಡಾ ಕೋಟಾದ ನೇರ ನೇಮಕಾತಿ ಅಡಿಯಲ್ಲಿ ಇದ್ದ ಒಟ್ಟು ಕ್ರೀಡೆಗಳ ಪಟ್ಟಿ 63ಕ್ಕೆ ಏರಿಸಲಾಗಿದೆ.

* ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ರಾಜ್ಯ ಅಥವಾ ದೇಶವನ್ನು ಪ್ರತಿನಿಧಿಸುವ ಯಾವುದೇ ಕ್ರೀಡಾಪಟುವು ಗ್ರೂಪ್ ಸಿ ಹುದ್ದೆಗೆ ನೇರ ನೇಮಕಾತಿ ಹೊಂದಲು ಅರ್ಹತೆ ಹೊಂದಿರುತ್ತಾನೆ.

**ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ವೈಎಸ್ಆರ್ ಚೇಯುಥಾ ಯೋಜನೆ ಘೋಷಣೆ:** ಆಂಧ್ರಪ್ರದೇಶ : ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಅಂದ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ಜಗನ್‌ಮೋಹನ್ ರೆಡ್ಡಿಯವರು ಇತ್ತೀಚಿಗೆ "ವೈಎಸ್ಆರ್ ಚೆಯುಥಾ" ಎಂಬ ಮತ್ತೊಂದು ನೂತನ ಯೋಜನೆಯನ್ನು ಜಾರಿಗೊಳಿಸಿದ್ದಾರೆ. YSR ಚೆಯುಥಾ ಯೋಜನೆ : ಈ ಯೋಜನೆಯಡಿಯಲ್ಲಿ SC, ST, OBC ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ 45-60 ವರ್ಷದೊಳಗಿನ ಸುಮಾರು 23 ಲಕ್ಷ ಮಹಿಳೆಯರಿಗೆ ವಾರ್ಷಿಕ 18,750ರೂ.ಗಳಂತೆ ನಾಲ್ಕು ವರ್ಷಗಳಲ್ಲಿ ಒಟ್ಟು 75,000 ರೂ.ಗಳನ್ನು ವಿತರಿಸಲಾಗುವದು.

* ಪಿಂಚಣಿಗೆ ಅರ್ಹರಾದ ವಿಧವೆ/ಒಂಟಿ ಮಹಿಳೆಯರು ಈಗಾಗಲೇ ಪ್ರತಿ ತಿಂಗಳಿಗೆ 2,250 ರೂ.ನಂತೆ ವಾರ್ಷಿಕ 27,000 ರೂ.ಗಳನ್ನು ಪಡೆಯುತ್ತಿದ್ದು, ಇನ್ನು ಈ ನೂತನ ಯೋಜನೆಯಡಿ ವಾರ್ಷಿಕ 18,750 ರೂಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

* ಚೇಯುಥಾ ಯೋಜನೆಯಡಿ ಫಲಾನುಭವಿಗಳಿಗೆ ಮಾರ್ಕೆಟಿಂಗ್ ಮತ್ತು ತಾಂತ್ರಿಕ ನೆರವನ್ನೂ ಸರ್ಕಾರದಿಂದ ನೀಡಲಾಗುವದು.

**ಕೇಂದ್ರ ಚುನಾವಣಾ ಆಯುಕ್ತರಾಗಿ ರಾಜೀವ್ ಕುಮಾರ್ ಅಧಿಕಾರ ಸ್ವೀಕಾರ:** ನವದೆಹಲಿ: ಮಾಜಿ ಹಣಕಾಸು ಕಾರ್ಯದರ್ಶಿಯಾಗಿರುವ ರಾಜೀವ್ ಕುಮಾರ್ ಅವರು ಕೇಂದ್ರ ಚುನಾವಣಾ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದರು. ದಿನಾಂಕ ಆಗಸ್ಟ 31 ರಂದು ಚುನಾವಣಾ ಆಯುಕ್ತ ಅಶೋಕ್ ಲವಾಸಾ ಅವರ ಸೇವೆ ಅಂತ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ರಾಜೀವ್ ಕುಮಾರ್ ಅವರನ್ನು ಕೇಂದ್ರ ಚುನಾವಣಾ ಆಯುಕ್ತ ಸ್ಥಾನಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇಮಕ ಮಾಡಿದ್ದಾರೆ. ರಾಜೀವ್ ಕುಮಾರ್ 1984ರ ಬ್ಯಾಚಿನ ಜಾರ್ಖಂಡ್ ಕೇಡರ್ ನ ನಿವೃತ್ತ ಐಎಎಸ್ ಅಧಿಕಾರಿಯಾಗಿದ್ದು, ಸಾರ್ವಜನಿಕ ನೀತಿ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಸುಮಾರು 30 ಕ್ಕೂ ಅಧಿಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾಗಿ ಎಂ. ಚಂದ್ರಪ್ಪ ನೇಮಕ:** ಬೆಂಗಳೂರು : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾಗಿ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಚಂದ್ರಪ್ಪ ಅವರನ್ನು ನೇಮಕಮಾಡಲಾಗಿದ್ದು, ಇವರು ಇತ್ತೀಚಿಗೆ ನಿಗಮದ ಅಧ್ಯಕ್ಷರಾಗಿ ಬೆಂಗಳೂರಿನ ಕೆ.ಹೆಚ್.ರಸ್ತೆಯಲ್ಲಿರುವ KSRTC ಕೇಂದ್ರ ಕಛೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

## 03-09-2020

**ಜಮ್ಮು ಕಾಶ್ಮೀರದಲ್ಲಿ ಇನ್ನು ಐದು ಅಧಿಕೃತ ಭಾಷೆಗಳು:** ಜಮ್ಮು ಕಾಶ್ಮೀರದಲ್ಲಿ ಇದುವರೆಗೆ ಉರ್ದು ಹಾಗೂ ಇಂಗ್ಲಿಷ್ ಭಾಷೆಗಳು ಮಾತ್ರ ಅಧಿಕೃತ ಭಾಷೆಗಳಾಗಿದ್ದವು, ಪ್ರಸ್ತುತ ಕಾಶ್ಮೀರಿ, ಡೋಗ್ರಿ ಹಾಗೂ ಹಿಂದಿ ಭಾಷೆಗಳನ್ನು ಅಧಿಕೃತ ಭಾಷೆ ಎಂಬ ಮಾನ್ಯತೆ ನೀಡುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಇದೆ ವೇಳೆ ಕೇಂದ್ರ ಸಚಿವ ಪ್ರಕಾಶ ಜವಾಡೇಕರ ಅವರು 'ಜಮ್ಮು ಕಾಶ್ಮೀರ ಅಧಿಕೃತ ಭಾಷಾ ಮಸೂದೆ–2020' ಅನ್ನು ಮುಂಬರುವ ಲೋಕಸಭೆಯ ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದು ತಿಳಿಸಿದರು.

**ಕೋವಿಡ್ 19 ಹಿನ್ನಲೆ : ಸಂಸತ್ ಕಲಾಪ ಎರಡು ಪಾಳಿಯಲ್ಲಿ:** ದೇಶದಲ್ಲಿ ವ್ಯಾಪಿಸಿರುವ ಕೊರೋಣ ಸೋಂಕಿನಿಂದ ಬಹುತೇಕ ಎಲ್ಲ ವಲಯಗಳು ತತ್ತರಿಸಿದ್ದು, ಇದೀಗ ಇದೆ ಮೊದಲ ಬಾರಿಗೆ ಸಂಸತ್ ಕಲಾಪವನ್ನು ಎರಡು ಪಾಳಿಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. ರಾಜ್ಯ ಸಭೆ ಕಲಾಪವನ್ನು ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಯವರೆಗೆ ಹಾಗೂ ಲೋಕಸಭೆಯ ಕಲಾಪವನ್ನು ಅದೇ ದಿನ ಮಧ್ಯಾಹ್ನ 3 ರಿಂದ ಸಂಜೆ 7 ಯ ವರೆಗೆ ನಡೆಸಲು ತೀರ್ಮಾನಿಸಲಾಗಿದೆ. - ಅಲ್ಲದೆ ಶನಿವಾರ ಹಾಗೂ ಭಾನುವಾರಗಳಂದು ಕಲಾಪ ನಡೆಸಲು ತೀರ್ಮಾನಿಸಲಾಗಿದ್ದು, ಭಾನುವಾರ ಕಲಾಪ ನಡೆಯುವುದು ಇದೆ ಮೊದಲಬಾರಿಗೆ. - ಪ್ರಶ್ನೋತ್ತರ ಕಲಾಪ ಮತ್ತು ಖಾಸಗಿ ವಿದೇಯಕ ಮಂಡನೆಯನ್ನು ರದ್ದುಗೊಳಿಸಲಾಗಿದೆ.

**ಕೇಂದ್ರ ಸಚಿವ ಸಂಪುಟದಿಂದ ಮಿಷನ್ ಕರ್ಮಯೋಗಿಗೆ ಅನುಮೋದನೆ:** ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಾಗರಿಕ ಸೇವೆಗಳ ಸಾಮರ್ಥ್ಯ ವೃದ್ಧಿಸುವ ರಾಷ್ಟ್ರೀಯ ಕಾರ್ಯಕ್ರಮವಾದ (NPCSCB) "ಮಿಷನ್ ಕರ್ಮಯೋಗಿ" ಯನ್ನು ಆರಂಭಿಸಲು ಅನುಮೋದನೆ ನೀಡಲಾಯಿತು. - iGOTKarmayogi ಎಂಬ ಡಿಜಿಟಲ್ ಪ್ಲಾಟ್‌ಫಾರ್ಮ್ ಸ್ಥಾಪಿಸುವ ಮೂಲಕ "ಮಿಷನ್ ಕರ್ಮಯೋಗಿ' ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವದು. - ಈ ಡಿಜಿಟಲ್ ವೇದಿಕೆ ಮೂಲಕ ನಾಗರೀಕ ಸೇವೆಗಳ ಅಧಿಕಾರಿಗಳಿಗೆ ಪ್ರಾಮಾಣಿಕ ಸಾಮರ್ಥ್ಯಗಳೊಂದಿಗೆ ಉನ್ನತ ಗುಣಮಟ್ಟದ ಮಾನದಂಡಗಳ ದಕ್ಷ ಸೇವೆ ನೀಡಲು ಸಾಧ್ಯವಾಗುತ್ತದೆ ಎಂದು ಸರ್ಕಾರ ತಿಳಿಸಿದೆ. - ಎನ್‌ಪಿಸಿಎಸ್‌ಸಿಬಿಯನ್ನು ಪ್ರಧಾನಮಂತ್ರಿಯ ಮಾನವ ಸಂಪನ್ಮೂಲ ಮಂಡಳಿಯು ನಿರ್ವಹಿಸಲಿದ್ದು, ಇದರಲ್ಲಿ ರಾಜ್ಯ ಮುಖ್ಯಮಂತ್ರಿಗಳು, ಕೇಂದ್ರ ಕ್ಯಾಬಿನೆಟ್ ಮಂತ್ರಿಗಳು ಮತ್ತು ತಜ್ಞರು ಸೇರಿದ್ದಾರೆ. ಈ ಕೌನ್ಸಿಲ್ ನಾಗರಿಕ ಸೇವಾ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳನ್ನು ಅನುಮೋದನೆ ಮತ್ತು ಪರಿಶೀಲಿಸುತ್ತದೆ.

**ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ ಅಗ್ರ 50 ರಾಷ್ಟ್ರಗಳ ಪಟ್ಟಿಯಲ್ಲಿ ಮೊದಲ ಬಾರಿ ಸ್ಥಾನಪಡೆದ ಭಾರತ:**



ವರ್ಲ್ಡ್ ಇಂಟಲೆಕ್ಚುವಲ್ ಪ್ರಾಪರ್ಟಿ ಆರ್ಗನೈಸೇಶನ್(WIPO), ಕಾರ್ನೆಲ್ ವಿಶ್ವವಿದ್ಯಾಲಯ ಹಾಗೂ ಐಎನ್‌ಎಸ್‌ಎಡಿ ಬ್ಯುಸಿನೆಸ್ ಸ್ಕೂಲ್ ಜಂಟಿಯಾಗಿ 2020 ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್ (ಜಿಐಐ)(ಜಾಗತಿಕ ಆವಿಷ್ಕಾರ ಸೂಚ್ಯಂಕ 2020) ನ್ನು ಬಿಡುಗಡೆಗೊಳಿಸಿದ್ದು, ಇದೆ ಮೊದಲ ಬಾರಿಗೆ ಭಾರತ 48ನೇ ಸ್ಥಾನ ಪಡೆದಿದ್ದು, ಒಟ್ಟು ನಾಲ್ಕು ಸ್ಥಾನಗಳ ಏರಿಕೆ ಕಾಣುವ ಮೂಲಕ ಜಗತ್ತಿನ ಅಗ್ರ 50 ದೇಶಗಳ ಗುಂಪಿನಲ್ಲಿ ಸೇರಿಕೊಂಡಿರುವುದು ವಿಶೇಷ.

* ಬಿಡುಗಡೆ ಮಾಡಿದ ಪಟ್ಟಿಯ ಪ್ರಕಾರ, ಆವಿಷ್ಕಾರ ಕ್ಷೇತ್ರದಲ್ಲಿ ಭಾರತ ಅತ್ಯಂತ ವೇಗವಾಗಿ ಅಭಿವೃದ್ಧಿ ಕಾಣುತ್ತಿರುವದು ಕಂಡುಬರುತ್ತದೆ.

* ಮಧ್ಯ ಮತ್ತು ದಕ್ಷಿಣ ಏಷ್ಯಾದ ಆವಿಷ್ಕಾರ ಸೂಚ್ಯಂಕದಲ್ಲಿ ಭಾರತ ಅಗ್ರಸ್ಥಾನವನ್ನು ಪಡೆದಿದೆ.

* ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ ಸ್ವಿಟ್ಜರ್ಲೆಂಡ್, ಸ್ವೀಡನ್, ಅಮೆರಿಕ, ಇಂಗ್ಲೆಂಡ್ ಮತ್ತು ನೆದರ್‌ಲ್ಯಾಂಡ್ ರಾಷ್ಟ್ರಗಳು ಕ್ರಮವಾಗಿ ಅಗ್ರ ಸ್ಥಾನಗಳನ್ನು ಪಡೆದಿವೆ.

* ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ(IT) ಸೇವೆಗಳ ರಫ್ತು, ಸರ್ಕಾರಿ ಆನ್ಲೈನ್ ಸೇವೆಗಳು, ವಿಜ್ಞಾನ ಮತ್ತು ಎಂಜಿನಿಯರಿಂಗ್ ಪದವೀಧರರ ಸೂಚ್ಯಂಕದಲ್ಲಿ ಭಾರತ ಅಗ್ರ 15 ರಾಷ್ಟ್ರಗಳ ಪಟ್ಟಿ ಸ್ಥಾನ ಪಡೆದಿದೆ.

## 04-09-2020

**ಪಬ್‌ಜಿ ಸೇರಿ 118 ಚೀನಿ ಮೊಬೈಲ್ ಆ್ಯಪ್‌ಗಳಿಗೆ ನಿಷೇಡಿಸಿದ ಕೇಂದ್ರ ಸರ್ಕಾರ:** ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗಿರುವ ಗೇಮ್ ಆ್ಯಪ್ ಪಬ್‌ಜಿ ಸೇರಿ ಚೀನಾ ಮೂಲದ ಒಟ್ಟು 118 ಮೊಬೈಲ್ ಆ್ಯಪ್‌ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದೆ. ಈ ಮೂಲಕ ಮೂರನೇ ಹಂತದಲ್ಲಿ ಚೀನಿ ಆಪ್ ಗಳನ್ನೂ ನಿಷೇದಿಸಿದಂತಾಯಿತು. ಭಾರತ ಮತ್ತು ಚೀನಾ ಗಡಿಯಲ್ಲಿ ವಾಸ್ತವ ನಿಯಂತ್ರಣ ರೇಖೆಯಲ್ಲಿ(LOC) ನಡುವೆ ಮತ್ತೆ ಚೀನಾವು ಸಂಘರ್ಷಕ್ಕೆ ಮುಂದಾಗಿರುವ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆಯಾದರು, ಭದ್ರತೆಯ ಕಾರಣಕ್ಕಾಗಿ ಈ ನಿಷೇಧ ಹೇರಲಾಗಿದೆ ಎಂದು ಸರ್ಕಾರ ಹೇಳಿದೆ.

* ಜೂನ್‌ನಲ್ಲಿ 59 ಆ್ಯಪ್‌ಗಳನ್ನು ನಿಷೇಧಿಸಲಾಗಿತ್ತು. ನಂತರದಲ್ಲಿ 47 ಆ್ಯಪ್‌ಗಳ ಮೇಲೆ ನಿಷೇಧ ಹೇರಲಾಗಿತ್ತು. ಇದೀಗ 118 ಚೀನಿ ಆ್ಯಪ್‌ಗಳ ನಿಷೇಧಿಸುವ ಮೂಲಕ ನಿಷೇಧಕ್ಕೆ ಒಳಗಾದ ಒಟ್ಟು ಆ್ಯಪ್‌ಗಳ ಸಂಖ್ಯೆ 224ಕ್ಕೆ ಏರಿಕೆಯಾಗಿದೆ.
* ದೇಶದ ಮತ್ತು ಜನರ ಸುರಕ್ಷತೆ ದೃಷ್ಟಿಯಿಂದ ಐಟಿ ಕಾಯ್ದೆ 69ಎ ಸೆಕ್ಷನ್ ಅಡಿ ನಿಷೇಧದ ಕ್ರಮ ಕೈಗೊಳ್ಳಲಾಗಿದೆ.

## 05-09-2020

**ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಗೆ ಭಾರತದ ಆತಿಥ್ಯ:**



ಶಾಂಘೈ ಸಹಕಾರ ಸಂಘಟನೆಯ (SCO) ಸದಸ್ಯ ರಾಷ್ಟ್ರಗಳ ಮಂಡಳಿಯ ಇದೆ ನವೆಂಬರ್ 30 ರಂದು ಶೃಂಗಸಭೆಯನ್ನು ನಡೆಸಲಿದ್ದು, ಈ ಶೃಂಗಸಭೆಗೆ ಭಾರತ ಆತಿಥ್ಯ ವಹಿಸಿಕೊಳ್ಳಲಿದೆ.
* ಪ್ರಸ್ತುತ ಎಸ್‌ಸಿಒ ಸದಸ್ಯ ರಾಷ್ಟ್ರಗಳ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿರುವ ಭಾರತದ ನೆಲದಲ್ಲಿಯೇ ಈ ವರ್ಷದ ಶೃಂಗಸಭೆ ನಡೆಯಲಿದೆ.

* ಈ ಶೃಂಗಸಭೆಯಿಂದ ಸದಸ್ಯ ರಾಷ್ಟ್ರಗಳ ನಡುವಿನ ವ್ಯಾಪಾರ ಮತ್ತು ಆರ್ಥಿಕ ಸಂಬಂಧಕ್ಕೆ ಗಮನಾರ್ಹ ಕೊಡುಗೆ ನೀಡಲು ಭಾರತಕ್ಕೆ ಉತ್ತಮ ಅವಕಾಶ ಒದಗಿಬರುವುದಾಗಿ ವಿದೇಶಾಂಗ ಸಚಿವಾಲಯದ (ಪಶ್ಚಿಮ) ಕಾರ್ಯದರ್ಶಿ ವಿಕಾಸ್ ಸ್ವರೂಪ್‌ಮಾಹಿತಿ ನೀಡಿದ್ದಾರೆ.

**ಲೆಬನಾನ್ - ಪ್ರಧಾನಿ ಹುದ್ದೆ ಏರಲಿರುವ ರಾಜತಾಂತ್ರಿಕ ಅಧಿಕಾರಿ ಮುಸ್ತಫಾ ಆದಿಬ್:** ಬೆರೂತ್ : ಲೆಬನಾನ್‌ನಲ್ಲಿ ಇತ್ತೀಚಿಗೆ ನಡೆದ ಭೀಕರ ಸ್ಫೋಟದ ಹೊಣೆಹೊತ್ತು ಅಲ್ಲಿನ ಸರ್ಕಾರವನ್ನು ವಿಸರ್ಜಿಸಲಾಗಿತ್ತು. ಪ್ರಸ್ತುತ ಜರ್ಮನಿಯಲ್ಲಿ ಲೆಬನಾನ್ ರಾಷ್ಟ್ರದ ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಮುಸ್ತಫಾ ಆದಿಬ್ ಅವರು ಪ್ರಮುಖ ಬೆಂಬಲದೊಂದಿಗೆ ಸರ್ಕಾರ ರಚನೆಗೆ ಮುಂದಾಗಿದ್ದಾರೆ. ಒಟ್ಟು 128 ಸದಸ್ಯ ಬಲ ಹೊಂದಿರುವ

ಲೆಬನಾನ್ ಸಂಸತ್‌ನಲ್ಲಿ ಮುಸ್ತಫಾ ಆದಿಬ್ ಅವರಿಗೆ 90 ಮತಗಳು ಬೆಂಬಲ ದೊರೆತಿದ್ದು, ಇವರಿಗೆ ಶೀಘ್ರ ಸರ್ಕಾರ ರಚನೆ ಮಾಡುವಂತೆ ಲೆಬನಾನ್ ಅಧ್ಯಕ್ಷ ಮಿಶೆಲ್ ಅವೂನ್ ಸೂಚಿಸಿರುವದಾಗಿ ತಿಳಿದು ಬಂದಿದೆ.

**ಪಿನಾಕಾ ರಾಕೆಟ್ ಲಾಂಚರ್ ಖರೀದಿಗಾಗಿ ಕೇಂದ್ರ ಸರ್ಕಾರದಿಂದ 2,580 ಕೋಟಿ ರೂ. ಒಪ್ಪಂದ:** ನವದೆಹಲಿ : ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯವು ಸುಮಾರು 2580 ಕೋಟಿ ರೂ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಭಾರತದ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಲು ಪಿನಾಕಾ ರಾಕೆಟ್ ಲಾಂಚರ್‌ಗಳನ್ನು ಖರೀದಿಸಲಿದೆ. ಈ ಒಪ್ಪಂದದ ಮೂಲಕ ಆರು ಸೇನಾ ರೆಜಿಮೆಂಟ್‌ಗಳಿಗೆ ಒಟ್ಟು 114 ಪಿನಾಕಾ ರಾಕೆಟ್ ಲಾಂಚರ್‌ಗಳು ಖರೀದಿಸಲಾಗುವದು. ಪಿನಾಕಾ ಮಲ್ಟಿಪಲ್ ಲಾಂಚ್ ರಾಕೆಟ್ ಸಿಸ್ಟಮ್ ಗಳನ್ನೂ DRDO ವಿನ್ಯಾಸಗೊಳಿಸಿದ್ದು ಸಂಪೂರ್ಣವಾಗಿ ಭಾರತದಲ್ಲಿಯೇ ತಯಾರಿಸಲಾಗುವದು. 2024 ರೊಳಗಾಗಿ ಸಂಪೂರ್ಣ ತಯಾರಿಗೊಂಡು ಸೇನೆಯ ಸೇವೆಗೆ ಲಭ್ಯವಾಗಿಸಲು ಯೋಜಿಸಲಾಗಿದೆ. ಈ ಯೋಜನೆಯ ಪ್ರಸ್ತಾವನೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚಿಗೆ ಅನುಮೋದನೆ ನೀಡಿದ್ದಾರೆ.

**ಏಷ್ಯಾದ ಅತಿ ದೊಡ್ಡ ಟುಲಿಪ್ ಉದ್ಯಾನ:** ಏಷ್ಯಾದ ಅತಿ ದೊಡ್ಡ ಟುಲಿಪ್ ಉದ್ಯಾನ "ಇಂದಿರಾ ಗಾಂಧಿ ಸ್ಮಾರಕ ಟುಲಿಪ್ ಗಾರ್ಡನ್". ಇದು ಜಮ್ಮು ಕಾಶ್ಮೀರದ ಶ್ರೀನಗರದಲ್ಲಿದೆ. ಇಲ್ಲಿ ಪ್ರತಿ ಬಾರಿ ಇಲ್ಲಿ ಬಣ್ಣ ಬಣ್ಣದ ಟುಲಿಪ್ ಗಳು ಅರಳಿ ನಿಂತು ಲಕ್ಷ ಲಕ್ಷ ಪ್ರವಾಸಿಗರನ್ನು ಆಕರ್ಷಿಸುತ್ತವೆ.

* ಈ ಉದ್ಯಾನವು ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಗುಲಾಬ್ ನಬಿ ಆಜಾದ್ ಅವರ ಕನಸಾಗಿತ್ತು.

* 2007ರಲ್ಲಿ ಕಾರ್ಯಾರಂಭ ಮಾಡಿದ ಇದು ಏಷ್ಯಾದ ಅತಿ ದೊಡ್ಡ ಟುಲಿಪ್ ಉದ್ಯಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ದಾಲ್ ಸರೋವರ ತೀರದ 80 ಎಕರೆ ಪ್ರದೇಶದಲ್ಲಿ ಇದನ್ನು ಸ್ಥಾಪಿಸಲಾಗಿದೆ.

**ರಮ್ಮಿ, ಪೋಕರ್ ಜೂಜಾಟದ ಆನ್ಲೈನ್ ಗೇಮ್‌ಗಳನ್ನು ನಿಷೇಧಿಸಿದ ಆಂಧ್ರ ಪ್ರದೇಶ:** ರಮ್ಮಿ, ಪೋಕರ್ ಜೂಜಾಟದ ಆನ್ಲೈನ್ ಗೇಮ್‌ಗಳು ಯುವ ಜನತೆಯನ್ನು ತಪ್ಪು ದಾರಿಗೆ ತಳ್ಳುತ್ತಿರುವ ಕಾರಣ ಈ ಜೂಜಾಟದ ಗೇಮ್‌ಗಳನ್ನು ನಿಷೇಧಿಸುವ ಮಹತ್ವದ ತೀರ್ಮಾನವನ್ನು ಆಂಧ್ರ ಪ್ರದೇಶ ಸರ್ಕಾರ ತೆಗೆದುಕೊಂಡಿದೆ. AP ಗೇಮಿಂಗ್ ಕಾಯಿದೆ 1974 ನ್ನು ತಿದ್ದುಪಡಿ ಮಾಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದ್ದು ಆನ್‌ಲೈನ್ ಜೂಜಾಟ ಗೇಮ್‌ಗಳು ಯುವಕರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿವೆ. ಆದ್ದರಿಂದ ನಾವು ಯುವಕರನ್ನು ರಕ್ಷಿಸಲು ಅಂತಹ ಎಲ್ಲಾ ಆನ್‌ಲೈನ್ ಜೂಜಾಟ ಗೇಮ್‌ಗಳು ನಿಷೇಧಿಸಲು ನಿರ್ಧರಿಸಿದ್ದೇವೆ ರಾಜ್ಯ ಸಚಿವರು ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

## 07-09-2020

**ಕೃಷ್ಣಾ ಕಾವೇರಿ ಸೇರಿ ದೇಶದ 13 ನದಿಗಳ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರದ ಯೋಜನೆ:** ನವದೆಹಲಿ: ಕರ್ನಾಟಕದ ಜೀವನದಿಯಾಗಿರುವ ಕೃಷ್ಣಾ ಮತ್ತು ಕಾವೇರಿ ನದಿಗಳನೊಳಗೊಂಡು ದೇಶದ ವಿವಿಧ ಒಟ್ಟು ಹದಿಮೂರು ನದಿಗಳ ಪುನಶ್ಚೇತನಕ್ಕಾಗಿ ಕೇಂದ್ರ ಸರ್ಕಾರ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ ಎಂದು ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದ್ದಾರೆ. ಇತ್ತೀಚೆಗೆ ಕೊಯಂಬತ್ತೂರಿಗೆ ಇಶಾ ಫೌಂಡೇಶನ್ ಸಂಸ್ಥಾಪಕರಾದ ಸದ್ಗುರು ಅವರ "ಕಾವೇರಿ ಕೂಗು" ನದಿ ಅಭಿಯಾನದ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿ ಈಗಾಗಲೇ ಗಂಗಾ ನದಿಯಲ್ಲಿ ಪುನರುಜ್ಜೀವನ ಕಾರ್ಯವನ್ನು ಜಾರಿಗೆ ತರಲಾಗಿದ್ದು, ಅದೇ ರೀತಿಯಾಗಿ ದೇಶದ ಕೃಷ್ಣಾ, ಕಾವೇರಿ, ಬಿಯಾಸ್, ಚಿನಾಬ್, ಸಟ್ಲೆಜ್, ರಾವಿ, ಯಮುನಾ, ನರ್ಮದಾ, ಮಹಾನದಿ ಸೇರಿ ವಿವಿಧ ಹದಿಮೂರು ನದಿಗಳ ಪುನರಿಜ್ಜೀವನಗೊಳಿಸುವುದಾಗಿ ಸಚಿವರು ಮಾಹಿತಿ ನೀಡಿದ್ದಾರೆ.

**ಕೇರಳದ ಆರೋಗ್ಯ ಸಚಿವೆಗೆ ವಿಶ್ವದ ಶ್ರೇಷ್ಠ ಚಿಂತಕಿ ಗೌರವ:** ತಿರುವನಂತಪುರ: ಕೇರಳ ರಾಜ್ಯ ಸರಕಾರದ ಆರೋಗ್ಯ ಸಚಿವೆಯಾಗಿ ಸೇವೆ ಸಲ್ಲಿಸುತ್ತಿರುವ ಶೈಲಜಾ ಅವರಿಗೆ ಬ್ರಿಟನ್ ದೇಶದ " ಪ್ರಾಸ್ಪೆಕ್ಟ್" ನಿಯತಕಾಲಿಯು "ವಿಶ್ವದ ಶ್ರೇಷ್ಠ ಚಿಂತಕಿ" ಎಂಬ ಗೌರವ ನೀಡಿದೆ. ಕೇರಳ ಸರ್ಕಾರದ ಆರೋಗ್ಯ ಸಚಿವೆಯಾಗಿರುವ ಇವರು ಕೊರೋಣ ವೈರಸ್ ಅನ್ನು ಯಶಸ್ವಿಯಾಗಿ ನಿರ್ವಹಿಸುವ ಮೂಲಕ ಗಮನಸೆಳೆದ ಕಾರಣ ಈ ಗೌರವಕ್ಕೆ ಭಾಜನರಾಗಿದ್ದಾರೆ. ಇನ್ನೂ ಕೊರೋಣ ವೈರಸ್ ನಿಯಂತ್ರಿಸಲು ಯಶಸ್ವಿಯಾಗಿರುವ ನ್ಯೂಜಿಲೆಂಡ್ ಪ್ರಧಾನಿ ಜೇಸಿಂಡಾ ಆರ್ಡರ್ನ್ ಅವರು ಎರಡನೇ ಸ್ಥಾನದಲ್ಲಿದ್ದಾರೆ. ಒಟ್ಟು ಇಪ್ಪತ್ತು ಸಾವಿರ ಜನರ ಮತದಾನದ ವರದಿಯನ್ನು ಆಧರಿಸಿ ಶೈಲಜಾ ಅವರಿಗೆ ಈ ಗೌರವವನ್ನು ನೀಡಲಾಗಿರುವುದು ವಿಶೇಷವಾಗಿದೆ.

**ಭಾರತ ಮತ್ತು ರಷ್ಯಾ ರಾಷ್ಟ್ರದ ನಡುವೆ ಎಕೆ-47 203 ಬಂದೂಕು ತಯಾರಿಕಾ ಒಪ್ಪಂದ:** ನವದೆಹಲಿ: ಭಾರತ ಮತ್ತು ರಷ್ಯಾ ರಾಷ್ಟ್ರದ ನಡುವೆ ಇತ್ತೀಚೆಗೆ ಎಕೆ-47 203 ಬಂದೂಕುಗಳ ತಯಾರಿಕೆ ಕುರಿತು ಒಪ್ಪಂದ ಏರ್ಪಟ್ಟಿದ್ದು, ಈ ಒಪ್ಪಂದದ ಪ್ರಕಾರ ಭಾರತೀಯ ಸೇನೆಗೆ ಅವಶ್ಯಕತೆಯಿರುವ ಒಟ್ಟು 7.70 ಲಕ್ಷ ಎಕೆ-47 203 ಬಂದೂಕುಗಳ ಪೈಕಿ 1 ಲಕ್ಷ ಎಕೆ-47 203 ಬಂದೂಕುಗಳನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲು ಮತ್ತು ಇನ್ನು ಉಳಿದ ಎಕೆ-47 203 ಭಾರತದಲ್ಲಿ ತಯಾರಿಸಲಾಗುವುದು ಈ ಯೋಜನೆಯ ಉದ್ದೇಶವಾಗಿದೆ.

* ಭಾರತ ಹಾಗೂ ರಷ್ಯಾದ ರಾಷ್ಟ್ರಗಳು ಜಂಟಿಯಾಗಿ ಸ್ಥಾಪಿಸಿದ "ಇಂಡೋ ರಷ್ಯಾ ರೈಫಲ್ಸ್ ಪ್ರೈವೇಟ್ ಲಿಮಿಟೆಡ್"

ನ ಭಾಗವಾಗಿ ಭಾರತದಲ್ಲಿ ಈ ಬಂದೂಕುಗಳನ್ನು ತಯಾರಿಸಲಾಗುವುದು.

**ಕನ್ನಡ ನಟ ಸುದೀಪ್‌ಗೆ 'ವಿಷ್ಣುವರ್ಧನ ಕಲಾ ದತ್ತಿ' ಪ್ರಶಸ್ತಿ:** ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನೀಡಲಾಗುವ 'ಅಭಿನವ ಭಾರ್ಗವ ಡಾ.ವಿಷ್ಣುವರ್ಧನ ಕಲಾ ದತ್ತಿ ಪ್ರಶಸ್ತಿ'ಯ ಪ್ರಸಕ್ತ ಸಾಲಿನ ಗೌರವಕ್ಕೆ ಕನ್ನಡ ಚಲನಚಿತ್ರ ನಟರಾದ "ಸುದೀಪ್" ಅವರು ಆಯ್ಕೆಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮನು ಬಳಿಗಾರ್ ಅವರ ನೇತೃತ್ವದಲ್ಲಿ ಇತ್ತೀಚಿಗೆ ನಡೆದ ಸಭೆಯಲ್ಲಿ ನಟ ಸುದೀಪ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಈ ಪ್ರಶಸ್ತಿಯು ₹ 25 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕ ಒಳಗೊಂಡಿರುವುದಾಗಿ ಪರಿಷತ್‌ನ ಗೌರವ ಕಾರ್ಯದರ್ಶಿ ವ.ಚ.ಚನ್ನೇಗೌಡ ಮಾಹಿತಿ ನೀಡಿದ್ದಾರೆ.

**ಮಾನವಶಾಸ್ತ್ರಜ್ಞ ಮತ್ತು ಸಾಮಾಜಿಕ ಹೋರಾಟಗಾರ ಡೇವಿಡ್ ಗ್ರೇಬರ್ ನಿಧನ:** ಖ್ಯಾತ ಮಾನವಶಾಸ್ತ್ರಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ ಮತ್ತು ಲೇಖಕರು ಆಗಿದ್ದ ಡೇವಿಡ್ ಗ್ರೇಬರ್ ಅವರು ಇಟ್ಟಚಿಗೆ ತಮ್ಮ 59 ನೇ ವಯಸ್ಸಿನಲ್ಲಿ ಇಹ ಲೋಕ ತ್ಯಜಿಸಿದರು. ಇವರು 12 February 1961 ರಲ್ಲಿ ಅಮೇರಿಕಾದ ನ್ಯೂಯಾರ್ಕ್ ನಗರದಲ್ಲಿ ಜನಿಸಿದ್ದರು.

* ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಮಾನವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.
* ಡೇವಿಡ್ ಗ್ರೇಬರ್ ಅವರು ವಾಲ್ ಸ್ಟ್ರೀಟ್ ಆಕ್ರಮಣ ಆಂದೋಲನದ ಆಯೋಜಿನೆಯಲ್ಲಿ ಪ್ರಮುಖರಾಗಿದ್ದರು.
* "ನಾವು 99%"(We are the 99%) ಎಂಬ ಘೋಷಣೆಯನ್ನು ರಚಿಸಿದ ಕೀರ್ತಿ ಇವರದಾಗಿದೆ.
* ಕೃತಿಗಳು Debt: ದಿ ಫಸ್ಟ್ 5000 ಇಯರ್ಸ್, ಡಿ ಯುಟೋಪಿಯ ಆಫ್ ರೂಲ್ಸ್ ಅಂಡ್ ಬುಲ್ಲಶಿಟ್ ಜಾಬ್ಸ: ಅ ಥಿಯರಿ, ಹಾಗೂ ಅವರ ಅಂತಿಮ ಕೃತಿ The Dawn of Everything: a New History of Humanity 2021ರಲ್ಲಿ ಬಿಡುಗಡೆಯಾಗಲಿದೆ.

**ವಿಶ್ವ ಬ್ಯಾಂಕಿಂದ ಲೆಬನಾನ್ ರಾಷ್ಟ್ರದ ಬಿಸ್ರಿ ಅಣೆಕಟ್ಟು ಯೋಜನೆಯ ಸಾಲ ರದ್ದು:** ಇತ್ತೀಚಿಗೆ ಸಂಭವಿಸಿದ ಸ್ಫೋಟದಿಂದ ಸುದ್ದಿಯಲ್ಲಿರುವ ಲೆಬನಾನ್ ರಾಷ್ಟ್ರವು ತಾನು ನಿರ್ಮಿಸಲು ಹೊರಟಿರುವ ಬಿಸ್ರಿ ಅಣೆಕಟ್ಟು ಯೋಜನೆಗಾಗಿ ವಿಶ್ವ ಬ್ಯಾಂಕಿನಿಂದ ₹ 16 ಸಾವಿರ ಕೋಟಿ (224 ಮಿಲಿಯನ್ ಡಾಲರ್) ಸಾಲದ ಬೇಡಿಕೆ ಇಟ್ಟಿತ್ತು, ಆದರೆ ಪೂರ್ವಭಾವಿ ಷರತ್ತುಗಳನ್ನು ಪೂರೈಸಲು ವಿಫಲವಾದ ಕಾರಣ ವಿಶ್ವಬ್ಯಾಂಕ್ ಲೆಬನಾನ್ ಗೆ ಸಾಲ ನೀಡಲು ಹಿಂದೇಟು ಹಾಕಿದೆ. ಈ ಕುರಿತ ಪ್ರಕಟಣೆ ಹೊರಡಿಸಿರುವ ವಿಶ್ವಬ್ಯಾಂಕ್, ಲೆಬನಾನ್ ದೇಶವು 'ನೀರು ಸರಬರಾಜು ಹೆಚ್ಚಿಸುವ (ಬಿಸ್ರಿ ಅಣೆಕಟ್ಟು) ಯೋಜನೆಗಾಗಿ ಕೇಳಿದ್ದ ಸಾಲವನ್ನು ರದ್ದುಪಡಿಸಲಾಗಿದ್ದು, ಅಣೆಕಟ್ಟು ನಿರ್ಮಾಣಕ್ಕೂ ಮೊದಲು ಷರತ್ತುಗಳನ್ನು ಪೂರೈಕೆಯಲ್ಲಿ ವಿಫಲವಾಗಿರುವುದರಿಂದ ಈ ನಿರ್ಧಾರ ಕೈಗೊಂಡಿರುವದಾಗಿ ತಿಳಿಸಿದೆ.

**2021 ಕ್ಕೆ ಇಸ್ರೋದ ಮಹತ್ವಾಕಾಂಕ್ಷಿ `ಚಂದ್ರಯಾನ-3':**



ನವದೆಹಲಿ : ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ISRO ದಿಂದ 2021 ವರ್ಷದ ಆರಂಭದಲ್ಲಿ ಬಹುನಿರೀಕ್ಷಿತ ಚಂದ್ರಯಾನ-3 ಉಡಾವಣೆ ಮಾಡಲು ಉದ್ದೇಶಿಸಲಾಗಿದೆಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮಾಹಿತಿ ನೀಡಿದ್ದಾರೆ.

* ಮೈಕ್ರೋಗ್ರಾವಿಟಿ ನಾಲ್ಕು ಜೈವಿಕ ಮತ್ತು ಎರಡು ಭೌತಿಕ ವಿಜ್ಞಾನದ ಪ್ರಯೋಗಗಳು ಪ್ರಸ್ತುತ ಜಾರಿಯಲ್ಲಿದ್ದು, ಅಲ್ಲದೆ ಚಂದ್ರಯಾನ-3 ಯೋಜನೆಯ ವಿನ್ಯಾಸದಲ್ಲಿ ಬದಲಾವಣೆ ನಡೆಯುತ್ತಿದ್ದು, ಈ ಮಿಷನ್ನಲ್ಲಿ ರೋವರ್ ಮತ್ತು ಲ್ಯಾಂಡರ್ ಮಾತ್ರ ಇರಲಿದೆ ಎಂದು ಕೇಂದ್ರ ಸಚಿವರು ಮಾಹಿತಿ ನೀಡಿದ್ದಾರೆ.

**ಉದ್ಯಮ ಸ್ನೇಹಿ ರ್ಯಾಂಕಿಂಗ್ 17 ನೇ ಸ್ಥಾನದಲ್ಲಿ ಕರ್ನಾಟಕ : ಆಂಧ್ರ ಪ್ರಥಮ**

ನವದೆಹಲಿ : ಕೇಂದ್ರ ಸರಕಾರವು ಇತ್ತೀಚಿಗೆ 2018-19ನೇ ಸಾಲಿನ ಉದ್ಯಮಸ್ನೇಹಿ ರಾಜ್ಯಗಳ ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ವರದಿಯನ್ನು ಬಿಡುಗಡೆ ಗೊಳಿಸಿದರು.ಈ ಪಟ್ಟಿಯಲ್ಲಿ ಕರ್ನಾಟಕ 17ನೇ ಸ್ಥಾನ ಪಡೆದಿದೆ. ಕಳೆದ ಸಾಲಿನಲ್ಲಿ ರಾಜ್ಯವು 8ನೇ ಸ್ಥಾನವನ್ನು ಪಡೆದಿತ್ತು, ಆದರೆ ಈ ಬಾರಿ 9 ಸ್ಥಾನಗಳಷ್ಟು ಕುಸಿತ ಕಂಡು 17 ನೇ ಸ್ಥಾನಕ್ಕಿಳಿದಿದೆ.

* 2019ರ ರ್ಯಾಂಕಿಂಗ್ ಪಟ್ಟಿಯಲ್ಲಿಟಾಪ್-10 ರಾಜ್ಯಗಳು 1. ಆಂಧ್ರಪ್ರದೇಶ, 2. ಉತ್ತರಪ್ರದೇಶ, 3. ತೆಲಂಗಾಣ, 4. ಮಧ್ಯಪ್ರದೇಶ, 5. ಜಾರ್ಖಂಡ್, 6. ಛತ್ತೀಸ್‌ಗಢ, 7. ಹಿ. ಪ್ರದೇಶ, 8. ರಾಜಸ್ಥಾನ, 9. ಪ. ಬಂಗಾಳ, 10. ಗುಜರಾತ್

* ಕಳೆದ 5 ವರ್ಷದಲ್ಲಿ ರಾಜ್ಯದ ಸ್ಥಾನ 2015: 09ನೇ ಸ್ಥಾನ, 2016: 13ನೇ ಸ್ಥಾನ, 2017: 08ನೇ ಸ್ಥಾನ, 2018: 08ನೇ ಸ್ಥಾನ, 2019: 17ನೇ ಸ್ಥಾನ

## 08-09-2020

**ಸೆಪ್ಟೆಂಬರ್ 8 : ವಿಶ್ವ ಸಾಕ್ಷರತಾ ದಿನ:** 1965 ರಲ್ಲಿ ಇರಾನಿನಲ್ಲಿ ನಡೆದ ವಿಶ್ವ ಸಂಸ್ಥೆಯ ಸಭೆಯಲ್ಲಿ ಯುನೆಸ್ಕೋ ಸಾಕ್ಷರತೆಯ ಮಹತ್ವವನ್ನು ತಿಳಿಸಲು ಹಾಗೂ ಸಾಕ್ಷರತೆ ಕುರಿತು ಜಾಗೃತಿಗಾಗಿ ಪ್ರತಿ ವರ್ಷದ ಸೆಪ್ಟೆಂಬರ್ 8 ರಂದು "ಅಂತರರಾಷ್ಟ್ರೀಯ ಸಾಕ್ಷರತಾ ದಿನ" ವನ್ನು ಆಚರಿಸಲು ಕರೆನೀಡಿತು. ಈ ಮೂಲಕ ಸಾಕ್ಷರತೆಯ ಗುಣಮಟ್ಟವನ್ನು ಹೆಚ್ಚಿಸಲು ಯುನೆಸ್ಕೋ ನಿರ್ಧರಿಸಿತು. ಸಾಕ್ಷರತಾ ದಿನ 2020 ರ ಘೋಷವಾಕ್ಯ : "COVD-19 ಅದಕ್ಕೂ ಮೀರಿದ ಸಂದರ್ಭದಲ್ಲಿ ಸಾಕ್ಷರತೆ ಬೋಧನೆ ಮತ್ತು ಕಲಿಕೆಯ ಮಹತ್ವ" (Literacy teaching and learning in the COVID-19 crisis and beyond)

**ನ್ಯಾಯಾಂಗ ನಿಂದನೆ, ಪ್ರಶಾಂತ್ ಭೂಷಣ್‌ಗೆ 1 ರೂ. ದಂಡ: ಸುಪ್ರೀಂ:** ನವದೆಹಲಿ: ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ನ್ಯಾಯಾಂಗ ಮತ್ತು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ವಿರುದ್ಧದ ವಿವಾದಾತ್ಮಕ ಟ್ವೀಟ್ ಮಾಡಿದ್ದರು. ಈ ಹಿನ್ನಲೆ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದಡಿಯಲ್ಲಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ದೋಷಿಯಾಗಿದ್ದ ಪ್ರಶಾಂತ್ ಭೂಷಣ್‌ಗೆ 1 ರೂ. ದಂಡ ಕಟ್ಟುವಂತೆ ಸುಪ್ರೀಂಕೋರ್ಟ್ ಇತ್ತೀಚಿಗೆ ತೀರ್ಪು ನೀಡಿ ನ್ಯಾ. ಅರುಣ್ ಮಿಶ್ರಾ ನೇತೃತ್ವದ ತ್ರಿಸದಸ್ಯ ಪೀಠ ತಿಳಿಸಿದೆ.
* ಪ್ರಶಾಂತ್ ಭೂಷಣ್ ಅವರಿಗೆ ಹೇಳಿಕೆ ಹಿಂಪಡೆದು ಕ್ಷಮೆ ಕೇಳುವಂತೆ ಸುಪ್ರೀಂಕೋರ್ಟ್ ಅವಕಾಶ ನೀಡಿತ್ತಾದರೂ, ಇವರು ಶಿಕ್ಷೆ ಸ್ವೀಕರಿಸಲು ಸಿದ್ಧ ಎಂದಿದ್ದರು.

**ಸ್ವದೇಶಿ ನಿರ್ಮಿತ HSTDV ಹಾರಾಟ ಪರೀಕ್ಷೆ ಯಶಸ್ವಿ-DRDO:** ನವದೆಹಲಿ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ದೇಶೀಯ ರಕ್ಷಣಾ ತಂತ್ರಜ್ಞಾನ ಉಪಯೋಗಿಸಿಕೊಂಡು ನಿರ್ಮಿಸಿದ ಹೈಪರ್ಸಾನಿಕ್ ಟೆಕ್ನಾಲಜಿ ಡೆಮನ್‌ಸ್ಟ್ರೇಟರ್ ವೆಹಿಕಲ್ (ಎಚ್‌ಎಸ್‌ಟಿಡಿವಿ) ತನ್ನ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಹಾರಾಟ ನಡೆಸಿದೆ. ಈ ಮೂಲಕ ಆತ್ಮನಿರ್ಭರ ಭಾರತದತ್ತ ಮಹತ್ವದ ಮೈಲಿಗಲ್ಲಾಗಿದೆ.
* ಒಡಿಶಾದ ಕರಾವಳಿ ತೀರ ಪ್ರದೇಶದಲ್ಲಿರುವ ಡಾ. ಎಪಿಜೆ ಅಬ್ದುಲ್ ಕಲಾಂ ಕ್ಷಿಪಣಿ ಉಡಾವಣಾ ಕೇಂದ್ರದಿಂದ ಎಚ್‌ಎಸ್ ಟಿಡಿವಿ ಯಶಸ್ವಿಯಾಗಿ ಹಾರಾಟ ನಡೆಸಿದೆ.

**ಚೆನ್ನೈನಲ್ಲಿರುವ ಅಮೆರಿಕ ದೂತವಾಸ ಮುಖ್ಯಸ್ಥೆಯಾಗಿ ಜ್ಯುಡಿತ್ ರೇವಿನ್ ನೇಮಕ:** ಚೆನ್ನೈ : ಜುಡಿತ್ ರೇವಿನ್ ಅವರನ್ನು ಚೆನ್ನೈನಲ್ಲಿರುವ ಅಮೆರಿಕ ದೂತವಾಸ ಕಚೇರಿಯ ಕಾನ್ಸುಲರ್ ಜನರಲ್ ಆಗಿ ನೇಮಕ ಮಾಡಲಾಗಿದೆ. ಈ ಮೊದಲು ಈ ಹುದ್ದೆಯಲ್ಲಿ ಕಾನ್ಸುಲರ್ ಜನರಲ್ ರಾಬರ್ಟ್ ಜಿ ಬುರ್ಜೆಸ್ ಅವರು ಕಾರ್ಯನಿರ್ವಹಿಸುತ್ತಿದ್ದರು. ಇವರ ದೂತವಾಸದ ಮುಖ್ಯಸ್ಥೆಯಾಗಿ ಅಧಿಕಾರಾವಧಿ ಮೂರು ವರ್ಷ ಇರಲಿದೆ. ಹಾಗೂ ಇವರ ಕಾರ್ಯ ವ್ಯಾಪ್ತಿ ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿ, ಅಂಡಮಾನ್ ನಿಕೋಬಾರ್ ದ್ವೀಪಗಳಾಗಿವೆ. ಕಾನ್ಸುಲರ್ ಜನರಲ್ ಅವರ ಮುಖ್ಯ ಕರ್ತವ್ಯವು ಭಾರತ ಮತ್ತು ಅಮೆರಿಕ ರಾಷ್ಟ್ರಗಳ ನಡುವಿನ ಸಂಬಂಧಗಳನ್ನ ಗಟ್ಟಿಗೊಳಿಸುವುದಾಗಿದೆ.

**ಮೈಸೂರು ದಸರಾ : ಈ ಬಾರಿ ಅಂಬಾರಿ ಹೊರಲಿರುವ ಆನೆ ಅಭಿಮನ್ಯು:**



ಮೈಸೂರು : ಸುಪ್ರೀಂ ಕೋರ್ಟ್ ನ ನಿರ್ದೇಶನಗಳು ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ 60 ವರ್ಷಕ್ಕಿಂತ ಮೇಲ್ಪಟ್ಟ ಯಾವುದೇ ಆನೆಗೆ ಭಾರವಾದ ಮತ್ತು ಒತ್ತಡದ ಕರ್ತವ್ಯವನ್ನು ವಹಿಸುವಂತಿಲ್ಲ, ಆದುದರಿಂದ ಪ್ರತಿ ವರ್ಷ ಅಂಬಾರಿ ಹೊರುತ್ತಿದ್ದ ಅರ್ಜುನ ಎಂಬ ಆನೆಗೆ 60 ವರ್ಷ ಮೀರಿರುವದರಿಂದ, ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಅಭಿಮನ್ಯು ಎಂಬ ಆನೆಗೆ ಹೊರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.
* ಅರ್ಜುನ ಆನೆಯು ಸತತ ಎಂಟು ಬಾರಿ ಚಿನ್ನದ ಅಂಬಾರಿಯನ್ನು ಹೊತ್ತಿದೆ.

## 09-09-2020

**ಅಖಿಲ ಭಾರತ ಟೆನಿಸ್ ಅಸೋಸಿಯೇಶನ್ (AITA) ಅಧ್ಯಕ್ಷರಾಗಿ ಸಂಸದ ಅನಿಲ್ ಜೈನ್ ಆಯ್ಕೆ:** ಮಾರ್ಚ್ 1920 ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಟೆನಿಸ್ ಅಸೋಸಿಯೇಶನ್(ಎಐಟಿಎ) ನೂತನ ಅಧ್ಯಕ್ಷರಾಗಿ ರಾಜ್ಯಸಭಾ ಸದಸ್ಯರಾಗಿರುವ ಡಾ.ಅನಿಲ್ ಜೈನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಾಲಿ ಅಧ್ಯಕ್ಷ ಪ್ರವೀಣ್ ಮಹಾಜನ್ ಅವರ ಅವಧಿ ಮುಗಿದ ಹಿನ್ನಲೆ ನೂತನವಾಗಿ ಸಂಸದ ಅನಿಲ್ ಜೈನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.
* ಹೊಸದಾಗಿ ಆಯ್ಕೆಯಾದ ಅನಿಲ್ ಜೈನ್ ಅವರ ಅಧಿಕಾರಾವಧಿ 2024 ರವರೆಗೆ ಇರುತ್ತದೆ.

**ಕರ್ನಾಟಕದಲ್ಲಿ ದೇಶದ ಮೊದಲ ಏರ್ ಆಂಬುಲೆನ್ಸ್ ಗೆ ಚಾಲನೆ:**



ಭಾರತದಲ್ಲಿಯೇ ಮೊಟ್ಟ ಮೊದಲ ಸಂಯೋಜಿತ ಏರ್ ಆ್ಯಂಬುಲೆನ್ಸ್ ಅನ್ನು ಕರ್ನಾಟಕದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಅಧಿಕೃತವಾಗಿ ಬೆಂಗಳೂರಿನ ಜಕ್ಕೂರಿನ ಏರೋಡ್ರೋಮ್ ನಲ್ಲಿ ಚಾಲನೆ ನೀಡಿದರು.

**ಸಾಹಿತಿ ಬೇಲೂರು ಕೃಷ್ಣಮೂರ್ತಿ ಇನ್ನಿಲ್ಲ:** ಸಾಹಿತ್ಯ ವಲಯದಲ್ಲಿ ನಾಟಕ ರಚನೆಯ ಮೂಲಕ ಪ್ರಸಿದ್ಧರಾಗಿ, ನೂರಕ್ಕೂ ಅಧಿಕ ನಾಟಕಗಳನ್ನು ರಚಿಸಿ "ಶತನಾಟಕ ಸರದಾರ" ಎಂದೇ ಖ್ಯಾತರಾಗಿದ್ದ ಸಾಹಿತಿ ಬೇಲೂರು ಕೃಷ್ಣಮೂರ್ತಿ ಅವರು ತಮ್ಮ 90 ನೇ ವಯಸ್ಸಿನಲ್ಲಿ ಹಾಸನದಲ್ಲಿ ಇಹಲೋಕ ತ್ಯಜಿಸಿದರು. ಇವರು ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.
* ಪ್ರಮುಖ ನಾಟಕಗಳು : ಬಲಿದಾನ, ಭಂಡಬಾಳು, ಅಸಲಿ ನಕಲಿ, ಆಹುತಿ ಸೇವೆ, ಜ್ವಾಲೆ
* ಪ್ರಮುಖ ಕಾದಂಬರಿಗಳು : ದಾಹ, ಪುತ್ರವಾತ್ಸಲ್ಯ, ಬೆಟ್ಟದ ಬೈರಾಗಿ.
* ಇವರು 'ತೀರದ ಬಯಕೆ' ಎಂಬ ಚಲನಚಿತ್ರವನ್ನು ನಿರ್ದೇಶಿಸಿದ್ದರು.

**ಜಪಾನನಲ್ಲಿ 'ಹೈಶೆನ್' ಚಂಡಮಾರುತ ದಾಳಿ:** ಟೋಕಿಯೊ: ಜಪಾನ್ ರಾಷ್ಟ್ರದ ದಕ್ಷಿಣ ಭಾಗಕ್ಕೆ ಇತ್ತೀಚಿಗೆ ಪ್ರಬಲ 'ಹೈಶೆನ್' ಚಂಡಮಾರುತ ಅಪ್ಪಳಿಸಿದ ಕಾರಣ ಜನಜೀವನ ತತ್ತರಿಸಿ ಅಪಾರ ಹನಿ ಉಂಟಾಗಿದೆ. ಈ ಚಂಡಮಾರುತ ಗಂಟೆಗೆ 162 ಕಿ.ಮೀ. ವೇಗದಲ್ಲಿ ಬೀಸುತ್ತಿದ್ದು, ಪರಿಣಾಮ ಭೀಕರವಾಗಿರಲಿದೆ ಎಂದು ಜಪಾನ್ ಹವಾಮಾನ ಸಂಸ್ಥೆ ಎಚ್ಚರಿಸಿದೆ. ಕಳೆದ ವಾರವಷ್ಟೇ ಜಪಾನಗೆ ಅಪ್ಪಳಿಸಿದ್ದ "ಮೇಸಕ್" ಚಂಡಮಾರುತದಿಂದ ಜನಜೀವನ ಸುಧಾರಿಸಿಕೊಳ್ಳುವ ಮೊದಲೇ ಜಪಾನ್ ಮತ್ತೊಂದು ಚಂಡಮಾರುತ ಹೊಡೆತಕ್ಕೆ ಸಿಲುಕಿ ತತ್ತರಿಸಿದೆ.
* 'ಹೈಶೆನ್' ಎಂಬುದು ಚೀನಿ ಭಾಷೆಯ ಪದವಾಗಿದ್ದು, ಇದು ಸಮುದ್ರ ದೇವತೆ ಎಂಬ ಅರ್ಥ ನೀಡುತ್ತದೆ.

**ಭಾರತದಿಂದ ವಿದೇಶಕ್ಕೆ ಹಣ ವರ್ಗಾವಣೆ ಮಾಡಿದಲ್ಲಿ 5% ಟಿಡಿಎಸ್:** ಅಕ್ಟೋಬರ್ 1 ನೇ ತಾರೀಕಿನಿಂದ ಜಾರಿಗೆ ಬರುವಂತೆ ಭಾರತದಿಂದ ವಿದೇಶಕ್ಕೆ ಹಣವನ್ನು ವರ್ಗಾವಣೆ ಮಾಡುವವರು ವರ್ಗಾವಣೆ ಆಗುವ ಹಣಕ್ಕೆ ಶೇಕಡಾ 5% Tax Deduction at Source (TDS) ಮೊತ್ತ ಕಡಿತವಾಗಲಿದೆ. ಹಣಕಾಸು ಕಾಯ್ದೆ 2020ರ ಪ್ರಕಾರ, ವಿದೇಶಕ್ಕೆ ಕಳುಹಿಸುವ ಮೊತ್ತದಲ್ಲಿ 5% TDS ಕಡಿತಗೊಳ್ಳಲಿದೆ.
* 7 ಲಕ್ಷಕ್ಕಿಂತ ಕಡಿಮೆ ಅವಧಿಗೆ ಹಾಗೂ ಟೂರ್ ಪ್ಯಾಕೇಜ್ ಖರೀದಿಗೆ TDS ಅನ್ವಯ ಆಗಲ್ಲ.

## 10-09-2020

**ಮಾಸ್ಕೋದಲ್ಲಿ ನಡೆಯಲಿರುವ ಸಿಎಂಎಫ್‌ನ ಸಭೆಯಲ್ಲಿ ಜೈಶಂಕರ್ ಭಾಗಿ:** ನವದೆಹಲಿ : ಮಾಸ್ಕೋದಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಸ್ಥೆಯ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ವಿದೇಶಾಂಗ ಸಚಿವ ಡಾ.ಸುಬ್ರಹ್ಮಣ್ಯಂ ಜೈಶಂಕರ್ ಭಾಗವಹಿಸಿದರು. ಶಾಂಘೈ ಸಹಕಾರ ಸಂಸ್ಥೆಯ ಪೂರ್ಣ ಸದಸ್ಯರಾಗಿ ಭಾರತ ಭಾಗವಹಿಸುತ್ತಿರುವ 3ನೇ ಸಭೆ ಇದಾಗಿದೆ.
* ಭಾರತ ಹಾಗೂಚೀನಾ ರಾಷ್ಟ್ರಗಳ ಮಧ್ಯ ಗಡಿ ಬಿಕ್ಕಟ್ಟು ನಡೆದಿರುವ ಈ ಸಮಯದಲ್ಲೇ ಈ ಸಭೆ ನಡೆಯುತ್ತಿದೆ.
* ಈ ಮೊದಲು 2018 ರಲ್ಲಿ ಬೀಜಿಂಗ್‌ನಲ್ಲಿ ಮತ್ತು 2019ರ ಮೇ ತಿಂಗಳಲ್ಲಿ ಕಿರ್ಗಿಜ್ ರಿಪಬ್ಲಿಕ್‌ನ ಬಿಷ್ಕೆಕ್‌ನಲ್ಲಿ ನಡೆದ ಸಭೆಗಳಲ್ಲಿ ಭಾರತ ಭಾಗವಹಿಸಿತ್ತು.

**ದೇಶದ ಬೀದಿಬದಿ ವ್ಯಾಪಾರಿಗಳಿಗಾಗಿ ಪ್ರಧಾನಿ 'ಸ್ವನಿಧಿ ಯೋಜನೆ':** ನವದೆಹಲಿ : ದೇಶದಲ್ಲಿ ಕೊರೋಣ ಇಂದಾಗಿ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಬೀದಿಬದಿ ವ್ಯಾಪಾರಿಗಳಿಗೆ ನೆರವು ನೀಡಲು ಕೇಂದ್ರ ಸರ್ಕಾರವು ಹೊಸ "ಪ್ರಧಾನಮಂತ್ರಿ ಸ್ವನಿಧಿ ಯೋಜನೆ" ಜಾರಿಗೊಳಿಸಲು ಚಿಂತಿಸುತ್ತಿದೆ. ಭಾರತ ಲಾಕ್ ಡೌನ್ ನಿಂದಾಗಿ ಬೀದಿಬದಿ ವ್ಯಾಪಾರಿಗಳು ಆದಾಯವಿಲ್ಲದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಎಲ್ಲ ಬಡ ಮತ್ತು ಮಧ್ಯಮ ವರ್ಗದ ವ್ಯಾಪಾರಿಗಳಿಗೆ ಪ್ರಧಾನಮಂತ್ರಿ ಸ್ವನಿಧಿ ಯೋಜನೆ ಮೂಲಕ ಆರ್ಥಿಕ ನೆರವು ನೀಡಲಾಗುತ್ತದೆ. ಈ ಮೂಲಕ ವ್ಯಾಪಾರಿಗಳ ಬದುಕಿಗೆ ಆರ್ಥಿಕ ಶಕ್ತಿ ತುಂಬುವ ಹಾಗೂ ಪುನಶ್ಚೇತನಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

**ತ್ರಿಭಾಷಾ ಸೂತ್ರ ತಿರಸ್ಕರಿಸಿದ ತಮಿಳುನಾಡು ರಾಜ್ಯ:** ಕೇಂದ್ರ ಸರ್ಕಾರದ ತ್ರಿಭಾಷಾ ಸೂತ್ರವನ್ನು ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಅಳವಡಿಸಿಕೊಳ್ಳುವದಿಲ್ಲ ಎಂದು ತಮಿಳು ನಾಡು ಸರ್ಕಾರ ಸ್ಪಷ್ಟಪಡಿಸಿದೆ. ಅಲ್ಲದೆ ದ್ವಿಭಾಷಾ ಸೂತ್ರವನ್ನೇ ಮುಂದುವರಿಸುವುದಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ. ತಮಿಳುನಾಡು ರಾಜ್ಯದಲ್ಲಿ ಈ ಮೊದಲಿನಿಂದಲೂ ದ್ವಿಭಾಷಾ ಸೂತ್ರವನ್ನೇ ಅನುಸರಿಸುತ್ತ ಬಂದಿದ್ದು, ಯಶಸ್ವಿ ಕೂಡ ಆಗಿದೆ. ಹಾಗೂ ಬರುವ ದಿನಗಲ್ಲಿ ಕೂಡ ಯಾವುದೇ ಕಾರಣಕ್ಕೂ ದ್ವಿಭಾಷಾ ಸೂತ್ರವನ್ನು ಕೈಬಿಡುವದಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಅವರಿಗೆ ಪತ್ರದ ಮೂಲಕ ತಮಿಳುನಾಡು ಶಿಕ್ಷಣ ಸಚಿವ ಕೆ.ಪಿ. ಅನ್ಬಳಗನ್ ತಿಳಿಸಿದ್ದಾರೆ.

**ಪ್ರಧಾನಿ ಮೋದಿಯಿಂದ "ಮತ್ಸ್ಯ ಸಂಪದ" ಯೋಜನೆಗೆ ಚಾಲನೆ:** ನವದೆಹಲಿ : ಪ್ರಧಾನಿ ನರೇಂದ್ರ ಮೋದಿ ಅವರು ದಿನಾಂಕ ಸೆಪ್ಟೆಂಬರ್ 10 ರಂದು "ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ (ಪಿಎಂಎಂಎಸ್.ವೈ) ಗೆ ಡಿಜಿಟಲ್ ತಂತ್ರಜ್ಞಾನದ ಮೂಲಕ ಚಾಲನೆ ನೀಡಿದರು. ಇದೆ ವೇಳೆ ಅವರು ರೈತರ ನೇರ ಬಳಕೆಗಾಗಿ ತಳಿ ಸುಧಾರಣಾ ಮಾರುಕಟ್ಟೆ ಮತ್ತು ಮಾಹಿತಿ ಪೋರ್ಟಲ್ ಆಗಿರುವ "ಇ-ಗೋಪಾಲ ಆಪ್" ಗೆ ಚಾಲನೆ ನೀಡಿದರು. ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ : ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ (ಪಿಎಂಎಂಎಸ್.ವೈ)ಯು ಅಂದಾಜು 20,050 ಕೋಟಿ ರೂ. ಹೂಡಿಕೆಯ ಮಹತ್ವದ ಯೋಜನೆಯಾಗಿದ್ದು, ಈ ಯೋಜನೆಯ ಮೂಲಕ ದೇಶದ ಮೀನುಗಾರಿಕೆ ವಲಯದ ಸುಸ್ಥಿರ ಅಭಿವೃದ್ಧಿಗೆ ಗಮನಹರಿಸಲಾಗುವದು.
* ಈ ಯೋಜನೆಯು ಆತ್ಮ ನಿರ್ಭರ ಭಾರತ ಯಾಜನೆ ಅಡಿಯಲ್ಲಿ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ 2020-21 ರಿಂದ 2024-25ರ ನಡುವೆ ಒಟ್ಟು 5 ಆರ್ಥಿಕ ವರ್ಷ ಕಾರ್ಯನಿರ್ವಹಿಸಲಿದೆ.
* ಈ ಯೋಜನೆಯ ಮೂಲಕ ಮೀನು ಉತ್ಪಾದನೆಯನ್ನು 2024-25ರ ಹೊತ್ತಿಗೆ ಹೆಚ್ಚುವರಿಯಾಗಿ 70 ಲಕ್ಷ ಟನ್ ಹೆಚ್ಚಳ ಮಾಡುವ ಗುರಿ ಹೊಂದಲಾಗಿದೆ. ಅಲ್ಲದೆ ರಫ್ತಿನ ಗಳಿಕೆಯನ್ನು 1,00,000 ಕೋಟಿ ರೂ.ಗಳಿಗೆ ಹೆಚ್ಚಿಸುವ ಮೂಲಕ ಆದಾಯವನ್ನು ದುಪ್ಪಟ್ಟು ಮಾಡುವ ಗುರಿ ಹೊಂದಿದೆ.

**ಅಂಬಾಲದ ಭಾರತೀಯ ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆಗೊಂಡ ರಫೆಲ್ ಯುದ್ಧ ವಿಮಾನಗಳು:**



ಜುಲೈ ತಿಂಗಳಲ್ಲಿ ಫ್ರಾನ್ಸ್ ನಿಂದ ಭಾರತಕ್ಕೆ ಬಂದಿಳಿದಿದ್ದ ರಫೇಲ್ ಯುದ್ಧ ವಿಮಾನಗಳನ್ನು ಭಾರತೀಯ ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆ ಮಾಡಿಕೊಳ್ಳಲಾಯಿತು. ಭಾರತ ಹಾಗೂ ಚೀನಾ ಗಡಿ ಭಾಗದಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ಸಮಯದಲ್ಲಿ ರಫೆಲ್ ಯುದ್ಧ ವಿಮಾನಗಳು ಭಾರತೀಯ ವಾಯುಪಡೆಗೆ ತೀವ್ರ ಬಲ ನೀಡಲಿವೆ.
* ಫ್ರಾನ್ಸ್ ಮೂಲದ ಡಸಾಲ್ಟ್ ಕಂಪೆನಿ ನಿರ್ಮಿಸಿರುವ 5 ರಫೇಲ್ ಫೈಟರ್ ಜೆಟ್ ವಿಮಾನಗಳ ಪೈಕಿ ಎರಡು ವಿಮಾನಗಳು 2 ಸೀಟರ್ ತರಬೇತಿ ವಿಮಾನಗಳಾಗಿದ್ದು, 3 ಸಿಂಗಲ್ ಸೀಟರ್ ಯುದ್ಧ ವಿಮಾನಗಳಾಗಿವೆ.

**ಹುಬ್ಬಳ್ಳಿ ರೈಲು ನಿಲ್ದಾಣಕ್ಕೆ ಸಿದ್ಧಾರೂಢರ ಹೆಸರಿಡಲು ಕೇಂದ್ರದ ಅನುಮತಿ:** ಹುಬ್ಬಳ್ಳಿ : ರಾಜ್ಯದ ವಾಣಿಜ್ಯ ನಗರಿ ಎಂದೇ ಪ್ರಸಿದ್ಧವಾಗಿರುವ ಹುಬ್ಬಳ್ಳಿ ರೈಲು ನಿಲ್ದಾಣಕ್ಕೆ ಇಲ್ಲಿನ ಜನರ ಆರಾಧ್ಯ ದೈವರಾಗಿರುವ ಸಿದ್ಧಾರೂಢ ಸ್ವಾಮೀಜಿ ಹೆಸರಿಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಮೂಲಕ ಇಲ್ಲಿನ ಜನರ ಬಹು ದಿನದ ಬೇಡಿಕೆ ಈಡೇರಿದೆ. 2009ರಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಕೆ.ಎಚ್.ಮುನಿಯಪ್ಪ, ಹಲವು ರಾಜ್ಯ ಮತ್ತು ಕೇಂದ್ರದ ಜನಪ್ರತಿನಿಧಿಗಳು, ಭಕ್ತರು ಮತ್ತು ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಸಮಿತಿ ಸದಸ್ಯರು ನಿರಂತರವಾಗಿ ಮನವಿ ಸಲ್ಲಿಸಿ ಅನುಮತಿ ಕೇಳಿದ್ದರ ಪರಿಣಾಮವಾಗಿ ಹುಬ್ಬಳ್ಳಿ ರೈಲು ನಿಲ್ದಾಣವನ್ನು 'ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣ' ಎಂದು ನಾಮಕರಣ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

**HAL ನಿರ್ಮಿತ ಎಲ್‌ಯುಎಚ್ ಕಾಪ್ಟರ್ ಪರೀಕ್ಷೆ ಯಶಸ್ವಿ:** ನವದೆಹಲಿ: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಸಂಸ್ಥೆಯು ದೇಶೀಯವಾಗಿ ನಿರ್ಮಿಸಿದ Light Utility Helicopter (ಮಿತ ಉಪಯೋಗಕಾರಿ ಕಾಪ್ಟರ್) ಪರೀಕ್ಷಾತ್ರ ಹಾರಾಟ ನಡೆಸಿದ್ದು, ಪ್ರಾಥಮಿಕ ಹಂತದ ಈ ಪರೀಕ್ಷೆಯಲ್ಲಿ ಯಶಸ್ವಿಯಾಗಿದೆ. ಭೂ ಸೇನೆ ಹಾಗೂ ವಾಯುಪಡೆಗಾಗಿ ಈ ಕಾಪ್ಟರ್ ತಯಾರಿಸಲಾಗಿದ್ದು, ಒಟ್ಟು 10 ದಿನಗಳ ಕಾಲ ಪರೀಕ್ಷೆಗೆ ಒಳಪಡಿಸಲಾಗಿತ್ತು, ಪರೀಕ್ಷೆ ನಂತರ ಹೆಲಿಕಾಪ್ಟರ್‌ಗೆ ಇರಬೇಕಾದ ಉಷ್ಣ ಹಾಗೂ ತೀವ್ರ ಮಾರುತಗಳ ಹವಾಮಾನ ಪರಿಸ್ಥಿತಿಗಳಲ್ಲಿ ಹಾರಾಟ ಮಾಡಬಲ್ಲ ಸಾಮರ್ಥ್ಯ ಹೊಂದಿದ್ದು, ಪರೀಕ್ಷೆಯ ವೇಳೆ ನಿಖರ ಫಲಿತಾಂಶ ನೀಡಿರುವದಾಗಿ ಮೂಲಗಳು ತಿಳಿಸಿವೆ. LUH ನ ವಿಶೇಷಗಳು: - 3000 Kg ಹೆಲಿಕಾಪ್ಟರ್‌ನ ತೂಕ - 235 kmph ಹೆಲಿಕಾಪ್ಟರ್‌ನ ಸರಾಸರಿ ವೇಗ - 260 kmph ಕಾಪ್ಟರ್‌ನ ಗರಿಷ್ಠ ವೇಗ - 350 KM: ಒಂದು ಬಾರಿ ಕಾಪ್ಟರ್ ಸಾಗುವ ಗರಿಷ್ಠ ದೂರ - 3120 KG ಹಾರಾಟದ ವೇಳೆ ಹೆಲಿಕಾಪ್ಟರ್ ಹೊರಬಲ್ಲ ಗರಿಷ್ಠ ತೂಕ

## 11-09-2020

**ಈ ವರ್ಷ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮರಾಠ ಮೀಸಲಾತಿ ಇಲ್ಲ: ಸುಪ್ರೀಂ ಕೋರ್ಟ್:** ನವದೆಹಲಿ : ಮರಾಠರಿಗೆ ಮೀಸಲಾತಿ ನೀಡುವ ಮಹಾರಾಷ್ಟ್ರದ ಕಾನೂನು ಪ್ರಶ್ನಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಉನ್ನತ ಪೀಠಕ್ಕೆ ವರ್ಗಾಯಿಸಿದೆ ಹಾಗೂ ಈ ವರ್ಷ ಮಹಾರಾಷ್ಟ್ರದಲ್ಲಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮರಾಠ ಮೀಸಲಾತಿ ಇಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. 2020-21 ನೇ ಸಾಲಿನಲ್ಲಿ ಯಾವುದೇ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮರಾಠಿ ಮೀಸಲಾತಿ ಲಭ್ಯವಿರುವದಿಲ್ಲ, ಈ ನಿಯಮ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳ ದಾಖಲಾತಿಯಲ್ಲೂ ಅನ್ವಯಿಸಲಿದ್ದು, ಈ ವಿಷಯದ ಕುರಿತು ಉನ್ನತ ಪೀಠ ನೀಡುವ ತೀರ್ಪಿನ ಬಳಿಕವಷ್ಟೇ ಶಿಕ್ಷಣ

ಹಾಗೂ ಉದ್ಯೋಗದಲ್ಲಿ ಮೀಸಲಾತಿ ಕುರಿತು ನಿರ್ಣಯ ಕೈಗೊಳ್ಳುವದಾಗಿ ಸುಪ್ರೀಂ ತಿಳಿಸಿದೆ.

**ವಿಮರ್ಶಕ ಡಾ| ಜಿ.ಎಸ್.ಆಮೂರ ಅವರಿಗೆ "ನೃಪತುಂಗ ಸಾಹಿತ್ಯ ಪುಶಸ್ತಿ':** ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ 2020ನೇ ಸಾಲಿನ “ನೃಪತುಂಗ ಸಾಹಿತ್ಯ ಪ್ರಶಸ್ತಿ’ ಗೆ ಹಿರಿಯ ವಿಮರ್ಶಕ ಡಾ| ಜಿ. ಎಸ್. ಆಮೂರರರವರು ಭಾಜನರಾಗಿದ್ದಾರೆ.
* ಪ್ರಶಸ್ತಿಯು 7,00,001 ರೂ. ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಇತ್ತೀಚಿಗೆ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರರವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯ ಸಭೆಯಲ್ಲಿ ಡಾ| ಜಿ.ಎಸ್.ಆಮೂರ ಹೆಸರನ್ನು ಅಂತಿಮಗೊಳಿಸಲಾಯಿತು, ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ದಿನಾಂಕವನ್ನು ಶೀಘ್ರದಲ್ಲೇ ಪ್ರಕಟಿಸುವುದಾಗಿ ತೀರ್ಮಾನಿಸಲಾಯಿತು.

**ಗಗನ ನೌಕೆಯೊಂದಕ್ಕೆ ಕಲ್ಪನಾ ಚಾವ್ಲಾ ಹೆಸರಿಟ್ಟ ಅಮೆರಿಕ:** ವಾಷಿಂಗ್ಟನ್ : ಅಮೆರಿಕದ ಗಗನ ನೌಕೆಯೊಂದಕ್ಕೆ ಭಾರತೀಯ ಮೂಲದ ಹೆಮ್ಮೆಯ ಪುತ್ರಿ, ಹಾಗೂ ಖಗೋಳ ವಿಜ್ಞಾನಿಯಾಗಿರುವ ದಿವಂಗತ ಕಲ್ಪನಾ ಚಾವ್ಲಾ ಅವರ ಹೆಸರಿಡಲಾಗಿದೆ.
* ಎಸ್.ಎಸ್.ಕಲ್ಪನಾ ಚಾವ್ಲಾ ಎಂದು ಹೆಸರಿಸಲಾದ ಗಗನನೌಕೆಯು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ವಾಣಿಜ್ಯ ಸರಕು ಸಾಗಿಸಲಿದೆ.
* ಭಾರತೀಯ ಮೂಲದ ಕಲ್ಪನಾ ಚಾವ್ಲಾ ಅವರು ಅಮೆರಿಕದ ನಾಸಾ ಸಂಸ್ಥೆಯ ವಿಜ್ಞಾನಿ ಹಾಗೂ ಅಂತರಿಕ್ಷ ಯಾನಿಯಾಗಿದ್ದರು. ಇವರು 2003ರಲ್ಲಿ ಕೊಲಂಬಿಯಾ ಗಗನನೌಕೆಯ ಸ್ಫೋಟಗೊಂಡು ಒಟ್ಟು 7 ಖಗೋಳ ಯಾತ್ರಿಗಳು ಸಾವನ್ನಪ್ಪಿದರು, ಅವರಲ್ಲಿ ಕಲ್ಪನಾ ಕೂಡ ಒಬ್ಬರು.

**ಲಡಾಖ್ ಗಡಿ ಸಂಘರ್ಷ ಕೊನೆಗಾಣಿಸಲು ಇಂಡೋ-ಚೀನಾ 5 ಅಂಶಗಳ ಸೂತ್ರ:** ನವದೆಹಲಿ : ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ)ಯ ಸಭೆಯ ಸಂದರ್ಭದಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಮತ್ತು ಚೀನಾದ ವಿದೇಶಾಂಗ ಮಂತ್ರಿ ವಾಂಗ್ ಯೀ ನಡುವೆ ಮಾತುಕತೆ ನಡೆದಿದ್ದು, ಪೂರ್ವ ಲಡಾಖ್‌ನ ಭಾರತ-ಚೀನಾ ಗಡಿಯಲ್ಲಿ ಉಭಯ ರಾಷ್ಟ್ರಗಳ ಮಧ್ಯ ಕಳೆದ ನಾಲ್ಕು ತಿಂಗಳುಗಳಿಂದ ತಲೆದೋರಿರುವ ಗಡಿ ಬಿಕ್ಕಟ್ಟು ಮತ್ತು ಯುದ್ಧದ ವಾತಾವರಣವನ್ನು ಶಮನಗೊಳಿಸಲು ಮಾತುಕತೆ ನಡೆಸಿದ್ದು, ಐದು ಅಂಶಗಳ ನೀಲನಕ್ಷೆ ಸಮ್ಮತಿ ನೀಡಲಾಗಿದೆ ಎಂದು ತಿಳಿದುಬಂದಿದೆ. ಉಭಯ ರಾಷ್ಟ್ರಗಳ ಸೇನಾಪಡೆಗಳು ವಾಸ್ತವ ನಿಯಂತ್ರಣರೇಖೆಯಿಂದ (ಎಲ್‌ಎಸಿ) ತಕ್ಷಣ ಹಿಂದಕ್ಕೆ ಸರಿಯುವುದು ಸೇರಿ ಐದು ಸಂಧಾನ ಸೂತ್ರಗಳ ಬಗ್ಗೆ ಉಭಯ ನಾಯಕರು ಚರ್ಚಿಸಿ ಸಹಮತ ನೀಡಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

**ನಟ ಪರೇಶ್ ರಾವಲ್ ರಾಷ್ಟ್ರೀಯ ನಾಟಕ ಶಾಲೆ(ಎನ್‌ಎಸ್‌ಡಿ) ಮುಖ್ಯಸ್ಥರಾಗಿ ಆಯ್ಕೆ:** ನವದೆಹಲಿ: ಬಾಲಿವುಡ್ ನ ಖ್ಯಾತ ನಟ ಪರೇಶ್ ರಾವಲ್ ಅವರನ್ನು ಭಾರತದ ಪ್ರಧಾನ ರಂಗಭೂಮಿ ಸಂಸ್ಥೆಯಾದ ರಾಷ್ಟ್ರೀಯ ನಾಟಕ ಶಾಲೆ(ಎನ್‌ಎಸ್‌ಡಿ) ಮುಖ್ಯಸ್ಥರನ್ನಾಗಿ ಕೇಂದ್ರ ಸರ್ಕಾರ ನೇಮಿಸಿದೆ. ರಾಷ್ಟ್ರಪತಿ ಭವನವು ಪರೇಶ್ ರಾವಲ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದು, ಇನ್ನು ಮೇಲೆ ರಾಷ್ಟ್ರೀಯ ನಾಟಕ ಶಾಲೆ ವಿದ್ಯಾರ್ಥಿಗಳು ಹಾಗೂ ಕಲಾವಿದರು ಇವರ ಅನುಭವದ ಲಾಭ ಪಡೆಯಲಿದ್ದಾರೆ ಎಂದು ಕೇಂದ್ರ ಸಂಸ್ಕೃತಿ ಸಚಿವ ಪ್ರಹ್ಲಾದ್ ಪಟೇಲ್ ಅಭಿನಂದಿಸಿದ್ದಾರೆ. 65 ವರ್ಷದ ಪರೇಶ್ ರಾವಲ್ 'ಹೇರಾ ಫೇರಿ', 'ಅತಿಥಿ ತುಮ್ ಕಬ್ ಜಾವೋಗೆ', 'ಓ ಮೈ ಗಾಡ್' ಮುಂತಾದ ಚಿತ್ರಗಳಲ್ಲಿ ನಟಿಸಿದ್ದು, ರಂಗಭೂಮಿಯ ಅನುಭವವನ್ನು ಹೊಂದಿದ್ದಾರೆ.

**'ರಾಷ್ಟ್ರೀಯ ಚಿಟ್ಟೆ' ಆಯ್ಕೆ ಪ್ರಕ್ರಿಯೆಗಾಗಿ ಏಳು ತಳಿಯ ಚಿಟ್ಟೆಗಳ ಆಯ್ಕೆ:**



ನವದೆಹಲಿ : ಭಾರತವು ಈಗಾಗಲೇ ರಾಷ್ಟ್ರೀಯ ಪ್ರಾಣಿಯಾಗಿ ಹುಲಿ, ರಾಷ್ಟ್ರೀಯ ಪಕ್ಷಿಯಾಗಿ ನವಿಲು, ರಾಷ್ಟ್ರೀಯ ಪುಷ್ಪವಾಗಿ ಕಮಲವನ್ನು ಸೇರಿದಂತೆ ಹಲವು ರಾಷ್ಟ್ರೀಯ ಗುರುತುಗಳನ್ನು ಹೊಂದಿದೆ. ಇನ್ನು ಈ ಸಾಲಿಗೆ ಶೀಘ್ರದಲ್ಲೇ ರಾಷ್ಟ್ರೀಯ ಚಿಟ್ಟೆ ಸೇರ್ಪಡೆಗೊಳ್ಳಲಿದ್ದು, ಚಿಟ್ಟೆಗಳಲ್ಲಿ ಅತ್ಯುತ್ತಮ ಪ್ರಭೇದವೊಂದನ್ನು ಆರಿಸಿ, ಅದಕ್ಕೆ ರಾಷ್ಟ್ರೀಯ ಸ್ಥಾನಮಾನ ನೀಡುವ ವಿಶೇಷ ಪ್ರಕ್ರಿಯೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಈಗಾಗಲೇ ಕೇಂದ್ರ ಸರ್ಕಾರವು ಇದಕ್ಕಾಗಿ ಚಿಟ್ಟೆಗಳ ಹವ್ಯಾಸಿ ಅಧ್ಯಯನಕಾರರು, ಸಂಶೋಧಕರು, ಬರಹಗಾರರು ಮತ್ತು ತಜ್ಞರಿರುವ 50 ಸದಸ್ಯರ ಸಮಿತಿಯೊಂದನ್ನು ರಚಿಸಿದ್ದು, ಈ ಸಮಿತಿಯು ಶಿಫಾರಸು ಮಾಡುವ ಚಿಟ್ಟೆಯ ಪ್ರಭೇದಕ್ಕೆ “ರಾಷ್ಟ್ರೀಯ ಚಿಟ್ಟೆ’ ಎಂಬ ಹೆಗ್ಗಳಿಕೆ ಸಿಗಲಿದೆ. ಈಗಾಗಲೇ ಅಂತಿಮ ಪಟ್ಟಿಯಲ್ಲಿ ಸ್ಥಾನದಲ್ಲಿ ಏಳು ಚಿಟ್ಟೆಗಳು ಸ್ಥಾನಪಡೆದಿದ್ದು, ಯಾವ ರಾಷ್ಟ್ರೀಯ ಚಿಟ್ಟೆಯ ಸ್ಥಾನಮಾನ ಪಡೆಯಬೇಕು ಎಂಬ ಪ್ರಶ್ನೆಯನ್ನು ಆನ್‌ಲೈನ್ ಮೂಲಕ ಸಾರ್ವಜನಿಕರಿಂದ ಆಯ್ಕೆ ಮಾಡಲಾಗುತ್ತಿದೆ. ಈ ವರ್ಷಾಂತ್ಯಕ್ಕೆ ಅಥವಾ 2021ರ ಆರಂಭದಲ್ಲಿ ಅಧಿಕೃತವಾಗಿ ಪ್ರಕಟಗೊಳ್ಳುವ ಸಾಧ್ಯತೆಯಿದೆ.

## 12-09-2020

**2021ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಗೆ ಡೊನಾಲ್ಡ್ ಟ್ರಂಪ್ ಹೆಸರು ನಾಮನಿರ್ದೇಶನ:** ಅಮೇರಿಕಾ ಅಧ್ಯಕ್ಷರಾಗಿರುವ ಡೊನಾಲ್ಡ್ ಟ್ರಂಪ್ ಅವರು ಇಸ್ರೇಲ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಡುವೆ ಶಾಂತಿ ಸಂಧಾನಕ್ಕಾಗಿ ಪ್ರಯತ್ನಿಸಿದ ಹಿನ್ನಲೆ ಅವರ ಕೊಡುಗೆಗಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೆಸರನ್ನು 2021ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡಲಾಗಿದೆ.
* ಇದಲ್ಲದೆ ಟ್ರಂಪ್ ಅವರು ಭಾರತ ಮತ್ತು ಪಾಕಿಸ್ತಾನದ ನಡುವಿನ ಕಾಶ್ಮೀರ ಗಡಿ ವಿವಾದದಲ್ಲೂ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

**ವಿಶ್ವದ ಮೊದಲ ತೇಲುವ ಆಪಲ್ ಸ್ಟೋರ್ ಕಾರ್ಯಾರಂಭ:**



ಕ್ಯುಪರ್ಟಿನೋ ಮೂಲದ ಐಫೋನ್ ತಯಾರಕ ಸಂಸ್ಥೆಯು ಇತ್ತೀಚಿಗೆ ಸಿಂಗಪೂರನಲ್ಲಿ ವಿಶ್ವದ ಮೊದಲ ತೇಲುವ ಆಪಲ್ ಸ್ಟೋರ್ ಆರಂಭಿಸಿದೆ. ಈ ಸ್ಟೋರ್ ಸಂಪೂರ್ಣ ಗಾಜಿನ ಡೋಮ್ ಹೊಂದಿದ್ದು, ಇದು ನೀರಿನ ಮೇಲೆ ನಿರ್ಮಿಸಲಾಗಿದ್ದು, ಗೋಳಾಕಾರದ ಆಕೃತಿಯ ವಿನ್ಯಾಸ ಹೊಂದಿದ್ದು, ಇದು ಸಂಪೂರ್ಣ ನೀರಿನ ಮೇಲೆ ತೇಲುತ್ತದೆ. ಈ ಮೂಲಕ ಜಗತ್ತಿನ ಮೊಟ್ಟ ಮೊದಲ ನೀರಿನ ಮೇಲೆ ತೇಲುವ ಆಪಲ್ ಸ್ಟೋರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಯುನಿಸೆಫ್‌ನ 'ಮಕ್ಕಳ ಹಕ್ಕುಗಳ ಅಭಿಯಾನ' ಕ್ಕೆ ಆಯುಷ್ಮಾನ್ ಖುರಾನ ರಾಯಭಾರಿಯಾಗಿ ಆಯ್ಕೆ:** ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನಿಸೆಫ್ ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ನೂತನ ಅಭಿಯಾನ 'ಮಕ್ಕಳ ಹಕ್ಕುಗಳ ಅಭಿಯಾನ' ಆರಂಭಿಸಿದ್ದು, ಈ ನೂತನ ಅಭಿಯಾನಕ್ಕೆ ಭಾರತೀಯ ತಾರಾ ಪ್ರಚಾರಕರಾಗಿ ಬಾಲಿವುಡನ ನಟರಾದ ಆಯಷ್ಮಾನ್ ಖುರಾನಾ ಅವರು ಆಯ್ಕೆಮಾಡಿ ಯುನಿಸೆಫ್ ಆಯ್ಕೆ ಮಾಡಿದೆ.

**200 ಬಿಲಿಯನ್ ಡಾಲರ್ ಮಾರುಕಟ್ಟೆ ಮೌಲ್ಯ ಪ್ರವೇಶಿಸಿದ ರಿಲಯನ್ಸ್:** ಮುಂಬೈ: ಭಾರತದ ಮುಕೇಶ್ ಅಂಬಾನಿ ಮುಖ್ಯಸ್ಥರಾಗಿರುವ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಶೇಕಡಾ 7 ರಷ್ಟು ಏರಿಕೆ ಕಂಡ ಹಿನ್ನಲೆ, ಸಂಸ್ಥೆಯು 200 ಬಿಲಿಯನ್ ಡಾಲರ್ ಮಾರುಕಟ್ಟೆ ಮೌಲ್ಯ ದಾಟಿದೆ, ಈ ಮೂಲಕ 200 ಬಿಲಿಯನ್ ಡಾಲರು ಮಾರುಕಟ್ಟೆ ಮೌಲ್ಯ ಹೊಂದಿದ ಭಾರತದ ಮೊತ್ತ ಮೊದಲ ಸಂಸ್ಥೆಯಾಗಿ ಹೊರಹೊಮ್ಮಿದೆ. - ಅಲ್ಲದೆ ರಿಲಾಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ವಿಶ್ವದ ಅಮೂಲ್ಯ ಸಂಸ್ಥೆಗಳ ಲೀಗ್‌ನ ಅಗ್ರ 40 ಸ್ಥಾನವನ್ನು ಪ್ರವೇಶಿಸಿದೆ.

## 13-09-2020

**ಕಾರ್ಮಿಕರ 3 ಸಂಹಿತೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ:** ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಇತ್ತೀಚಿಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಾರ್ಮಿಕರ ಸಂಹಿತೆಗೆ ಮೂರು ಕಾನೂನು ಸೇರಿಸುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ. ಈ ಸಂಹಿತೆಯು ಮುಂಗಾರು ಅಧಿವೇಶನದಲ್ಲಿ ಮಂಡನೆಯಾಗಲಿದೆ. ದೇಶದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಹಾಗೂ ಕೈಗಾರಿಕಾ ಸಂಬಂಧ ಕುರಿತ ಹೊಸ ನಿಯಮಗಳು ಹಾಗೂ ಕಾರ್ಮಿಕರ ಸುರಕ್ಷತೆಗಾಗಿ ಕಾರ್ಖಾನೆಯಲ್ಲಿ ಅಳವಡಿಸಬೇಕಾದ ಸುರಕ್ಷತೆ, ಕಾರ್ಮಿಕ ಕಲ್ಯಾಣ, ಕೈಗಾರಿಕಾ ವಿವಾದ, ಕಾರ್ಮಿಕ ಒಕ್ಕೂಟಕ್ಕೆ ಸಂಬಂಧಿಸಿ ಕಾನೂನುಗಳನ್ನು ಅಲ್ಲದೆ ಈ ಕಾರ್ಮಿಕರ ಮೂರು ಸಂಹಿತೆ ಒಳಗೊಂಡಿದೆ.

## 14-09-2020

**ಏರೋ ಇಂಡಿಯಾ ವೆಬ್‌ಸೈಟ್‌ಗೆ ಸಚಿವ ರಾಜನಾಥ್‌ಸಿಂಗ್ ರಿಂದ ಚಾಲನೆ:** ನವದೆಹಲಿ : ಏರೋ ಇಂಡಿಯಾ 2021 ವೈಮಾನಿಕ ಪ್ರದರ್ಶನವು ಬೆಂಗಳೂರಿನಲ್ಲೇ ನಡೆಸಲು ಇತ್ತೀಚಿಗೆ ತೀರ್ಮಾನ ಕೈಗೊಂಡ ಹಿನ್ನಲೆ ಇದೀಗ ಏರೋ ಇಂಡಿಯಾ 2021 ರ ಅಧಿಕೃತ ವೆಬ್‌ಸೈಟ್‌ಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದ್ದಾರೆ. ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ 2021ರ ಫೆಬ್ರುವರಿ 3ರಿಂದ 7ರವರೆಗೆ ಏರೋ ಇಂಡಿಯಾ ನಡೆಸಲು ತೀರ್ಮಾನಿಸಲಾಗಿದ್ದು, ಈ ಕುರಿತ ಮಾಹಿತಿ ಹಾಗೂ ಟಿಕೆಟ್‌ಗಳ ಮಾರಾಟಕ್ಕಾಗಿ https://aeroindia.gov.in ವೆಬ್‌ಸೈಟ್‌ಗೆ ಸಚಿವರು ಚಾಲನೆ ದೊರೆತಿದೆ.
* ವೆಬ್‌ಸೈಟ್‌ನಲ್ಲಿ ಕೇಂದ್ರ ರಕ್ಷಣಾ ಸಚಿವಾಲಯದ ನೀತಿ, ನಿಯಮಗಳು, ಹೊಸ ಯೋಜನೆಗಳ ವಿವರಗಳು ನೀಡಲಾಗಿದೆ.
* ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ನಡೆಯುವ 13ನೇ ಆವೃತ್ತಿಯ ವೈಮಾನಿಕ ಪ್ರದರ್ಶನಕ್ಕೆ ಸಂಬಂಧಿಸಿದ ಎಲ್ಲ ಆನ್‌ಲೈನ್ ಸೇವೆಗಳನ್ನೂ ಈ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.
* 1996 ರಲ್ಲಿ ಮೊದಲ ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಆರಂಭವಾದಾಗಿನಿಂದಲೂ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ.

**ಯುಎಸ್ ಓಪನ್ ಮಹಿಳೆಯರ ಸಿಂಗಲ್ಸ್ : 3ನೇ ಬಾರಿ ಗ್ರಾಂಡ್ ಸ್ಲಾಂ ಗೆದ್ದ ನವೋಮಿ ಒಸಾಕಾ:** ನ್ಯೂಯಾರ್ಕ್: ಇತ್ತೀಚಿಗೆ ನಡೆದ ಮುಕ್ತ ಟೆನಿಸ್ ಪಂದ್ಯದಲ್ಲಿ ಮಹಿಳೆಯರ

ಸಿಂಗಲ್ಸ್ ಅಂತಿಮ ಪಂದ್ಯದಲ್ಲಿ ಬೆಲಾರಸ್ ನ ವಿಕ್ಟೋರಿಯಾ ಅಜರೆಂಕಾ ಅವರ ವಿರುದ್ಧ ಜಪಾನ್ ನ ನವೋಮಿ ಒಸಾಕಾ ಸತತ ಮೂರನೇ ಬಾರಿಗೆ ಗ್ರಾಂಡ್ ಸ್ಲಾಮ್ ಪ್ರಶಸ್ತಿಯನ್ನು ಪಡೆದುಕೊಂಡರು.

* ಚೀನಾದ ಲಿ ನಾ ಅವರ ಎರಡು ಗ್ರಾಂಡ್ ಸ್ಲಾಂ ಪ್ರಶಸ್ತಿ ಸಂಖ್ಯೆಯನ್ನು ಹಿಂದಿಕ್ಕಿ ಮೂರು ಗ್ರಾಂಡ್ ಸ್ಲಾಂ ಪ್ರಶಸ್ತಿ ಪಡೆಯುವ ಮೂಲಕ ಏಷ್ಯಾ ಖಂಡದ ಮೊದಲ ಆಟಗಾರ್ತಿಯಾಗಿದ್ದಾರೆ.

* ಒಸಾಕಾ ಅವರು ಈ ಮೊದಲು 2018ರಲ್ಲಿ ಅಮೆರಿಕ ಓಪನ್ ಮತ್ತು 2019ರಲ್ಲಿ ಆಸ್ಟ್ರೇಲಿಯಾ ಓಪನ್ ಟೆನಿಸ್ ಸರಣಿಯ ಪ್ರಶಸ್ತಿಯನ್ನು ಪಡೆದಿದ್ದರು.

* ಪ್ರಶಸ್ತಿಯು 30 ದಶಲಕ್ಷ ಡಾಲರ್ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

**ಬೋಸ್ಟನ್ ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಕನ್ನಡ 'ಅಮೃತಮತಿ' ಚಿತ್ರ ಆಯ್ಕೆ:** ಬೆಂಗಳೂರು: ನಟಿ ಹರಿಪ್ರಿಯಾ ಅಭಿನಯದ ಕನ್ನಡದ 'ಅಮೃತಮತಿ' ಚಿತ್ರವು ಈ ಮೊದಲು ಆಸ್ಟ್ರಿಯಾ, ನೋಯ್ಡಾ ಮತ್ತು ಅಟ್ಲಾಂಟ ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದ್ದು, ಇದೀಗ ಅಮೆರಿಕಾದ ಬೋಸ್ಟನ್ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆಯಾಗಿದೆ.

* ಹದಿಮೂರನೇ ಶತಮಾನದ ಕನ್ನಡ ಕವಿ ಜನ್ನನು ಬರೆದಿರುವ 'ಯಶೋಧರ ಚರಿತೆ' ಕಾವ್ಯದ ಕಥೆ ಆಧರಿಸಿ 'ಅಮೃತಮತಿ' ಚಿತ್ರವನ್ನು ಹೆಣೆಯಲಾಗಿದ್ದು, ಚಿತ್ರವನ್ನು ಹಿರಿಯ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿದ್ದಾರೆ.

* ಈ ಚಿತ್ರದಲ್ಲಿನ ಅತ್ಯುತ್ತಮ ಅಭಿನಯಕ್ಕಾಗಿ ಹರಿಪ್ರಿಯಾ ಅವರಿಗೆ ನೋಯ್ಡಾ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ಕೂಡ ದೊರೆತಿದೆ.

**ವಿಮಾನದಿಂದ ಫೋಟೋಗಳನ್ನು ತೆಗೆಯೋದು 'ಬ್ಯಾನ್': ನಾಗರಿಕ ವಿಮಾನಯಾನ ನಿರ್ದೇಶನಾಲಯ:** ನವದೆಹಲಿ : ಕೇಂದ್ರ ನಾಗರಿಕ ವಿಮಾನಯಾನ ನಿರ್ದೇಶನಾಲಯವು ಸರ್ಕಾರಿ ಏರೋಡ್ರೋಮ್ ನಿಂದ ಅಥವಾ ವಿಮಾನದಿಂದ ಯಾವುದೇ ಫೋಟೋವನ್ನು ಕ್ಲಿಕ್ ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಒಂದು ವೇಳೆ ವಿಶೇಷ ಸಂದರ್ಭಗಳಲ್ಲಿ ಫೋಟೋಗಳು ಬೇಕಾದರೆ, ಲಿಖಿತ ರೂಪದಲ್ಲಿ ಅನುಮತಿ ಪಡೆಯುವದು ಕಡ್ಡಾಯವಾಗಿದೆ.

* ಸುರಕ್ಷತೆಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಈ ಕ್ರಮ ಕೈಗೊಳ್ಳಲಾಗಿದೆ, ಹಾಗೂ ನಿಯಮ ಉಲ್ಲಂಘನೆಗೆ ಕಾರಣರಾದವರ ವಿರುದ್ಧ ವಿಮಾನಯಾನವು ಅಗತ್ಯವಿರುವ ಎಲ್ಲಾ ದಂಡನಾತ್ಮಕ ಕ್ರಮ ಕೈಗೊಳ್ಳಲಿದೆ.

**ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಯೋಗ ವಿಶ್ವವಿದ್ಯಾಲಯ:**



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಯೋಗ ವಿಶ್ವವಿದ್ಯಾಲಯ ಆರಂಭಿಸಲು ₹1,000 ಕೋಟಿ ಮೊತ್ತದ ಈ ಯೋಜನೆಗೆ ಪ್ರಧಾನಮಂತ್ರಿಯವರ ಸಚಿವಾಲಯದ ಸೂಚನೆಯಂತೆ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಸಿದ್ಧತೆ ನಡೆಸಿದೆ.

**ಮಾಲ್ಡೀವ್ಸ್ ಜೊತೆ ಅಮೆರಿಕ ರಕ್ಷಣಾ ಸಹಕಾರ ಒಪ್ಪಂದ:** ವಾಷಿಂಗ್ಟನ್ : ಇತ್ತೀಚಿಗೆ ಅಮೆರಿಕಾವು ಹಿಂದೂ ಮಹಾಸಾಗರದಲ್ಲಿ ಶಾಂತಿ ಹಾಗೂ ಭದ್ರತೆ ದೃಷ್ಟಿಯಿಂದ ಮಾಲ್ಡೀವ್ಸ್ ಜೊತೆ ಅಮೆರಿಕವು ರಕ್ಷಣಾ ಸಹಕಾರ ಒಪ್ಪಂದ ಮಾಡಿಕೊಂಡಿದೆ. ಇಂಡೋ-ಪೆಸಿಫಿಕ್ ಭಾಗದಲ್ಲಿ ಚೀನಾ ರಾಷ್ಟ್ರವು ತನ್ನ ಪ್ರಭಾವವನ್ನು ಹೆಚ್ಚಿಸಲು ಯತ್ನಿಸುತ್ತಿದ್ದು, ಈಗಾಗಲೇ ಅರಬ್ಬಿ ಸಮುದ್ರದಲ್ಲಿ ಪಾಕಿಸ್ತಾನದ ಗ್ವಾದರ್ ಬಂದರನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ. ಅಮೆರಿಕವೂ ಇಂಡೋ-ಪೆಸಿಫಿಕ್ ಭಾಗದಲ್ಲಿ ಚೀನಾದ ಪ್ರಾಭಲ್ಯ ತಪ್ಪಿಸಲು ಹಾಗೂ ತನ್ನ ನಿಯಂತ್ರಣ ಸಾಧಿಸಲು ಈ ಒಪ್ಪಂದ ಮಾಡಿಕೊಂಡಿರುವುದಾಗಿ ವಿಶ್ಲೇಷಿಸಲಾಗುತ್ತಿದೆ.

## 15-09-2020

**ಪ್ರಧಾನಿ ಮೋದಿಯಿಂದ ಬಿಹಾರದಲ್ಲಿ ಎಲ್‌ಪಿಜಿ ಪೈಪ್‌ಲೈನ್ ಯೋಜನೆ ಉದ್ಘಾಟನೆ:** ಪಾಟ್ನಾ : ಇತ್ತೀಚಿಗೆ ಭಾರತದ ಪ್ರಧಾನಿ ಮೋದಿಯವರು ಗುಜರಾತ ಎಲ್‌ಪಿಜಿ ಪೈಪ್‌ಲೈನ್ ಯೋಜನೆ ಮತ್ತು ಬಾಟ್ಲಿಂಗ್ ಸ್ಥಾವರಗಳನ್ನು ಬಿಹಾರದಲ್ಲಿ ಉದ್ಘಾಟಿಸಿದರು. ಈ ಯೋಜನೆ ಅಡಿಯಲ್ಲಿ ಪ್ಯಾರ ದ್ವೀಪ - ಹಲ್ದಿಯಾ - ದುರ್ಗಾಪುರ ನಡುವೆ LPG ಪೈಪ್‌ಲೈನ್ ಸಂಪರ್ಕವೊದಗಿಸಲಿದೆ.


* ಈ ಯೋಜನೆಯನ್ನು ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪ್ (IOC) ಸಂಸ್ಥೆಯು ನಿರ್ಮಿಸಿದೆ.

* 14 ಇಂಚು ವ್ಯಾಸದ ಪೈಪ್‌ಲೈನ್ ಪಶ್ಚಿಮ ಬಂಗಾಳ, ಜಾರ್ಖಂಡ್ ಮತ್ತು ಬಿಹಾರದ ಮೂಲಕ ಹಾದುಹೋಗುತ್ತದೆ. * ಈ ಯೋಜನೆಯಿಂದ ಬಿಹಾರದ ಅಡುಗೆ ಅನಿಲ ಬೇಡಿಕೆಯನ್ನು ಪೂರೈಸಲು ಸಹಾಯವಾಗಲಿದೆ.

**US ಓಪನ್: ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದ ಡೊಮಿನಿಕ್ ಥೀಮ್:** ನ್ಯೂಯಾರ್ಕ್: ಅಮೇರಿಕಾದ ನಿರ್ಜನ ಆರ್ಥರ್ ಆಯಷ್ ಸ್ಟೇಡಿಯಂನಲ್ಲಿ ನಡೆದ US ಓಪನ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಡೊಮಿನಿಕ್ ಥೀಮ್ ಅವರು ಅಲೆಗ್ಸಾಂಡರ್ ಝುರೆವ್ ಅವರನ್ನು ಐದು

ಸೆಟ್‌ಗಳ ಮ್ಯಾರಥಾನ್ ಹೋರಾಟದಲ್ಲಿ ಮಣಿಸುವ ಮೂಲಕ ಯುಎಸ್ ಓಪನ್ ಟೂರ್ನಿಯ ಪುರುಷರ ವಿಭಾಗದ ಸಿಂಗಲ್ಸ್ ಪ್ರಶಸ್ತಿಗೆ ಭಾಜನರಾದರು.
* ಡೊಮಿನಿಕ್ ಥೀಮ್ ಅವರಿಗೆ ವೃತ್ತಿಜೀವನದ ಚೊಚ್ಚಲ ಗ್ರ್ಯಾಂಡ್‌ಸ್ಲಾಂ ಪ್ರಶಸ್ತಿಯಾಗಿದೆ.

**ಎಂಜಿನಿಯರ್ಸ್ ಡೇ : ಸರ್. ಎಂ. ವಿಶ್ವೇಶ್ವರಯ್ಯ ಜನ್ಮದಿನ ಆಚರಣೆ:**




ಬೆಂಗಳೂರು : ಭಾರತ ರತ್ನ ಹಾಗೂ ವಿಶ್ವವಿಖ್ಯಾತ ಎಂಜಿನಿಯರ್ ಆಗಿರುವ ಕರ್ನಾಟಕದ ಹೆಮ್ಮೆ ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜನ್ಮ ದಿನದ ಅಂಗವಾಗಿ ಹಾಗೂ ದೇಶ ಕಟ್ಟುವ ಎಂಜಿನಿಯರ್ ವೃತ್ತಿಗೆ ಗೌರವ ಸೂಚಿಸಲು ಭಾರತದಾದ್ಯಂತ ಸೆಪ್ಟೆಂಬರ್ 15 ರಂದು "ಎಂಜಿನಿಯರ್ಸ್ ಡೇ" ಆಚರಿಸಲಾಗುತ್ತದೆ. ಈ ಮೂಲಕ ಜಾಗತಿಕ ಮಟ್ಟದಲ್ಲೇ ತಮ್ಮ ತಾಂತ್ರಿಕ ಕೌಶಲ್ಯದ ಮೂಲಕ ಹೆಸರಾದ ವಿಶ್ವೇಶ್ವರಯ್ಯ ಅವರಿಗೆ ಗೌರವ ಸಲ್ಲಿಸಲಾಗುತ್ತದೆ.

**ವಿಶ್ವಸಂಸ್ಥೆಯ ಕಮಿಷನ್ ಆನ್ ಸ್ಟೇಟಸ್ ಆಫ್ ವುಮೆನ್ (CSW) ಸದಸ್ಯತ್ವ ಗೆದ್ದ ಭಾರತ:** ವಿಶ್ವಸಂಸ್ಥೆ: ವಿಶ್ವಸಂಸ್ಥೆಯ ಎಕನಾಮಿಕ್ ಆಯಂಡ್ ಸೋಷಿಯಲ್ ಕೌನ್ಸಿಲ್ (ECOSOC)ನ ಕಮಿಷನ್ ಆನ್ ಸ್ಟೇಟಸ್ ಆಫ್ ವುಮೆನ್ (CSW) ಸದಸ್ಯ ರಾಷ್ಟ್ರವಾಗಿ ಭಾರತ ಆಯ್ಕೆಯಾಗಿದೆ. ಭಾರತ, ಚೀನಾ ಮತ್ತು ಅಫ್ಘಾನಿಸ್ತಾನ ಈ ಮೂರು ರಾಷ್ಟ್ರಗಳು ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿದ್ದವು, ಆಫ್ಘನ್ ಮತ್ತು ಭಾರತ ಗೆಲುವು ದಾಖಲಿಸಿ ಸದಸ್ಯ ಸ್ಥಾನ ಪಡೆದವು.
* ಈ ಗೆಲುವಿನ ಮೂಲಕ ಭಾರತವು CSWನ ಸದಸ್ಯ ರಾಷ್ಟ್ರವಾಗಿ 2021ರಿಂದ 2025ರ ವರೆಗೆ ಕಾರ್ಯನಿರ್ವಹಿಸಲಿದೆ. * ಕಮಿಷನ್ ಆನ್ ಸ್ಟೇಟಸ್ ಆಫ್ ವುಮೆನ್ (CSW) : - ಇದು ಒಂದು ಜಾಗತಿಕ ಮಟ್ಟದ ಅಂತರ್‌ಸರ್ಕಾರೀಯ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಪ್ರಮುಖವಾಗಿ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತದೆ. - ಈ ಸಂಸ್ಥೆಯನ್ನು 1946ರ ಜೂನ್ 21ರಂದು ತೆಗೆದುಕೊಂಡ ನಿರ್ಣಯದ ಅನುಸಾರ ಆರಂಭಿಸಲಾಗಿದ್ದು, ವಿಶ್ವಸಂಸ್ಥೆಯ ECOSOCದ 45 ಸದಸ್ಯ ರಾಷ್ಟ್ರಗಳ ತಲಾ ಒಬ್ಬ ಪ್ರತಿನಿಧಿ ಸದಸ್ಯರಾಗಿರುತ್ತಾರೆ.

**ಮೊಘಲ್ ಮ್ಯೂಸಿಯಂಗೆ ಶಿವಾಜಿ ಹೆಸರಿಡಲು ಉತ್ತರ ಪ್ರದೇಶ ಸರ್ಕಾರ ನಿರ್ಧಾರ:** ಲಖನೌ : ಆಗ್ರಾದಲ್ಲಿ ನಿರ್ಮಾಣವಾಗುತ್ತಿರುವ 'ಮೊಘಲ್ ಮ್ಯೂಸಿಯಂ'ಗೆ ಛತ್ರಪತಿ ಶಿವಾಜಿ ಮಹಾರಾಜ್ ಹೆಸರು ಇಡಲು ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶದ ಸರಕಾರ ತೀರ್ಮಾನಿಸಿದೆ. ಮೊಗಲರು ನಮ್ಮ ಮೇಲೆ ದಬ್ಬಾಳಿಕೆ ನಡೆಸಿದ್ದು ಅವರು ನಮ್ಮ ಹಿರೋಗಳಾಗಲು ಸಾಧ್ಯವಿಲ್ಲ ಅಂತೆಯೇ ಮರಾಠ ಸಾಮ್ರಾಟ ಶಿವಾಜಿಯವರ ಹೆಸರು ನಮ್ಮಲ್ಲಿ ರಾಷ್ಟ್ರೀಯತೆ ಮತ್ತು ಸ್ವಾಭಿಮಾನದ ಭಾವನೆಯನ್ನು ಮೂಡಿಸುತ್ತದೆ ಹೀಗಾಗಿ ಮ್ಯೂಸಿಯಂಗೆ ಮೊಗಲ್ ಬದಲು ಶಿವಾಜಿ ಹೆಸರು ಇರಿಸಲು ನಿರ್ಧರಿಸಲಾಗಿದೆ ಎಂದು ಯೋಗಿ ತಿಳಿಸಿದ್ದಾರೆ.

**ಎಲ್ಲಾ ತಳಿಯ ಈರುಳ್ಳಿ ರಫ್ತು ನಿಷೇಧಿಸಿದ ಕೇಂದ್ರ ಸರ್ಕಾರ:** ನವದಹೆಲಿ : ದೇಶದ ಮಹಾರಾಷ್ಟ್ರದ ನಾಶಿಕ್ ಹಾಗೂ ಪ್ರಮುಖ ಈರುಳ್ಳಿ ಬೆಳೆಯುವ ಪ್ರದೇಶದಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಈರುಳ್ಳಿ ಉತ್ಪಾದನೆ ಕುಂಠಿತಗೊಂಡಿದ್ದು, ಇದೆ ಕಾರಣದಿಂದ ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿ ಕೊರತೆ ಕಂಡುಬಂದಿರುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ರಫ್ತಿನ ಮೇಲೆ ನಿಷೇಧ ಹೇರಿದೆ. ಗುಲಾಬಿ ಈರುಳ್ಳಿ, ಆಂಧ್ರದ ಕೃಷ್ಣಾಪುರಂ ಈರುಳ್ಳಿ ಸೇರಿದಂತೆ ದೇಶದಲ್ಲಿ ಬೆಳೆಯುವ ಎಲ್ಲ ತಳಿಯ ಈರುಳ್ಳಿ ರಫ್ತನ್ನು ನಿಷೇಧಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

**ಜಪಾನ್: ನೂತನ ಪ್ರಧಾನಿಯಾಗಿ ಯೊಶಿಹಿಡೆ ಸುಗ ಆಯ್ಕೆ ಸಾಧ್ಯತೆ..!:** ಟೋಕಿಯೊ : ಜಪಾನ ದೇಶದ ಪ್ರಧಾನಿಯಾಯಾಗಿದ್ದ ಶಿಂರೊ ಅಬೆ ಯವರು ಅನಾರೋಗ್ಯದ ಕಾರಣ ತಮ್ಮ ಹುದ್ದೆಗೆ ರಾಜೀನಾಮೆ ನೀಡುತ್ತಿರುವ ಹಿನ್ನಲೆ, ಜಪಾನ್‌ನ ಆಡಳಿತಾರೂಢ ಪಕ್ಷವು ಮುಖ್ಯ ಸಂಪುಟ ಕಾರ್ಯದರ್ಶಿಯಾಗಿರುವ ಯೊಶಿಹಿಡೆ ಸುಗ ಅವರನ್ನು ತನ್ನ ನೂತನ ನಾಯಕನಾಗಿ ಆರಿಸಿದೆ. ಈ ಮೂಲಕ ಶೀಘ್ರದಲ್ಲೇ ಯೊಶಿಹಿಡೆ ಸುಗ ಅವರು ಜಪಾನನ ಪ್ರಧಾನಿಯಾಗಿ ಅಧಿಕಾರವಹಿಸಿಕೊಳ್ಳಲಿದ್ದಾರೆ.

## 16-09-2020

**ವಿಶ್ವಬ್ಯಾಂಕ್ ನ ಕಾರ್ಯಕಾರಿ ನಿರ್ದೇಶಕರಾಗಿ ರಾಜೇಶ್ ಖುಲ್ಲರ್ ಆಯ್ಕೆ:** ನವದೆಹಲಿ: ಅಮೆರಿಕಾದ ವಾಷಿಂಗ್ಟನ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ವಿಶ್ವ ಬ್ಯಾಂಕ್‌ನ ಕಾರ್ಯಕಾರಿ ನಿರ್ದೇಶಕರಾಗಿ (E.D) ರಾಜೇಶ್ ಖುಲ್ಲರ್ ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.
* ಹಿರಿಯ ಐಎಎಸ್ ಅಧಿಕಾರಿಯಾಗಿರುವ ರಾಜೇಶ್ ಖುಲ್ಲರ್ ಅವರು ಹರಿಯಾಣಾದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ರವರ ಪ್ರಧಾನ ಕಾರ್ಯದರ್ಶಿಯಾಗಿ ಖುಲ್ಲರ್ ಕಾರ್ಯನಿರ್ವಹಿಸುತ್ತಿದ್ದಾರೆ.
* ವಿಶ್ವಬ್ಯಾಂಕ್‌ನಲ್ಲಿ ಇವರು ಮೂರು ವರ್ಷಗಾಲ ಅವಧಿಗೆ ಕಾರ್ಯಕಾರಿ ನಿರ್ದೇಶಕರಾಗಿ ಸೇವೆ ಸಲ್ಲಿಸಲಿದ್ದಾರೆ.

**ವಿಧಾನಪರಿಷತ್ ರದ್ದುಗೊಳಿಸಲು ಕೇಂದ್ರಕ್ಕೆ ಮನವಿ ಸಲ್ಲಿಸಿದ ಆಂಧ್ರ ಸರ್ಕಾರ:** ಅಮರಾವತಿ: ಆಂಧ್ರಪ್ರದೇಶದಲ್ಲಿ ವಿಧಾನಪರಿಷತನ್ನು ರದ್ದುಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಆಂಧ್ರಪ್ರದೇಶ ಸರ್ಕಾರ ಮನವಿ ಮಾಡಿದೆ. ಪ್ರಸ್ತುತ ಆಂಧ್ರ ಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವ YRS ಕಾಂಗ್ರೆಸ್ ಪಕ್ಷದ ಎಲ್ಲ ಸಂಸದರು ಈ ಕುರಿತ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಎಪಿ ದಿಶಾ ಕ್ರಿಮಿನಲ್ ಲಾ (ಎಪಿ ಅಮೆಂಡಮೆಂಟ್) ಬಿಲ್ ಅನ್ನು ಪರಿಗಣಿಸಿ ರಾಷ್ಟ್ರಪತಿಯವರ ಅನುಮೋದನೆ ದೊರಕಲು ಹಾಗೂ ಅದನ್ನು ಕಾನೂನು ಮಾಡಲು ಅನುವುಮಾಡಿಕೊಡಲು ಸಹಕರಿಸಬೇಕು ಎಂದೂ ಕೇಂದ್ರಕ್ಕೆ ಸಲ್ಲಿಸಿದ ಮನವಿಯಲ್ಲಿ ಪ್ರಸ್ತಾಪಿಸಿದ್ದಾರೆ.

* ಆಂಧ್ರಪ್ರದೇಶ ವಿಧಾನ ಪರಿಷತ್ ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ಶಾಸನಾತ್ಮಕ ನಿರ್ಣಯವನ್ನು ಜನವರಿ 27ರಂದು ತೆಗೆದುಕೊಂಡಿದ್ದು, ಭಾರತದ ಸಂವಿಧಾನದ ಪ್ರಕಾರ ವಿಧಾನಪರಿಷತ್ ರದ್ದುಗೊಳಿಸಲು ಕೇಂದ್ರ ಸರ್ಕಾರದ ಅನುಮತಿ ಕಡ್ಡಾಯವಾಗಿರುತ್ತದೆ.

**ಟ್ರಂಪ್ ನೇತೃತ್ವದಲ್ಲಿ ಶ್ವೇತ ಭವನದಲ್ಲಿ ಯುಎಇ, ಬ್ರಹೇನ್, ಇಸ್ರೇಲ್ ಶಾಂತಿ ಒಪ್ಪಂದ:**



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೇತೃತ್ವದಲ್ಲಿ ಅಮೆರಿಕಾದ ಅಧಿಕೃತ ಆಡಳಿತ ಕಚೇರಿ ಶ್ವೇತ ಭವನದಲ್ಲಿ ಇಸ್ರೇಲ್, ಬಹ್ರೇನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ನಡುವೆ ಶಾಂತಿ ಒಪ್ಪಂದಕ್ಕೆ ಚಾಲನೆ ನೀಡಲಾಯಿತು. ಇಸ್ರೇಲ್, ಯುಎಇ ಹಾಗೂ ಬಹ್ರೇನ್ ರಾಷ್ಟ್ರಗಳು ಪರಸ್ಪರ ಅಭಯ ರಾಷ್ಟ್ರಗಳಲ್ಲಿ ರಾಜತಾಂತ್ರಿಕ ಕಚೇರಿಗಳನ್ನು ತೆರೆದು, ಪರಸ್ಪರ ರಾಯಭಾರಿಗಳು ನೇಮಿಸಿ, ಜೊತೆಯಾಗಿ ಕಾರ್ಯಾಚರಣೆ ನಡೆಸಲಿದ್ದು, ಇವೆಲ್ಲ ರಾಷ್ಟ್ರಗಳು ಇನ್ನು ಸ್ನೇಹಿತರು' ಎಂದು ಶ್ವೇತ ಭವನ ಟ್ವೀಟ್ ಮೂಲಕ ಮಾಹಿತಿ ನೀಡಿದೆ. ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು, ಬಹ್ರೇನ್ ವಿದೇಶಾಂಗ ಸಚಿವ ಅಬ್ದುಲ್ಲಾತಿಫ್ ಬಿನ್ ರಷೀದ್ ಅಲ್ ಝುಯಾದಿ ಹಾಗೂ ಯುಎಐ ದೊರೆ ಮೊಹಮ್ಮದ್ ಬಿನ್ ಝೈದ್ ಅಬ್ರಹಾಂ ಪರಸ್ಪರ ಮೂರು ರಾಷ್ಟ್ರಗಳ ಅಧಿಕೃತ ಭಾಷೆಗಳಾದ ಇಂಗ್ಲಿಷ್, ಅರಾಬಿಕ್ ಹಾಗೂ ಹೀಬ್ರೂನಲ್ಲಿದ್ದ ಒಪ್ಪಂದಕ್ಕೆ ಸಹಿ ಹಾಕಿದರು.

**ಕರ್ನಾಟಕದ ಮೊದಲ ಕಿಸಾನ್ ರೈಲು ಶೀಘ್ರ ಸಂಚಾರ ಆರಂಭ:** ಬೆಂಗಳೂರು : ಕರ್ನಾಟಕದ ಮೊಟ್ಟ ಮೊದಲ ಕಿಸಾನ್ ರೈಲು ಇದೇ ಸೆಪ್ಟೆಂಬರ್ 19 ರಿಂದ ಸಂಚಾರ ಆರಂಭಿಸುವ ನಿರೀಕ್ಷೆ ಇದೆ. ಭಾರತ ಸರ್ಕಾರವು 2020-21 ರ ಆಯವ್ಯಯದಲ್ಲಿ ತಿಳಿಸಿರುವಂತೆ ಈ ರೈಲಿನಲ್ಲಿ ಹಾಲು, ಮಾಂಸ, ಮೀನು ಸೇರಿ ಬೇಗ ಕೆಡಬಹುದಾಗ ಆಹಾರ ಉತ್ಪನ್ನಗಳನ್ನು ದೇಶದ ಮೂಲೆಗಳಿಗೆ ಬೇಗನೆ ತಲುಪುವಂತೆ ಮಾಡಲು ಈ ರೈಲನ್ನು ಘೋಷಿಸಿತ್ತು, ಅದರಂತೆ ಭಾರತೀಯ ರೈಲ್ವೆಯು ಸಾರ್ವಜನಿಕ ಮತ್ತು ಖಾಸಗಿ ಸಹಯೋಗ ದೊಂದಿಗೆ ಕಿಸಾನ್ ರೈಲು ಆರಂಭಿಸಿದೆ.

* ರಾಜ್ಯದ ಮೊದಲ ಕಿಸಾನ್ ರೈಲು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ರೈಲ್ವೇ ನಿಲ್ದಾಣ ಮತ್ತು ನಿಜಾಮುದ್ದೀನ್ ನಡುವೆ ಸಂಚರಿಸಲಿದೆ.
* ಈ ರೈಲು ಮೈಸೂರು, ಹಾಸನ, ಅರಸೀಕೆರೆ, ದಾವಣಗೆರೆ, ಹುಬ್ಬಳ್ಳಿ, ಲೋಂಡ,ಬೆಳಗಾವಿ, ಮೀರಜ್, ಪುಣೆ,ಮನ್ಮಾಡ್ , ಭೂಸಾವಲ್, ಇಟಾರ್ಸಿ, ಭೂಪಾಲ್, ಝಾನ್ಸಿ, ಆಗ್ರಾ ದಂಡು ಮತ್ತು ಮಥುರಗಳಲ್ಲಿ ನಿಲುಗಡೆ ಹೊಂದಿದೆ.
* ಕಿಸಾನ ರೈಲಿನಲ್ಲಿ ಪ್ರಯಾಣಿಕರ ಸಂಚಾರಕ್ಕೆ ಅವಕಾಶವಿರುವದಿಲ್ಲ.

**ವಿಶ್ವದ ಅತಿ ಉದ್ದದ ಮನಾಲಿ-ಲೇಹ್ ಹೆದ್ದಾರಿಯ 'ಅಟಲ್ ಸುರಂಗ' ಸಂಚಾರಕ್ಕೆ ಲಭ್ಯ:** ಲೇಹ್ : 10,000 ಅಡಿಗಳಿಗಿಂತ ಹೆಚ್ಚು ಉದ್ದ ಹೊಂದುವ ಮೂಲಕ ವಿಶ್ವದ ಅತಿ ಉದ್ದದ ಹೆದ್ದಾರಿ ಸುರಂಗ ಮಾರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾದ ಅಟಲ್ ಟನೆಲ್ ಸತತ 10 ವರ್ಷಗಳ ಕಾಮಗಾರಿಯ ಬಳಿಕ ಸಾರ್ವಜನಿಕರಿಗೆ ಮುಕ್ತವಾಗಲಿದೆ.

* ಈ ಸುರಂಗವು ಮನಾಲಿ ಮತ್ತು ಲೇಹ್ ಗಳನ್ನೂ ಸಂಪರ್ಕಿಸಲಿದೆ.
* ಸುರಂಗದ ಒಟ್ಟು ಉದ್ದ 9.2 ಕಿ.ಮೀ
* ಈ ಸುರಂಗವು ಮನಾಲಿ ಮತ್ತು ಲೇಹ್ ನಡುವಿನ ಅಂತರವನ್ನು 46 ಕಿ.ಮೀ ಕಡಿಮೆ ಮಾಡುತ್ತದೆ
* ಸುರಂಗದೊಳಗೆ ಪ್ರತಿ 500 ಮೀಟರ್‌ನಲ್ಲಿ ತುರ್ತು ನಿರ್ಗಮನ ಸುರಂಗಗಳನ್ನು ನಿರ್ಮಿಸಲಾಗಿದೆ.

## 17-09-2020

**ಕರ್ನಾಟಕ ವಿವಿ ವಿದ್ಯಾರ್ಥಿಯಿಂದ ಪ್ಲಾಸ್ಟಿಕ್ ತಿನ್ನುವ ಹುಳು ಪತ್ತೆ:** ಧಾರವಾಡ : ಮಾನವನ ದಿನನಿತ್ಯದ ಬಳಕೆಯಲ್ಲಿ ಪ್ಲಾಸ್ಟಿಕ್ ಅವಿಭಾಜ್ಯ ಅಂಗವಾಗಿದೆ ಅದರ ಇದರ ತಾಜ್ಯ ನಿಯಂತ್ರಣ ಹಾಗೂ ಪರಿಸರ ಸಂರಕ್ಷಣೆಗಾಗಿ ವಿಶ್ವದಾದ್ಯಂತ ಹಲವು ಸಂಶೋದನೆಗಳು ನಡೆಯುತ್ತಿರುವ ಬೆನ್ನಲ್ಲೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ವಿದ್ಯಾರ್ಥಿ ಶೀತಲ್ ಕಸ್ತಿಯವರು ಪ್ಲಾಸ್ಟಿಕ್ ತಿನ್ನುವ ಹುಳವನ್ನು ಪತ್ತೆ ಮಾಡಿದ್ದಾರೆ. ವಿದ್ಯಾರ್ಥಿ ಶೀತಲ್ ಕಸ್ತಿ ಮಾರ್ಗದರ್ಶಕರಾದ ಡಾ.ಸಿ.ಟಿ ಶಿವಶರಣ ಅವರ ಮಾರ್ಗದರ್ಶನದಲ್ಲಿ ಈ ಹುಳುವನ್ನು ಪತ್ತೆಹಚ್ಚಿದ್ದು, ಗೋಧಿ, ಜೋಳದ ಚೀಲದಲ್ಲಿ ಕಂಡುಬರುವ ಬಾಲಹುಳು ಕಡಿಮೆ ಸಾಂದ್ರತೆಯ ಪ್ಲಾಸ್ಟಿಕ್

ತಿಂದಿರುವದನ್ನು ಪತ್ತೆಹಚ್ಚಿದ್ದಾರೆ. ಅಲ್ಲದೆ ಈ ಹುಳುಗಳ ಮಲವು ನಿಸರ್ಗದಲ್ಲಿ ಕರಗಬಲ್ಲ ಅಂಶಗಳನ್ನು ಹೊಂದಿದೆ.

**ಖ್ಯಾತ ಇತಿಹಾಸ ವಿದ್ವಾಂಸಕಿ ಕಪಿಲಾ ವಾತ್ಸಾಯನ ನಿಧನ:** ನವದೆಹಲಿ: ಭಾರತದ ಖ್ಯಾತ ಇತಿಹಾಸ ತಜ್ಞೆಯಾದ ಕಪಿಲಾ ವಾತ್ಸಾಯನ ಅವರು ತಮ್ಮ 91 ನೇ ವಯಸ್ಸಿನಲ್ಲಿ ನಿಧನರಾದರು. ಇವರು ಇತಿಹಾಸ, ಕಲೆ, ವಾಸ್ತುಶಿಲ್ಪ ಮತ್ತು ಭಾರತೀಯ ಶಾಸ್ತ್ರೀಯ ನೃತ್ಯದ ಪ್ರಸಿದ್ಧ ವಿದ್ವಾಂಸರಾಗಿದ್ದರು. ಇಂಡಿಯಾ ಇಂಟರ್ನ್ಯಾಷನಲ್ ಸೆಂಟರ್ ಟ್ರಸ್ಟ್ ನಲ್ಲಿ ಕಪಿಲಾ ವಾತ್ಸಾಯನ್ ಆಜೀವ ಪರ್ಯಂತ ಸದಸ್ಯತ್ವ ಹೊಂದಿದ್ದರು.ಅಲ್ಲದೆ ಐಐಸಿಯ ಏಷ್ಯಾ ಪ್ರಾಜೆಕ್ಟ್ ನಲ್ಲೂ ಸದಸ್ಯರಾಗಿದ್ದರು. 2011ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದರು. ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಸ್ಥಾಪಕ ನಿರ್ದೇಶಕಿ ಕೂಡ ಆಗಿದ್ದರು. ಇವರು 'ದ ಸ್ಕ್ವೇರ್ ಅಂಡ್ ದ ಸರ್ಕಲ್ ಆಫ್ ಇಂಡಿಯನ್ ಆರ್ಟ್ಸ್' ಸೇರಿ ಹಲವು ಕೃತಿಗಳನ್ನು ರಚಿಸಿದ್ದಾರೆ.

**ಐತಿಹಾಸಿಕ 75ನೇ ವಿಶ್ವಸಂಸ್ಥೆಯ ಮಹಾ ಅಧಿವೇಶನ ಆರಂಭ:** ವಿಶ್ವಸಂಸ್ಥೆ: ಕೊರೊನಾ ಸೋಂಕಿನ ಭೀತಿಯ ನಡುವೆಯೂ ಐತಿಹಾಸಿಕ 75ನೇ ವಿಶ್ವಸಂಸ್ಥೆಯ ಮಹಾ ಅಧಿವೇಶನ ಆರಂಭಗೊಂಡಿದೆ. ಪ್ರತಿ ಬಾರಿ ಅಧಿವೇಶನಕ್ಕೆ ಹಲವು ರಾಷ್ಟ್ರಗಳ ನಾಯಕರುಗಳು ಹಾಗೂ ಅಧಿಕಾರಿಗಳು ಸಾಕ್ಷಿಯಾಗುತ್ತಿದ್ದರು, ಆದರೆ ಈ ಬಾರಿ ಕೋರೋಣ ಸೋಂಕು ಹರಡುವ ಸಾಧ್ಯತೆ ಹಿನ್ನಲೆ, ವಿಶ್ವಸಂಸ್ಥೆಯ ಇತಿಹಾಸದಲ್ಲಿ ಮೊದಲ ಬಾರಿಗೆ ವಿವಿಧ ರಾಷ್ಟ್ರಗಳ ನಾಯಕರು ವರ್ಚುವಲ್ ಆಗಿ ಈ ಅಧಿವೇಶನದಲ್ಲಿ ಬಾಗಿಯಾಗುತ್ತಿದ್ದಾರೆ.

* 75ನೇ ವಿಶ್ವಸಂಸ್ಥೆಯ ಮಹಾ ಅಧಿವೇಶನದ ಅಧ್ಯಕ್ಷ ಸ್ಥಾನವನ್ನು ಟರ್ಕಿಷ್ ರಾಯಭಾರಿ ವೋಲ್ಕಾನ್ ಬೋಜ್ಕಿರ್ ಅವರು ವಹಿಸಿಕೊಂಡಿದ್ದಾರೆ.
* ಕಳೆದ ಬಾರಿ ನಡೆದ ಅಧಿವೇಶನದ ಅಧ್ಯಕ್ಷತೆಯನ್ನು ನೈಜೀರಿಯಾದ ತಿಜ್ಜಾನಿ ಮೊಹಮ್ಮದ್ ಬಂಡೆ ಅವರು ವಹಿಸಿಕೊಂಡಿದ್ದರು.
* ವಿಶ್ವಸಂಸ್ಥೆಯ 75 ನೇ ವಾರ್ಷಿಕೋತ್ಸವದ ನೆನಪಿನ ಸಾಮಾನ್ಯ ಸಭೆ ಸೆಪ್ಟೆಂಬರ್ 21 ರಂದು ನಡೆಯಲಿದೆ.
* ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 26 ರಂದು ವಿಡಿಯೊ ರೆಕಾರ್ಡ್ ಮೂಲಕ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವ ಸಾಧ್ಯತೆಯಿದೆ.

**2021 ರ ಜನಗಣತಿ ಮುಂದೂಡಿದ ಕೇಂದ್ರ ಸರ್ಕಾರ:** ನವದೆಹಲಿ: ದೇಶದಲ್ಲಿ ವ್ಯಾಪಿಸಿರುವ ಕರೋನ ವೈರಸ್ ಹಿನ್ನಲೆ ಏಪ್ರಿಲ್ 1 ರಿಂದ ಸೆಪ್ಟೆಂಬರ್ 30 ರವರೆಗೆ ನಡೆಯಬೇಕಿದ್ದ ಮೊದಲ ಹಂತದ ಜನಗಣತಿ ಕಾರ್ಯಾಚರಣೆಯನ್ನು ಮುಂದೂಡಿ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ. ರಾಜ್ಯಸಭೆಯ ಪ್ರಶ್ನೋತ್ತರ ವೇಳೆ ಲಿಖಿತ ಉತ್ತರದಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ್ ರಾಯ್ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ.

**ರಷ್ಯಾದಿಂದ ಭಾರತಕ್ಕೆ 100 ಮಿಲಿಯನ್ ಡೋಸ್ 'ಸ್ಪುಟ್ನಿಕ್-ವಿ' ಕೊರೋನಾ ಲಸಿಕೆ ಪೂರೈಕೆ:**




ಮಾಸ್ಕೋ: ಭಾರತದ ದೇಶದ ಪ್ರಮುಖ ಔಷಧ ತಯಾರಿಕಾ ಕಂಪನಿ ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬೊರೇಟರಿಯು ವಿಶ್ವದ ಮೊದಲ ನೋಂದಾಯಿತ ಕೋವಿಡ್ ಲಸಿಕೆ 'ಸ್ಪುಟ್ನಿಕ್-V' ಅನ್ನು ಭಾರತದಲ್ಲಿ ಪರೀಕ್ಷೆಗೆ ಒಳಪಡಿಸಲು ಮತ್ತು ಮಾರಾಟ ಮಾಡಲು ರಷ್ಯಾ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಪ್ರಕಾರ, ರೆಡ್ಡೀಸ್ ಲ್ಯಾಬೊರೇಟರಿಗೆ ಅಂದಾಜು 10 ಕೋಟಿ ಡೋಸ್‌ಗಳಷ್ಟು 'ಸ್ಪುಟ್ನಿಕ್-ವಿ' ಲಸಿಕೆ ಆಮದಾಗಲಿದೆ. ಈ ಲಸಿಕೆಯನ್ನು ಭಾರತದಲ್ಲಿ ಮೂರು ಹಂತದಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಿದ್ದು, ಈ ಪರೀಕ್ಷೆಯಲ್ಲಿ ಯಶಸ್ಸು ಕಂಡುಬಂದರೆ ಮಾತ್ರ ರಷ್ಯಾದ ಲಸಿಕೆಯನ್ನು ಲ್ಯಾಬ್ ಮಾರಾಟ ಮಾಡಲಿದೆ.

**ಕೋ-ಆಪರೇಟೀವ್ ಬ್ಯಾಂಕ್ ಗಳನ್ನು RBI ಮೇಲ್ವಿಚಾರಣೆ ವ್ಯಾಪ್ತಿಗೆ ತರುವ ಮಸೂದೆಗೆ ಅಂಗೀಕಾರ:** ನವದೆಹಲಿ: ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೋ-ಆಪರೇಟೀವ್ ಬ್ಯಾಂಕ್ ಗಳಲ್ಲಿ ಠೇವಣಿದಾರರ ಭದ್ರತೆಗಾಗಿ ಕೇಂದ್ರ ಸರ್ಕಾರವು "ಬ್ಯಾಂಕ್ ನಿಯಂತ್ರಣ ಕಾಯ್ದೆ ತಿದ್ದುಪಡಿ ಮಸೂದೆ"ಗೆ ಲೋಕಸಭೆಯಲ್ಲಿ ಅಂಗೀಕರಿಸಿದೆ. ಈ ತಿದ್ದುಪಡಿ ಮಸೂದೆಯ ಮೂಲಕ ಕೋ-ಆಪರೇಟೀವ್ ಬ್ಯಾಂಕ್ ಗಳನ್ನು RBI ನ ಮೇಲ್ವಿಚಾರಣೆ ವ್ಯಾಪ್ತಿಗೆ ತರುವುದು ಕಾಯ್ದೆಯ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಕೋ-ಆಪರೇಟೀವ್ ಬ್ಯಾಂಕ್ ಗಳ ಆಡಳಿತ ಹಾಗೂ ಠೇವಣಿದಾರರ ಹಣವನ್ನು ರಕ್ಷಣೆ ಈ ಕಾಯ್ದೆಯ ಉದ್ದೇಶವಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

**ನೂತನ ಸಂಸತ್ ಕಟ್ಟಡ ನಿರ್ಮಾಣ ಮಾಡಲಿರುವ ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್:** ನವದೆಹಲಿ : ಕೇಂದ್ರ ವಿಸ್ಟಾ ಪುನರಾಭಿವೃದ್ಧಿ ಯೋಜನೆಯಡಿ ಹೊಸ ಸಂಸತ್ತಿನ ಕಟ್ಟಡವನ್ನು ಪ್ರಸ್ತುತ ಈಗಿರುವ ಕಟ್ಟಡಕ್ಕೆ ಹತ್ತಿರದಲ್ಲಿ ನಿರ್ಮಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದ್ದು, ಈ ಕಟ್ಟಡ ನಿರ್ಮಾಣದ ಯೋಜನೆಯನ್ನು ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸುಮಾರು 861.90 ಕೋಟಿ ವೆಚ್ಚದಲ್ಲಿ ಪಡೆದುಕೊಂಡಿರುವದಾಗಿ ತಿಳಿದುಬಂದಿದೆ. ಇನ್ನು 21 ತಿಂಗಳಲ್ಲಿ ಅವಧಿಯಲ್ಲಿ ಕಟ್ಟಡ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# 18-09-2020

**16th ಸೆಪ್ಟೆಂಬರ್ ವಿಶ್ವ ಓಜೋನ್ ದಿನ:** ಪ್ರತಿ ವರ್ಷ ಸೆಪ್ಟೆಂಬರ್ 16 ನೇ ತಾರೀಕಿನಂದು ವಿಶ್ವದಾದ್ಯಂತ ವಿಶ್ವ ಓಜೋನ್ ದಿನವಾಗಿ ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಒಝೋನ್ ಪದರದ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ದಿನವೆಂದು ಆಚರಿಸುತ್ತಾ ಬಂದಿದೆ. 2020 ನೇ ಸಾಲಿನ ವಿಶ್ವ ಓಜೋನ್ ದಿನದ ಘೋಷವಾಕ್ಯ : "ಜೀವನಕ್ಕಾಗಿ ಒಝೋನ್" ("Ozone for life")

**ಚಿತ್ರನಟ "ವಿಷ್ಣುವರ್ಧನ್ ಅಂಚೆ ಲಕೋಟೆ' ಬಿಡುಗಡೆ:** ಬೆಂಗಳೂರು: ಕನ್ನಡ ಚಿತ್ರರಂಗದ ದಂತಕತೆಯೆನಿಸಿರುವ ಹಿರಿಯ ಚಿತ್ರ ನಟ ಡಾ| ವಿಷ್ಣುವರ್ಧನ್ ಅವರ 70ನೇ ವರ್ಷದ ಜನ್ಮದಿನಾಚರಣೆ ಇದೆ ಸೆಪ್ಟೆಂಬರ್ 18 ರಂದು ಆಚರಿಸಲಾಗುತ್ತಿದ್ದು, ಈ ದಿನದ ಸ್ಮರಣಾರ್ಥ ಭಾರತೀಯ ಅಂಚೆ ಇಲಾಖೆಯು "ವಿಶೇಷ ಅಂಚೆ ಲಕೋಟೆ"ಯನ್ನು ಬಿಡುಗಡೆಗೊಲಿಸಲಿದೆ. ನಟ ವಿಷ್ಣುವರ್ಧನ್ ಅವರು ಕನ್ನಡ ಚಿತ್ರೋದ್ಯಮಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿ ಹಾಗೂ ಭಾರತೀಯ ಚಿತ್ರರಂಗ 100 ವರ್ಷ ಪೂರೈಸಿದ ಅಂಗವಾಗಿ ಭಾರತೀಯ ಅಂಚೆ ಇಲಾಖೆ 2013ರಲ್ಲಿ ವಿಷ್ಣುವರ್ಧನ್ ಅವರ "ವಿಶೇಷ ಅಂಚೆ ಚೀಟಿ'ಯನ್ನು ಬಿಡುಗಡೆಗೊಳಿಸಿಟ್ಟು, ಇದೀಗ ಮತ್ತೆಅವರ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆಗೊಳಿಸುತ್ತಿದೆ

**ಮಾನವ ಬಂಡವಾಳ ಸೂಚ್ಯಂಕದ ವಾರ್ಷಿಕ ಪಟ್ಟಿ ಪ್ರಕಟ: ಭಾರತಕ್ಕೆ 116ನೇ ಸ್ಥಾನ:** ವಾಷಿಂಗ್ಟನ್: ವಿಶ್ವ ಬ್ಯಾಂಕ್‌ನ ಮಾನವ ಬಂಡವಾಳ ಸೂಚ್ಯಂಕದ ವಾರ್ಷಿಕ ಪಟ್ಟಿ ಪ್ರಕಟಗೊಂಡಿದ್ದು, ಈ ಪಟ್ಟಿಯಲ್ಲಿ ಭಾರತವು ಈ ಬಾರಿ 116ನೇ ಸ್ಥಾನ ಪಡೆದಿದೆ. ವಿಶ್ವ ಬ್ಯಾಂಕ್‌ನ ಮಾನವ ಬಂಡವಾಳ ಸೂಚ್ಯಂಕದ ಪಟ್ಟಿಯು ಒಟ್ಟು 174 ದೇಶಗಳಲ್ಲಿನ ಆರೋಗ್ಯ, ಶಿಕ್ಷಣದ ಮಾಹಿತಿಯ ದತ್ತಾಂಶವನ್ನು ಆದರಿಸಿ ಈ ಪಟ್ಟಿ ಬಿಡುಗಡೆ ಮಾಡಲಾಗಿದೆ.

**ಜಾಗತಿಕ ಸ್ಮಾರ್ಟ್ ಸಿಟಿ ಸೂಚ್ಯಂಕ ಪಟ್ಟಿ (Smart City Index) ಪ್ರಕಟ:**



ನವದೆಹಲಿ : ಅಭಿವೃದ್ಧಿ ವ್ಯವಸ್ಥಾಪನಾ ಸಂಸ್ಥೆ (ಐಎಂಡಿ) ಮತ್ತು ಸಿಂಗಪುರ ತಂತ್ರಜ್ಞಾನ ಮತ್ತು ವಿನ್ಯಾಸ ವಿಶ್ವವಿದ್ಯಾಲಯವು (ಎಸ್‌ಯುಟಿಡಿ) 2020ರ 'ಜಾಗತಿಕ ಸ್ಮಾರ್ಟ್ ಸಿಟಿ ಸೂಚ್ಯಂಕ' (Smart City Index) ವನ್ನು ಪ್ರಕಟಿಸಿದ್ದು, ಈ ಸೂಚ್ಯಂಕದಲ್ಲಿ ಭಾರತದ ನಗರಗಳಾದ ನವದೆಹಲಿ, ಮುಂಬೈ, ಹೈದರಾಬಾದ್ ಮತ್ತು ಬೆಂಗಳೂರು ಕಳೆದ ಬಾರಿಗಿಂತ ತೀವ್ರ ಕುಸಿತ ಕಂಡಿವೆ. ಸಿಂಗಪುರ ಮೊದಲ ಸ್ಥಾನ ಪಡೆದಿದೆ. 'ಜಾಗತಿಕ ಸ್ಮಾರ್ಟ್ ಸಿಟಿ ಸೂಚ್ಯಂಕ' ಪ್ರಕಾರ ಭಾರತದ ನಗರಗಳ ಪೈಕಿ ಕ್ರಮವಾಗಿ ಹೈದರಾಬಾದ್ (85), ನವದೆಹಲಿ (86), ಮುಂಬೈ (93), ಬೆಂಗಳೂರು (95) ಮೊದಲ ನಾಲ್ಕು ಸ್ಥಾನ ಪಡೆದಿವೆ. ಇನ್ನು ಸೂಚ್ಯಂಕದಲ್ಲಿ ಸಿಂಗಪುರ, ಹೆಲ್ಸಿಂಕಿ, ಆಕ್ಲೆಂಡ್, ಒಸ್ಲೊ, ಕೊಪನ್‌ಹೇಗನ್, ಜಿನೇವಾ, ತೈಪೆ, ಆಯಮ್‌ಸ್ಟರ್‌ಡ್ಯಾಂ ಮತ್ತು ನ್ಯೂಯಾರ್ಕ್ ನಗರಗಳು ಕ್ರಮವಾಗಿ ಮೊದಲ ಹತ್ತು ಸ್ಥಾನಗಳಲ್ಲಿವೆ. * ಒಟ್ಟು 109 ನಗರಗಳು ಸೂಚ್ಯಂಕದಲ್ಲಿ ಸ್ಥಾನ ಪಡೆದಿದ್ದು, ಪ್ರತಿ ನಗರದ 120 ಪ್ರದೇಶಗಳ ನಿವಾಸಿಗಳ ಜೀವನಮಟ್ಟ ಆಧಾರಿಸಿ ಸೂಚ್ಯಂಕ ಪ್ರಕಟಿಸಲಾಗಿದೆ.

**ಐತಿಹಾಸಿಕ ಕೋಸಿ ನದಿ ರೈಲು ಸೇತುವೆ ಉದ್ಘಾಟಿಸಿದ ಪ್ರಧಾನಿ ಮೋದಿ:** ನವದೆಹಲಿ: ಇತ್ತೀಚಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಸಭೆಯ ಮೂಲಕ ಐತಿಹಾಸಿಕ ಕೋಸಿ ನದಿ ರೈಲು ಮಹಾ ಸೇತುವೆಯನ್ನು ಉದ್ಘಾಟಿಸಿದರು. ಇದೆ ಸಂದರ್ಭದಲ್ಲಿ ಬಿಹಾರದ 12 ರೈಲು ಯೋಜನೆಗಳನ್ನು ಉದ್ಘಾಟಿಸಿದರು. ಈ ಯೋಜನೆಗೆ 2003-04ರಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ನೀಡಲಾಗಿತ್ತು, ಸೇತುವೆಯು ಒಟ್ಟು 1.9 ಕಿಲೋ ಮೀಟರ್ ಉದ್ದ ಹೊಂದಿದ್ದು, ಯೋಜನೆಗಾಗಿ 516 ಕೋಟಿ ರೂ ಅನುದಾನ ಬಳಕೆ ಮಾಡಲಾಗಿದೆ.

**ರಾಷ್ಟ್ರಪತಿಗಳಿಗೆ ರಾಜೀನಾಮೆ ಸಲ್ಲಿಸಿದ ಕೇಂದ್ರ ಸಚಿವೆ ಹರ್ಸಿಮ್ರತ್ ಕೌರ್ ಬಾದಲ್:** ನವದೆಹಲಿ : ಇತ್ತೀಚಿಗೆ ಲೋಕಸಭೆಯಲ್ಲಿ ಅಂಗೀಕರಿಸಿದ ಕೃಷಿ ಸಂಬಂಧಿತ ಮಸೂದೆಗಳಿಗೆ ಕೇಂದ್ರ ಸಚಿವೆ ಹರ್ಸಿಮ್ರತ್ ಕೌರ್ ಬಾದಲ್ ಅವರು ವಿರೋಧ ವ್ಯಕ್ತಪಡಿಸಿ ಕೇಂದ್ರ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದ್ದಾರೆ. ಅಲ್ಲದೆ ರೈತ ವಿರೋಧಿ ಸುಗ್ರೀವಾಜ್ಞೆ ಮತ್ತು ಶಾಸನವನ್ನು ವಿರೋಧಿಸಿ ನಾನು ಈ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಈ ಕುರಿತು ಹೆಮ್ಮೆ ಪಡುತ್ತೇನೆ. ಹಾಗೂ ರೈತರ ಸಮಸ್ಯೆಗಳನ್ನು ಪರಿಹರಿಸದೆ ಕೃಷಿ ಕ್ಷೇತ್ರದ ಮಸೂದೆಗಳನ್ನು ತಂದ ಸರ್ಕಾರದ ಭಾಗವಾಗಲು ನಾನು ಇಚ್ಛೆಪಡುವದಿಲ್ಲ ಎಂದು ಅವರು ತಿಳಿಸಿದ್ದಾರೆ. ಇನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಯಂತೆ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ಅಕಾಲಿ ದಳದ ಸಂಸದೆ ಮತ್ತು ಕೇಂದ್ರ ಸಚಿವೆ ಹರ್ಸಿಮ್ರತ್ ಕೌರ್ ಬಾದಲ್ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

**ಪ್ರಾದೇಶಿಕ ಭಾಷೆಗಳಿಗಿಲ್ಲ 'ಅಧಿಕೃತ ಭಾಷೆ' ಗೌರವ: ಕೇಂದ್ರ ಸರ್ಕಾರ:** ನವದೆಹಲಿ: ಪ್ರಾದೇಶಿಕ ಭಾಷೆಗಳಿಗೆ 'ಅಧಿಕೃತ ಭಾಷೆ'ಯ ಸ್ಥಾನಮಾನ ನೀಡುವ ಪ್ರಸ್ತಾವ ತನ್ನ ಮುಂದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಪ್ರಸ್ತುತ ಹಿಂದಿ ಮತ್ತು ಇಂಗ್ಲಿಷ್ ಸರ್ಕಾರದ ಅಧಿಕೃತ ಭಾಷೆಗಳಾಗಿದ್ದು, ಆ ಪಟ್ಟಿಗೆ ಯಾವುದೇ ಪ್ರಾದೇಶಿಕ ಭಾಷೆಗಳನ್ನು ಸೇರಿಸುವ ಯೋಜನೆಯು ಇಲ್ಲ, ಹಾಗೂ 'ಅಧಿಕೃತ ಭಾಷಾ ಕಾಯ್ದೆ'ಗೆ ತಿದ್ದುಪಡಿ ಮಾಡಬಹುದಾದ ಯಾವುದೇ ಪ್ರಸ್ತಾವವೂ ಸರ್ಕಾರದ ಮುಂದಿಲ್ಲ ಎಂದು ಈ

ಕುರಿತು ಪ್ರಶ್ನಿಸಿದ್ದ ತಮಿಳುನಾಡಿನ ಎಂಡಿಎಂಕೆ ಸಂಸದ ವೈಕೊ ಅವರ ಪ್ರಶ್ನೆಗೆ ಇತ್ತೀಚಿಗೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ.

## 19-09-2020

**ಆರ್‌ಸಿಬಿ ನೂತನ ಅಧ್ಯಕ್ಷರಾಗಿ ಆನಂದ್ ಕೃಪಾಲು ಆಯ್ಕೆ:** ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (IPL)ನಲ್ಲಿ ಕರ್ನಾಟಕ ಪ್ರತಿನಿಧಿಸುವ ತಂಡವಾದ ಫ್ರಾಂಚೈಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ನೂತನ ಅಧ್ಯಕ್ಷರಾಗಿ ಆನಂದ್ ಕೃಪಾಲು ಆಯ್ಕೆಗೊಂಡಿದ್ದಾರೆ. ನೂತನ ಅಧ್ಯಕ್ಷರ ಆಯ್ಕೆ 2020ರ ಅಕ್ಟೋಬರ್ 1ರಿಂದ ಜಾರಿಯಾಗಲಿದೆ. ಆನಂದ್ ಕೃಪಾಲು ಅವರು ಸದ್ಯ ಡಿಯಾಗೋ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಆರ್‌ಸಿಬಿ ಅಧ್ಯಕ್ಷರಾಗಿರುವ ಸಂಜೀವ್ ಚೂರಿವಾಲ ಅವರ ಸ್ಥಾನದಲ್ಲಿ ಇವರು 2020 ರ ಅಕ್ಟೋಬರ್ 01 ಜಾರಿಯಾಗುವಂತೆ ಅಧ್ಯಕ್ಷ ಸ್ಥಾನವಹಿಸಲಿದ್ದಾರೆ.

**ಜಮ್ಮು ಮತ್ತು ಕಾಶ್ಮೀರದ ಉದ್ಯಮ ಅಭಿವೃದ್ಧಿಗೆ ₹ 1350 ಕೋಟಿ ಪ್ಯಾಕೇಜ್:** ಶ್ರೀನಗರ : ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರವಾಸೋದ್ಯಮ, ಉದ್ಯಮ ಮತ್ತು ಇತರೆ ಕ್ಷೇತ್ರಗಳ ಅಭಿವೃದ್ಧಿಗಾಗಿ ಲೆಫ್ಟಿನಂಟ್ ಗವರ್ನರ್ ಆಗಿರುವ ಮನೋಜ್ ಸಿನ್ಹಾ ಅವರು ಒಟ್ಟು ₹ 1350 ಕೋಟಿ ಮೌಲ್ಯದ ಆರ್ಥಿಕ ಪ್ಯಾಕೇಜ್ ನ್ನು ಘೋಷಿಸಿದ್ದಾರೆ. ಪ್ರಸ್ತುತ ಘೋಷಿಸಿರುವ ₹ 1350 ಕೋಟಿ ಗಾತ್ರದ ಆರ್ಥಿಕ ಪ್ಯಾಕೇಜ್, ಆತ್ಮನಿರ್ಭರ ಅಭಿಯಾನದಡಿ ಬರುವದಿಲ್ಲ ಅವರು ಎಂದು ತಿಳಿಸಿದರು.

**INS ವಿರಾಟ್ ನೌಕೆಗೆ ಮುಂಬೈನಲ್ಲಿ ಭಾವಪೂರ್ಣ ವಿದಾಯ:**



ಮುಂಬೈ: ಭಾರತೀಯ ನೌಕಾಪಡೆಯಲ್ಲಿ ತನ್ನ ಸುದೀರ್ಘ 30 ವರ್ಷಗಳ ಸೇವೆ ಸಲ್ಲಿಸಿದ ಐಎನ್‌ಎಸ್ ವಿರಾಟ್ ನೌಕೆಯು ದಿನಾಂಕ ಸೆಪ್ಟೆಂಬರ್ 19 ರಂದು ವಿದಾಯದ ಮೂಲಕ ಗುಜರಿಗೆ ಸೇರಲಿದೆ. ಈ ಬೃಹತ್ ನೌಕೆಯನ್ನು ಕಳಚಿ, ಗುಜರಿಯಾಗಿಸುವ ವ್ಯವಸ್ಥೆ ಗುಜರಾತ್ ನ ಅಲಾಂಗ್‌ನಲ್ಲಿದೆ.

* ಮುಂಬೈನ ಗೇಟ್ ವೇ ಆಫ್ ಇಂಡಿಯಾದಲ್ಲಿ ಐಎನ್‌ಎಸ್ ವಿರಾಟ್‌ಗೆ ಬೀಳ್ಕೊಡುಗೆ ನೀಡಲಾಯಿತು. ಈ ವಿದಾಯ ಸಮಾರಂಭದಲ್ಲಿ ಹಲವಾರು ನೌಕಾಪಡೆಯ ಹಿರಿಯ ಮತ್ತು ಮಾಜಿ ಅಧಿಕಾರಿಗಳು, ಯೋಧರು ಭಾಗಿಯಾದರು.
* ಭಾರತದ ನೌಕಾಪಡೆ ಸೇರ್ಪಡೆಯಾಗುವ ಮೊದಲು ಈ ನೌಕೆಯು 1959 ರಿಂದ 1986ರ ವರೆಗೆ ಬ್ರಿಟನ್‌ನ 'ರಾಯಲ್ ನೇವಿ'ಯಲ್ಲಿ ಸೇವೆ ಆರಂಭಿಸಿದ ಇದು 1986ರಲ್ಲಿ ಅಧಿಕೃತವಾಗಿ ಭಾರತೀಯ ನೌಕಾಪಡೆಗೆ ಸೇರ್ಪಡೆಗೊಂಡಿತ್ತು.
* ಒಟ್ಟು 65 ದಶಲಕ್ಷ ಡಾಲರ್‌ಗೆ ಈ ನೌಕೆಯನ್ನು ಖರೀದಿಸಲಾಗಿತ್ತು.
* 1987 ರಿಂದ ಸೇವೆ ಆರಂಭಿಸಿ 2017ರಲ್ಲಿ ನಿವೃತ್ತಿ ಪಡೆಯಿತು.

## 20-09-2020

**ಭಾರತ ಸಲ್ಫರ್ ಡೈಆಕ್ಸೈಡ್ ಹೊರಸೂಸುವ ವಿಶ್ವದ ಅತಿದೊಡ್ಡ ರಾಷ್ಟ್ರ: ವರದಿ ತಿರಸ್ಕರಿಸಿದ ಭಾರತ:** ನವದೆಹಲಿ: ಇತ್ತೀಚಿಗೆ ಬಿಡುಗಡೆಗೊಂಡ ಗ್ರೀನ್ ಪೀಸ್ ಅಧ್ಯಯನ ವರದಿಯು ಭಾರತವು ಮಾನವ ಜನ್ಯ ಸಲ್ಫರ್ ಡೈಆಕ್ಸೈಡ್ ಹೊರಸೂಸುವ ವಿಶ್ವದ ಅತಿದೊಡ್ಡ ರಾಷ್ಟ್ರ ಎಂದು ತಿಳಿಸಿದ್ದು, ಭಾರತ ಸರ್ಕಾರದ ಪರಿಸರ ಸಚಿವಾಲಯವು ಈ ವರದಿಯನ್ನು ತಿರಸ್ಕರಿಸಿದ್ದು, ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳಿಂದ ಗಂಧಕವನ್ನು ಹೊಂದಿರುವ ಮಾಲಿನ್ಯಕಾರಕಗಳನ್ನು ನಿಯಂತ್ರಿಸಲು 16 ಘಟಕಗಳನ್ನು ಆಗಸ್ಟ್ 31 ರಂದು ಸ್ಥಾಪಿಸಲಾಗಿದೆ ಎಂದು ಸಂಸದ ಸುಪ್ರಿಯೋ ತಿಳಿಸಿದರು.

**ದಕ್ಷಿಣ ಕೊರಿಯಾದಿಂದ ಭಾರತಕ್ಕೆ 1 ಲಕ್ಷ ಮಾಸ್ಕ್ ಕೊಡುಗೆ:**




ಚೆನ್ನೈ : ದಕ್ಷಿಣ ಕೊರಿಯಾದ ಸಮಾಜ ಕಲ್ಯಾಣ ಸಂಸ್ಥೆಯಾದ ಆಂಗುಕ್ ಝುನ್ ಸೆಂಟರ್ ಸಂಸ್ಥೆಯು ಭಾರತ ಮತ್ತು ದಕ್ಷಿಣ ಕೊರಿಯಾ ರಾಷ್ಟ್ರಗಳ ಸ್ನೇಹದ ಪ್ರತೀಕವಾಗಿ ಹಾಗೂ ಕೋರೋಣ ನಿಯಂತ್ರಣಕ್ಕಾಗಿ ಮಾನವೀಯ ದೃಷ್ಟಿಯಿಂದ ಭಾರತಕ್ಕೆ ನೆರವಾಗಲು ಸುಮಾರು ಒಂದು ಲಕ್ಷದಷ್ಟು ಮಾಸ್ಕಗಳನ್ನು ಉಚಿತ ವಿತರಣೆಗಾಗಿ ಕೊಡುಗೆ ನೀಡಿದೆ. ಧರ್ಮಗುರು ಸುಬುಲ್ ಸುಮಿನ್ ನೇತೃತ್ವದ ಸಮಾಜ ಕಲ್ಯಾಣ ಸಂಸ್ಥೆಯಾದ ಆಂಗುಕ್ ಝುನ್ ಸೆಂಟರ್ ಮೂಲಕ ಈ ನೆರವು ಬೂಸಾನ್ನಿಂದ ಚೆನ್ನೈಗೆ ಹಸ್ತಾಂತರಿಸಲಾಗಿದೆ.

**"ಬ್ಲೂ ಫ್ಲ್ಯಾಗ್" ಮಾನ್ಯತೆಗೆ ಶಿಫಾರಸ್ಸುಗೊಂಡ ಭಾರತದ 8 ಬೀಚ್ ಗಳು:** ನವದೆಹಲಿ : ಸೆಪ್ಟೆಂಬರ್ 18

ರಂದು ಅಂತರರಾಷ್ಟ್ರೀಯ ಕಡಲ ಸ್ವಚ್ಛತಾ ಅಭಿಯಾನದ ದಿನವಾದುದರಿಂದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಮೊದಲ ಬಾರಿಗೆ ಭಾರತದ ಎಂಟು ಕಡಲ ತೀರಗಳನ್ನು "ಬ್ಲೂ ಫ್ಲ್ಯಾಗ್" ಅಂತರರಾಷ್ಟ್ರೀಯ ಮಾನ್ಯತೆಗೆ ಶಿಫಾರಸ್ಸು ಮಾಡಿರುವುದಾಗಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ. ಅಂತರರಾಷ್ಟ್ರೀಯ ಮಾನ್ಯತೆಗೆ ಶಿಫಾರಸ್ಸುಗೊಂಡ ಬೀಚ್ ಗಳು : ಗುಜರಾತ್ ನ ಶಿವರಾಜಪುರ, ದಿಯು ಮತ್ತು ದಮನ್ ನ ಘೋಗ್ಲಾ, ಕೇರಳದ ಕಪ್ಪದ್, ಕರ್ನಾಟಕದ ಪಡುಬಿದ್ರಿ ಮತ್ತು ಹೊನ್ನಾವರದ ಇಕೋ ಬೀಚ್, ಆಂಧ್ರಪ್ರದೇಶದ ಋಷಿಕೊಂಡ, ಒಡಿಶಾದ ಗೋಲ್ಡನ್ ಬೀಚ್, ಅಂಡಮಾನ್ ಮತ್ತು ನಿಕೋಬಾರ್ ನ ರಾಧಾನಗರ್ ಬೀಚ್ ಬ್ಲೂ ಫ್ಲ್ಯಾಗ್ ಸರ್ಟಿಫಿಕೇಷನ್ : ಬ್ಲೂ ಫ್ಲ್ಯಾಗ್ ಮಾನ್ಯತೆ ಪಡೆದ ಬೀಚ್ ಗಳನ್ನು ವಿಶ್ವದ ಅತಿ ಸ್ವಚ್ಛ ಕಡಲ ತೀರಗಳೆಂದು ಪರಿಗಣಿಸಲಾಗುವದು, ಪರಿಸರ ಶಿಕ್ಷಣ ಮತ್ತು ಮಾಹಿತಿ, ನೀರಿನ ಗುಣಮಟ್ಟ, ಪರಿಸರ ನಿರ್ವಹಣೆ ಮತ್ತು ಸಂರಕ್ಷಣೆ, ಭದ್ರತೆ ಹಾಗೂ ಸೇವೆ ಎಂಬ ಪ್ರಮುಖ ನಾಲ್ಕು ಭಾಗಗಳ 33 ಮಾನದಂಡಗಳನ್ನಿಟ್ಟುಕೊಂಡು ಪ್ರಮಾಣೀಕರಿಸಲಾಗುವದು.

**ರಾಜ್ಯದಲ್ಲಿ ಶೀಘ್ರವೇ ನೂತನವಾಗಿ 'ವಿಜಯನಗರ' ಜಿಲ್ಲೆ ಅಸ್ತಿತ್ವಕ್ಕೆ..!:** ಬಳ್ಳಾರಿ : ಪ್ರಸ್ತುತ ಬಳ್ಳಾರಿ ಜಿಲ್ಲೆಯು ತುಂಬಾ ವಿಸ್ತಾರವಾಗಿದ್ದು, ಒಟ್ಟು 11 ತಾಲೂಕ ಕೇಂದ್ರಗಳನ್ನು ಹೊಂದಿದೆ, ಈ ಕಾರಣದಿಂದ ಜಿಲ್ಲೆಯ ವಿವಿಧ ತಾಲೂಕುಗಳ ರೈತರಿಗೆ, ಬಡವರಿಗೆ, ಕೂಲಿ ಕಾರ್ಮಿಕರಿಗೆ ಹಾಗೂ ಜನಸಾಮಾನ್ಯರೆಲ್ಲರಿಗೂ ತಮ್ಮ ಕೆಲಸ ಕಾರ್ಯಗಳಿಗೆ ಜಿಲ್ಲಾ ಕೇಂದ್ರ ಸುಮಾರು 200 ಕಿ ಮೀ ಗಿಂತಲೂ ಹೆಚ್ಚು ದೂರವಿದ್ದು, ವಿಭಜನೆಗೊಂಡರೆ ಜಿಲ್ಲಾ ಕೇಂದ್ರ ತಲುಪುವುದು ತುಂಬಾ ಸುಲಭವಾಗಲಿದೆ. ಈ ಸಮಸ್ಯೆಯನ್ನು ಮನಗಂಡು ಜಿಲ್ಲೆಯ 11 ತಾಲೂಕುಗಳನ್ನು ವಿಭಾಗಿಸಿ, ನೂತನ ಜಿಲ್ಲೆ ವಿಜಯನಗರವನ್ನು ರಚಿಸುವ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ. ಶೀಘ್ರದಲ್ಲೇ ಬಳ್ಳಾರಿ ಜಿಲ್ಲೆ ವಿಭಾಗ ಹೊಂದಿ, ಹೊಸಪೇಟೆ ಕೇಂದ್ರವಾಗಿಸಿ ನೂತನ ವಿಜಯನಗರ ಜಿಲ್ಲೆ ಅಸ್ತಿತ್ವಕ್ಕೆ ಬರುವ ಸಾಧ್ಯತೆ ದಟ್ಟವಾಗಿದೆ.

## 21-09-2020

**ರಾಜ್ಯಸಭೆಯಲ್ಲಿ ಸಾಂಕ್ರಾಮಿಕ ರೋಗಗಳ ತಿದ್ದುಪಡಿ ಮಸೂದೆ ಅಂಗೀಕಾರ:** ನವದೆಹಲಿ: ಇತ್ತೀಚಿಗೆ ರಾಜ್ಯಸಭೆಯಲ್ಲಿ ಸಾಂಕ್ರಾಮಿಕ ರೋಗಗಳ ತಿದ್ದುಪಡಿ ಮಸೂದೆ 2020 ಅನ್ನು ಅಂಗೀಕರಿಸಿಲಾಯಿತು. ರಾಜ್ಯಸಭೆಯಲ್ಲಿ ಮಸೂದೆ ಮಂಡಿಸಿ ಮಾತನಾಡಿದ ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ರವರು ವೈದ್ಯಕೀಯ ಸಿಬ್ಬಂದಿಗಳ ವಿರುದ್ಧದ ಅಪರಾಧಗಳನ್ನು ನಿಯಂತ್ರಿಸಲು ಈ ಮಸೂದೆಯು ಪ್ರಮುಖ ಪಾತ್ರವಹಿಸಲಿದೆ ಎಂದು ತಿಳಿಸಿದರು. ಕೋವಿಡ್-19 ವಿರುದ್ಧ ಸಮರ ಸಾರುತ್ತಿರುವ ವೈದ್ಯರು, ಅರೆವೈದ್ಯರು, ಆರೋಗ್ಯ ಕಾರ್ಯಕರ್ತರು ಸೇರಿದಂತೆ ಅನೇಕರನ್ನು ಅವಮಾನಿಸಲಾಗುತ್ತಿದ್ದು, ಕೇಂದ್ರ ಸರ್ಕಾರವು ವೈದ್ಯಕೀಯ ಸಿಬ್ಬಂದಿಯ ರಕ್ಷಣೆಗೆ ಕಾನೂನಿನ ಅವಶ್ಯಕತೆ ಸಲುವಾಗಿ ಈ "ಸಾಂಕ್ರಾಮಿಕ ರೋಗಗಳ ಮಸೂದೆ"ಗೆ ತಿದ್ದುಪಡಿ ಮಾಡಿರುವದಾಗಿ ಸಚಿವ ಹರ್ಷವರ್ಧನ್ ತಿಳಿಸಿದರು.

**ಕೋರೋಣ ಆತಂಕದ ನಡುವೆಯೂ ಆಂಧ್ರಪ್ರದೇಶದಲ್ಲಿ ಶಾಲೆಗಳು ಆರಂಭ:** ಆಂಧ್ರಪ್ರದೇಶ : ರಾಜ್ಯದಲ್ಲಿ ಇದೆ ಸೆಪ್ಟೆಂಬರ್ 21 ರಿಂದ ಭಾಗಶಃ ಶಾಲೆಗಳನ್ನು ಆರಂಭಿಸಲು ಆಂಧ್ರ ಪ್ರದೇಶ ಸರ್ಕಾರವು ತೀರ್ಮಾನಿಸಿದ್ದು, ಆದರೆ ವಿದ್ಯಾರ್ಥಿಗಳು ಪರಸ್ಪರ ದೈಹಿಕ ಅಂತರ ಕಾಪಾಡಿಕೊಂಡು ತರಗತಿಗೆ ಹಾಜರಾಗಬಹುದು. ಇಲ್ಲವೇ ಅವಕಾಶವಿದ್ದರೆ ಆನ್ ಲೈನ್ ತರಗತಿಗೆ ಹಾಜರಾಗುವ ಸೂಚನೆಯನ್ನು ಸರ್ಕಾರ ವಿದ್ಯಾರ್ಥಿಗಳಿಗೆ ನೀಡಿದೆ.

* ಕೇಂದ್ರ ಸರ್ಕಾರದ ನಿರ್ದೇಶನದಂತೆ ಪ್ರಸ್ತುತ ಕೇವಲ 9 ರಿಂದ 12ನೇ ತರಗತಿಗಳನ್ನು ಆರಂಭಿಸಲು ಸೂಚಿಸಿದೆ.

**ಕಡಿಮೆ ವೆಚ್ಚದ ಫೆಲುಡಾ ದೇಶದ ಮೊದಲ ಜೀನ್ ಆಧಾರಿತ ಕೋವಿಡ್-19 ಟೆಸ್ಟಿಂಗ್:**



ನವದೆಹಲಿ: ಭಾರತದಲ್ಲಿ ಕಡಿಮೆ ವೆಚ್ಚದಲ್ಲಿ ಕೋವಿಡ್-19 ಪರೀಕ್ಷೆ ನಡೆಸಬಹುದಾದ ತಂತ್ರಜ್ಞಾನ ಸಂಶೋಧಿಸಲಾಗಿದ್ದು, ದೇಶಿಯವಾಗಿ ತಯಾರಿಸಲಾಗಿರುವ "ಫೆಲುಡಾ" ಕೊರೋನಾ-19 ಟೆಸ್ಟಿಂಗ್ ವಿಧಾನಕ್ಕೆ ಭಾರತದ ಔಷಧ ನಿಯಂತ್ರಕ ಮಾಡಲಿಯ ಅನುಮತಿ ಕೂಡ ದೊರಕಿದೆ.

* ಫೆಲುಡಾ ಪರೀಕ್ಷೆ ಮೂಲಕ ಅತ್ಯಂತ ನಿಖರವಾಗಿ ಕೇವಲ 2 ಗಂಟೆಗಳಲ್ಲಿ ಫಲಿತಾಂಶ ಪಡೆಯಬಹುದಾಗಿದೆ.
* ಒಂದು ಕೋವಿಡ್ 19 ಪರೀಕ್ಷೆಗೆ ತಗಲುವ ಅಂದಾಜು ವೆಚ್ಚ ಕೇವಲ 600 ರೂಪಾಯಿ
* ಗರ್ಭಧಾರಣೆಯನ್ನು ತ್ವರಿತವಾಗಿ ಪರೀಕ್ಷಿಸುವ ಮಾದರಿಯಲ್ಲಿ ಈ ಫೆಲುಡಾ ಪರೀಕ್ಷೆ ಕಾರ್ಯನಿರ್ವಹಿಸಲಿದ್ದು, ಕಾಗದದ ಪಟ್ಟಿ ಬಣ್ಣ ಬದಲಾಯಿಸುವ ಮೂಲಕ ಕೊರೋನಾ ಸೋಂಕನ್ನು ಖಚಿತಪಡಿಸಲಿದೆ .
* ಭಾರತದಲ್ಲಿ ತಯಾರಿಸಲಾದ ಫೆಲುಡಾ ಜಾಗತಿಕ

ಆರೋಗ್ಯ ಸೇವೆ ಹಾಗೂ ವಿಜ್ಞಾನ ಸಂಶೋಧನಾ ಜಗತ್ತಿಗೆ ಅತ್ಯದ್ಭುತ ಕೊಡುಗೆಯಾಗಿದೆ.

**ನೌಕಾಪಡೆಯಲ್ಲಿ ಯುದ್ಧನೌಕೆಗೆ ಮಹಿಳೆಯರ ನಿಯೋಜಿಸುವ ಐತಿಹಾಸಿಕ ಕ್ರಮ:** ಭಾರತೀಯ ನೌಕಾಪಡೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಯುದ್ಧನೌಕೆಯಲ್ಲಿ ಕಾರ್ಯಾಚರಣೆ ಕರ್ತವ್ಯಕ್ಕೆ ಮಹಿಳೆಯರನ್ನು ನಿಯೋಜಿಸಲಾಗುತ್ತಿದೆ. ನೌಕಾಪಡೆಯಲ್ಲಿ ಹಲವು ವರ್ಷಗಳಿಂದ ಮಹಿಳಾ ಅಧಿಕಾರಿಗಳು ಸೇವೆಯಲ್ಲಿದ್ದರು ಕೂಡ ಯುದ್ಧನೌಕೆಗೆ ಮಹಿಳೆಯರನ್ನು ನಿಯೋಜಿಸಿರುವದು ಇದೆ ಮೊದಲು.
* ಸಬ್ ಲೆಫ್ಟಿನೆಂಟ್ ಕುಮುದಿನಿ ತ್ಯಾಗಿ ಮತ್ತು ಸಬ್ ಲೆಫ್ಟಿನೆಂಟ್ ರಿತಿ ಸಿಂಗ್ ಯುದ್ಧನೌಕೆಯ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದಾರೆ.
* ಯುದ್ಧನೌಕೆಯಲ್ಲಿನ ಸೆನ್ಸಾರ್ ಗಳ ಬಳಕೆ ಸೇರಿದಂತೆ ಹಲವು ತರಬೇತಿ ಬಳಿಕ ಇವರಿಬ್ಬರೂ ನಿಯೋಜನೆಗೊಂಡಿದ್ದಾರೆ.

**ರಾಜ್ಯಸಭೆಯಲ್ಲಿ ವಿರೋಧದ ನಡುವೆಯೇ ಕೃಷಿ ಮಸೂದೆಗೆ ಅಸ್ತು:** ನವದೆಹಲಿ: ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ವಿರೋಧದ ನಡುವೆಯೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಎರಡು ಮಸೂದೆಗಳಿಗೆ ರಾಜ್ಯಸಭೆ ಧ್ವನಿಮತದ ಅಂಗೀಕಾರ ನೀಡಿತು.
* ಈ ಮಸೂದೆಯನ್ನು ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಮಂಡಿಸಿದರು.
* ಈ ಹೊಸ ವಿಧೇಯಕಗಳನ್ನು ದೇಶಾದ್ಯಂತ ವಿರೋಧ ವ್ಯಕ್ತವಾಗಿದ್ದು, ಅದರಲ್ಲೂ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ವಿರೋಧ ಹೆಚ್ಚಾಗಿದೆ.
* ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಮಸೂದೆ ಮತ್ತು ಬೆಲೆ ಖಾತರಿ ಮತ್ತು ಕೃಷಿ ಸೇವೆಗಳಿಗೆ ರೈತರ ಒಪ್ಪಿಗೆ (ಸಬಲೀಕರಣ ಮತ್ತು ರಕ್ಷಣೆ) ಮಸೂದೆಗಳನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಲಾಗಿದೆ.

## 22-09-2020

**ಕೊಂಕಣ ರೈಲ್ವೆಯಿಂದ ನೇಪಾಳಕ್ಕೆ 2 ಡೆಮು ರೈಲು ಹಸ್ತಾಂತರ:** ಉಡುಪಿ : ಭಾರತೀಯಯ ರೈಲ್ವೆ ಇಲಾಖೆಯ ಉಪ ವಿಭಾಗವಾದ ಕೊಂಕಣ ರೈಲ್ವೆ ಕಾರ್ಪೊರೇಷನ್ ನಿಂದ ನಿರ್ಮಿತ ಅತ್ಯಾಧುನಿಕ 1600 HP ಸಾಮರ್ಥ್ಯದ ಡೆಮು ಎರಡು ರೈಲುಗಳನ್ನು ನೇಪಾಳದ ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಯಿತು.
* ಈ ರೈಲುಗಳನ್ನು ಭಾರತ ಸರಕಾರದ 'ಮೇಕ್ ಇನ್ ಇಂಡಿಯಾ- ಮೇಕ್ ಫಾರ್ ವರ್ಲ್ಡ್' ನೀತಿಯಡಿ ನಿರ್ಮಿಸಲಾಗಿದೆ.
* ಕೊಂಕಣ ರೈಲ್ವೆ ಕಾರ್ಪೊರೇಷನ್ 2019 ಮೇ 10 ರಂದು ಅತ್ಯಾಧುನಿಕ 1600 ಎಚ್ ಡೆಮು ರೈಲುಗಳನ್ನು ನಿರ್ಮಿಸಿ ಕೊಡಲು ನೇಪಾಳದ ರೈಲ್ವೆ ಇಲಾಖೆ ಯೊಂದಿಗೆ ಒಪ್ಪಂದ ಮಾಡಿಕೊಂಡಿತ್ತು.
* ಈ ರೈಲುಗಳನ್ನು ಚೆನ್ನೈನ ಇಂಟಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ ನಿರ್ಮಿಸಲಾಗಿದೆ.
* ಈ ಡೆಮು ರೈಲುಗಳು ಭಾರತದ ಜಯನಗರ ಹಾಗೂ ನೇಪಾಳದ ಕುರ್ಥಾ ಮಾರ್ಗದ ಮಧ್ಯ ಸಂಚರಿಸಲಿವೆ.

**ಭಾರತೀಯ ವಾಯುಪಡೆಯ ರಾಫೆಲ್ ಗೆ ಶೀಘ್ರದಲ್ಲೇ ಮಹಿಳಾ ಪೈಲಟ್'ಗಳ ನೇಮಕ:** ನವದೆಹಲಿ: ಭಾರತವು ಫ್ರಾನ್ಸ್ ರಾಷ್ಟ್ರದಿಂದ ರಫೆಲ್ ಯುದ್ಧ ವಿಮಾನಗಳನ್ನು ಖರೀದಿಸಿದ್ದು, ಇತ್ತೀಚೆಗಷ್ಟೇ ಭಾರತೀಯ ವಾಯುಪಡೆ ಇವುಗಳನ್ನು ಸೇರ್ಪಡೆ ಮಾಡಲಾಗಿತ್ತು, ಇದೀಗ ಈ ರಾಫೆಲ್ ಯುದ್ಧವಿಮಾನವನ್ನು ಚಲಾಯಿಸಲು ಮಹಿಳಾ ಪೈಲಟ್ ನ್ನು ಶೀಘ್ರವೇ ನೇಮಕ ಮಾಡುವ ಕುರಿತ ಮಾಹಿತಿ ತಿಳಿದುಬಂದಿದೆ. ಮೂಲಗಳ ಪ್ರಕಾರ ರಾಫೆಲ್ ನ್ನು ಮುನ್ನಡೆಸಲು ಸುಮಾರು 10 ಮಹಿಳಾ ಪೈಲಟ್ ಗಳಿಗ ಈಗಾಗಲೇ ತರಬೇತಿ ನೀಡಲಾಗುತ್ತಿದ್ದು, ಅವರಲ್ಲಿ ಅರ್ಹರಾದವರನ್ನು ರಫೇಲ್ ಹಾರಿಸಲಿಸಲು ಆಯ್ಕೆ ಮಾಡಲಾಗುವದು.
* ಸೆಪ್ಟೆಂಬರ್ 10ರಂದು ಮೊದಲ ಹಂತದ ರಫೇಲ್ ಯುದ್ಧವಿಮಾನಗಳು ಭಾರತದ ಸೇನೆ ಅಧಿಕೃತವಾಗಿ ಸೇರ್ಪಡೆಗೊಂಡಿವೆ.

**ಕನ್ನಡದ ಹೆಸರಾಂತ ಕತೆಗಾರ, ಸಾಹಿತಿ ಅಬ್ಬಾಸ್ ಮೇಲಿನಮನಿ ನಿಧನ:** ಬಾಗಲಕೋಟೆ: ಹಿರಿಯ ಸಾಹಿತಿ, ಹೆಸರಾಂತ ಕತೆಗಾರ ಪ್ರೊ.ಅಬ್ಬಾಸ್ ಮೇಲಿನಮನಿಯವರು ತಮ್ಮ 66 ನೇ ವಯಸ್ಸಿನಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾದರು. 1954 ಮಾರ್ಚ್ 05 ರಂದು ಜನಿಸಿದ ಇವರು ಪದವಿಯವರೆಗೆ ಶಿಕ್ಷಣವನ್ನು ಬಾಗಲಕೋಟೆಯ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪಡೆದುಕೊಂಡು, ಬಳಿಕ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದಾರೆ.
* ಇವರ ಪ್ರಮುಖ ಕಥಾ ಸಂಕಲನಗಳು: ಪ್ರೀತಿಸಿದವರು, ಕಣ್ಣು ಮುಂದಿನ ಕಥೆ, ಅರ್ಧಸತ್ಯಗಳು ಇತ್ಯಾದಿ.
* ಪ್ರಮುಖ ಕವನ ಸಂಕಲನಗಳು: ಕಥೆಯಾದಳು ಹುಡುಗಿ, ಭಾವೈಕ್ಯ ಬಂಧ, ಪ್ರೀತಿ ಬದುಕಿನ ಹಾಡು.
* ಕಾದಂಬರಿಗಳು : ಜನ್ನತ್ ಮೊಹಲ್ಲ.
* ಲೇಖನ: ಸೌಹಾರ್ದ ಸಂಸ್ಕೃತಿ.
* ಸಂಪಾದಿತ ಕೃತಿ: ಸಣ್ಣಕತೆ, ಕ್ಯಾದಗಿ ಪುಜ್ಞೆ ಮುಳುಗದ ಕಥೆಗಳು. ಪ್ರಶಸ್ತಿ-ಪುರಸ್ಕಾರಗಳು: - ಮಂಗಳೂರಿನ ಮುಹ್ಯುದ್ದೀನ್ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ - ಶಿವಮೊಗ್ಗ ಕ.ಸಾ.ಪ. ಲಂಕೇಶ್ ಕಥಾ ಪ್ರಶಸ್ತಿ - ತುಷಾರ ಎಚ್.ಎಂ.ಟಿ. ಅತ್ಯುತ್ತಮ ಕಥಾ ಪ್ರಶಸ್ತಿ, ಡಾ. ಗೊರೂರು ಸಾಹಿತ್ಯ ಪ್ರಶಸ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ದತ್ತಿ ಪ್ರಶಸ್ತಿಗಳು ಸೇರಿ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ಏಪ್ರಿಲ್-ಆಗಸ್ಟ್ ತಿಂಗಳಲ್ಲಿ ಶೇ.27 ರಷ್ಟು ಕುಸಿತ ಕಂಡ ಚೀನಾ ಆಮದು:** ನವದೆಹಲಿ: ಈ ಹಣಕಾಸು ವರ್ಷದ ಏಪ್ರಿಲ್- ಆಗಸ್ಟ್ ತಿಂಗಳ ಸಮಯದಲ್ಲಿ ನೆರೆಯ ಚೀನಾ ರಾಷ್ಟ್ರದಿಂದ ಆಮದು ಮಾಡಿಕೊಳ್ಳುತ್ತಿರುವ ಸರಕುಗಳ ಪ್ರಮಾಣ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ಶೇಕಡಾ 27 ರಷ್ಟು ಕುಸಿತ ಕಂಡಿರುವುದಾಗಿ ಕೇಂದ್ರ

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಚಾವ್ಲಾ ಲೋಕಸಭೆಗೆ ಸಂಸತ್ತಿನಲ್ಲಿ ಮಾಹಿತಿ ನೀಡಿದ್ದಾರೆ.
* ಜುಲೈನಲ್ಲಿ 5.58 ಬಿಲಿಯನ್ ಡಾಲರ್, ಮತ್ತು ಆಗಸ್ಟ್ ನಲ್ಲಿ 4.98 ಬಿಲಿಯನ್ ಡಾಲರ್ ನಷ್ಟು ಮೌಲ್ಯದ ವಸ್ತುಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳಲಾಗಿದ್ದು, ಇವುಗಳ ಪೈಕಿ ಶೇಕಡಾ 27 ರಷ್ಟು ಕಡಿಮೆ ಪ್ರಮಾಣದಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳಗಿದೆ.

**ರಾಜ್ಯ ಪೊಲೀಸ್ ಇಲಾಖೆಯಿಂದ "e-Lost Report" ಮೊಬೈಲ್ ಆಯಪ್ ಬಿಡುಗಡೆ:**



ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ರಾಜ್ಯಾದಂತ ಶೀಘ್ರದಲ್ಲೇ "ಇ-ಲಾಸ್ಟ್ ರಿಪೋರ್ಟ್" ಎಂಬ ವಿನೂತನ ಮೊಬೈಲ್ ಆಯಪ್ ಅನ್ನು ಬಿಡುಗಡೆಗೊಳಿಸಿದೆ. ಈ ಕುರಿತು ಕರ್ನಾಟಕದ ಮಹಾನಿರ್ದೇಶಕ ಮತ್ತು ಇನ್ಸ್ಪೆಕ್ಟರ್ ಜನರಲ್ ಪ್ರವೀಣ್ ಸೂದ್ ಮಾಹಿತಿ ನೀಡಿದ್ದಾರೆ. ಇ-ಲಾಸ್ಟ್ ರಿಪೋರ್ಟ್ ಎಂಬ ಆಯಪ್ ಮೂಲಕ ಸಾರ್ವಜನಿಕರಕು ದಾಖಲೆಗಳು, ಮೊಬೈಲ್ ಫೋನ್, ಪರ್ಸ್ ಸೇರಿ ಯಾವುದೇ ವಸ್ತುವನ್ನು ಕಳೆದುಕೊಂಡರು ಇಲ್ಲಿ ವರದಿ ಮಾಡಲು ಅವಕಾಶ ನೀಡಲಾಗುತ್ತದೆ. ಇದರಿಂದ ಜನರು ಪೊಲೀಸ್ ಠಾಣೆಗೆ ಭೇಟಿ ನೀಡುವ ಅಗತ್ಯವಿರುವದಿಲ್ಲ.
* ಇದು ಆಂಡ್ರಾಯ್ಡ್ ಮತ್ತು ಐಓಎಸ್ ಎರಡೂ ಆಪರೇಟಿಂಗ್ ಸಿಸ್ಟಮ್'ಗಳಿಗೂ ಬಳಸಲು ಅವಕಾಶವಿದೆ.

## 23-09-2020

**ವಿಶ್ವಸಂಸ್ಥೆಯ 75ನೇ ಸಾಮಾನ್ಯ ಸಭೆ : ವಿಶ್ವಸಂಸ್ಥೆಯಲ್ಲಿ ಮೋದಿ ಭಾಷಣ:** ವಿಶ್ವಸಂಸ್ಥೆ : ವಿಶ್ವಸಂಸ್ಥೆಯ 75ನೇ ವರ್ಷಾಚರಣೆಯ ಸಂದರ್ಭದಲ್ಲಿ ಸಾಮಾನ್ಯ ಸಭೆಯ ಉನ್ನತ ಮಟ್ಟದ ಸಭೆಯಲ್ಲಿ ಪ್ರಧಾನಿ ಮೋದಿ ವಿಡಿಯೋ ಲಿಂಕ್ ಭಾಷಣ ಮಾಡಿದರು. ಮೋದಿಯವರು ವಿಶ್ವ ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಜೊತೆಗೆ ವಿಶ್ವಸಂಸ್ಥೆಯು ವಿಶ್ವಾಸದ ಕೊರತೆಯನ್ನು ಎದುರಿಸುವಂತಾಗಿದೆ ಎಂದು ಅವರು ವಿಷಾದಿಸಿದರು.

**ಬ್ಯಾಂಕಿಂಗ್ ನಿಯಂತ್ರಕ ತಿದ್ದುಪಡಿ ಮಸೂದೆಗೆ ಲೋಕಸಭೆ ಮತ್ತು ರಾಜ್ಯಸಭೆಯ ಅನುಮೋದನೆ:** ದೇಶದ ಖಾಸಗಿ ಹಾಗು ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆಯ ಆಡಳಿತದಲ್ಲಿ ಪಾರದರ್ಶಕತೆ, ದಕ್ಷತೆ ಜಾರಿಗೊಳಿಸುವ ಸದುದ್ದೇಶದಿಂದ ಬಹು ಮುಖ್ಯವಾದ ಬ್ಯಾಂಕಿಂಗ್ ನಿಯಂತ್ರಕ ತಿದ್ದುಪಡಿ ಮಸೂದೆಗೆ ಲೋಕಸಭೆ ಮತ್ತು ರಾಜ್ಯಸಭೆಯ ಅನುಮೋದನೆ ನೀಡಲಾಗಿದೆ. ಈ ತಿದ್ದುಪಡಿ ಮಸೂದೆ ಮೂಲಕ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳನ್ನು ಸಂಪೂರ್ಣವಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಾರ್ಗಸೂಚಿಗಳಡಿಯಲ್ಲಿ ಕಾರ್ಯನಿರ್ವಹಿಸಲಿವೆ.
* 1949ರಲ್ಲಿ ಮೊದಲ ಬಾರಿ ಬ್ಯಾಂಕಿಂಗ್ ನಿಯಂತ್ರಕ ಕಾಯ್ದೆ ಜಾರಿಗೆ ಬಂದಾಗ ಸಹಕಾರಿ ಬ್ಯಾಂಕುಗಳು ಆರ್‌ಬಿಐ ವ್ಯಾಪ್ತಿಯಲ್ಲಿ ಇರಲಿಲ್ಲ. ನಂತರ 1965ರಲ್ಲಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಸಹಕಾರಿ ಬ್ಯಾಂಕುಗಳನ್ನು ಆರ್‌ಬಿಐ ವ್ಯಾಪ್ತಿಗೆ ಒಳಪಡಿಸಲಾಯಿತು.

**ಪದವಿ, ಸ್ನಾತಕೋತ್ತರ ಕೋರ್ಸ್ ಗಳ ಹೊಸ ಶೈಕ್ಷಣಿಕ ಕ್ಯಾಲೆಂಡರ್ ಬಿಡುಗಡೆಗೊಳಿಸಿದ UGC:** ನವದೆಹಲಿ : ದೇಶದಲ್ಲಿ ವ್ಯಾಪಿಸಿದ ಕೊರೋನಾ ವೈರಸ್ ನಿಂದಾಗಿ ಹಲವು ತಿಂಗಳಿನಿಂದ ಶಾಲಾ ಕಾಲೇಜುಗಳಿಗೆ ರಜೆಘೋಷಿಸಿದ್ದು, ಕಳೆದುಹೋದ ಕಲಿಕೆಯ ಸಮಯವನ್ನು ಸರಿದೂಗಿ ಮತ್ತೆ ಕಾಲೇಜುಗಳ ಆರಂಭಕ್ಕೆ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಹೊಸ ಶೈಕ್ಷಣಿಕ ಕ್ಯಾಲೆಂಡರ್ ಬಿಡುಗಡೆಗೊಳಿಸಿದೆ.
* ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ತರಗತಿಗಳು ನವೆಂಬರ್‌ನಿಂದ ತರಗತಿಗಳು ಪ್ರಾರಂಭಿಸಲು ಪರಿಷ್ಕೃತ ಶೈಕ್ಷಣಿಕ ಕ್ಯಾಲೆಂಡರ್ ಸೂಚಿಸಿದೆ

**ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ರಾಜ್ಯದ ಐದು ಸಾಧಕರಿಗೆ ಗೌರವ ಡಾಕ್ಟರೇಟ್:**



ಕಲಬುರಗಿ: ಕಲಬುರಗಿ ಜಿಲ್ಲೆಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವವು ಇದೆ ದಿನಾಂಕ ಸೆಪ್ಟೆಂಬರ್ 23 ರಿಂದ ವರ್ಚುವಲ್ ಮಾದರಿಯಲ್ಲಿ ನಡೆಯಲಿದ್ದು, ಈ ಸಮಾವೇಶದಲ್ಲಿ ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ, ಜಾನಪದ ಲೇಖಕ ಮತ್ತು ಬರಹಗಾರ ಎಂ.ಜಿ.ಬಿರಾದಾರ್, ಕವಿ ಚನ್ನವೀರ ಕಣವಿ, ಪರಿಸರವಾದಿ ಸಾಲುಮರದ ತಿಮ್ಮಕ್ಕ ಮತ್ತು ಬಾಹ್ಯಾಕಾಶ ವಿಜ್ಞಾನಿ ಕೆ.ಶಿವನ್ ಅವರಿಗೆ ಗೌರವ ಡಾಕ್ಟರೇಟ್ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ.

# 24-09-2020

**ರಾಜ್ಯಸಭೆಯಲ್ಲಿ ಒಟ್ಟು 7 ಮಸೂದೆಗಳ ಅಂಗೀಕಾರ:** ನವದೆಹಲಿ: ರಾಜ್ಯಸಭೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಮೂರೂವರೆ ತಾಸುಗಳ ಅವಧಿಯಲ್ಲಿ ಒಟ್ಟು ಏಳು ಪ್ರಮುಖ ಮಸೂದೆಗಳನ್ನು ಅಂಗೀಕರಿಸಲಾಯಿತು. ಅಂಗೀಕಾರಗೊಂಡ ಮಸೂದೆಗಳು :


* ಸಹಕಾರ ಕ್ಷೇತ್ರದ ಬ್ಯಾಂಕ್‌ಗಳನ್ನು ಆರ್‌ಬಿಐ ನಿಯಂತ್ರಣಕ್ಕೆ ಒಳಪಡಿಸುವ ಬ್ಯಾಂಕಿಂಗ್ ನಿಯಂತ್ರಣ ಮಸೂದೆ
* ಅಗತ್ಯ ವಸ್ತುಗಳ ಕಾಯ್ದೆ ವ್ಯಾಪ್ತಿಯಿಂದ ಬೇಳೆ-ಕಾಳುಗಳು, ಅಡುಗೆ ಎಣ್ಣೆ, ಈರುಳ್ಳಿ, ಬಟಾಟೆಯನ್ನು ಕೈಬಿಡುವ ತಿದ್ದುಪಡಿ ಮಸೂದೆ
* ರಾಷ್ಟ್ರೀಯ ವಿಧಿ ವಿಜ್ಞಾನ ವಿ.ವಿ. ಮಸೂದೆ,
* ಕಂಪೆನಿಗಳ (ತಿದ್ದುಪಡಿ) ಮಸೂದೆ,
* ತೆರಿಗೆ ಮತ್ತು ಇತರ ಕಾಯ್ದೆಗಳು (ರಿಯಾಯಿತಿ ಮತ್ತು ಕೆಲವು ನಿಯಮಗಳಿಗೆ ತಿದ್ದುಪಡಿ) ಮಸೂದೆ ಸೇರಿ ವಿವಿಧ ಮಸೂದೆಗಳಿಗೆ ಅಂಗೀಕಾರ ನೀಡಲಾಯಿತು.

**2015 ರಿಂದ 58 ದೇಶಗಳಿಗೆ ಮೋದಿ ಪ್ರವಾಸ. ₹517.82 ಕೋಟಿ ಖರ್ಚು:** ನವದೆಹಲಿ : ದೇಶದಲ್ಲಿ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ನಂತರ ಪ್ರಧಾನಿ ನರೇಂದ್ರ ಮೋದಿಯವರು ಹಲವು ರಾಷ್ಟ್ರಗಳಿಗೆ ಭೇಟಿ ನೀಡಿ ದ್ವಿಪಕ್ಷೀಯ ಒಪ್ಪಂದಗಳಿಗೆ ಸಾಕ್ಷಿಯಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ 2015 ರಿಂದ ಇಲ್ಲಿಯವರೆಗೆ ಒಟ್ಟು 58 ದೇಶಗಳಿಗೆ ಭೇಟಿ ನೀಡಿದ್ದು, ಈ ಪ್ರವಾಸಗಳಿಗಾಗಿ 517.82 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ವಿದೇಶಾಂಗ ಸಚಿವ ವಿ ಮುರಳೀಧರನ್ ರಾಜ್ಯಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ಲಿಖಿತ ಉತ್ತರದ ಮೂಲಕ ಮಾಹಿತಿ ನೀಡಿದ್ದಾರೆ.

**DRDOನಿಂದ ABHYAS ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿ:** ನವದೆಹಲಿ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ದಿಂದ ನಿರ್ಮಿತ ಹೈ-ಸ್ಪೀಡ್ ಎಕ್ಸ್ ಪೆಂಡೆಬಲ್ ಏರಿಯಲ್ ಟಾರ್ಗೆಟ್ (ಹೀಟ್) ಕ್ಷಿಪಣಿಯನ್ನು ಒಡಿಶಾದ ಐಟಿಆರ್ ಬಾಲಸೋರನಿಂದ ಯಶಸ್ವಿ ಹಾರಾಟ ಪರೀಕ್ಷೆ ನಡೆಸಲಾಯಿತು ಈ ಮೂಲಕ ಭಾರತದ ರಕ್ಷಣಾ ವಲಯವು ಮತ್ತೊಂದು ಐತಿಹಾಸಿದ ಮೈಲುಗಲ್ಲು ಸಾಧಿಸಿದೆ.

* ಸಂಪೂರ್ಣ ದೇಶಿಯ ತಂತ್ರಜ್ಞಾನವನ್ನು ಬಳಸಿ ಈ ಕ್ಷಿಪಣಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಪರೀಕ್ಷೆಯ ಸಂದರ್ಭದಲ್ಲಿ 5 ಕಿ.ಮೀ ಹಾರಾಟದ ಎತ್ತರ, 0.5 ಹೆಚ್ಚಿನ ವಾಹನದ ವೇಗ, 30 ನಿಮಿಷಗಳ ಸಹಿಷ್ಣುತೆ ಮತ್ತು 2g ಟರ್ನ್ ಸಾಮರ್ಥ್ಯವನ್ನು ಯಶಸ್ವಿಯಾಗಿ ಸಾಧಿಸಲಾಯಿತು.

**ಚಂದ್ರನ ಮೇಲೆ ಮೊದಲ ಮಹಿಳೆ ಇಳಿಸಲು ನಾಸಾ ಸಿದ್ಧತೆ:**



ವಾಷಿಂಗ್ಟನ್ : ಅಮೆರಿಕಾದ ಬಾಹ್ಯಾಕಾಶ ಸಂಸ್ಥೆಯಾದ NASA ವು 2024 ರ ವೇಳೆಗೆ ಭೂಮಿಯ ಉಪಗ್ರಹವಾದ ಚಂದ್ರನ ಮೇಲೆ ಮೊದಲ ಮಹಿಳೆಯನ್ನು ಇಳಿಸಲು ಯೋಜನೆ ಸಿದ್ದಪಡಿಸಿದ್ದು, ಈ ಮಾನವ ಸಹಿತ ಚಂದ್ರಯಾನ ಯೋಜನೆಯ ಲ್ಯಾಂಡರ್‌ನಲ್ಲಿ ಒಬ್ಬ ಮಹಿಳೆ ಹಾಗೂ ಒಬ್ಬ ಪುರುಷ ಗಗನಯಾತ್ರಿಗಳು ಇರಲಿದ್ದಾರಂತೆ.
* ಈ ಮಾನವಸಹಿತ ಚಂದ್ರಯಾನ ಯೋಜನೆಗಾಗಿ NASA ಒಟ್ಟು 28 ಶತಕೋಟಿ ಅಮೆರಿಕನ್ ಡಾಲರ್ ವ್ಯಯಿಸಲಿದೆ. * ಈಗಾಗಲೇ ಚಂದ್ರನ ಮೇಲೆ ಮೊದಲ ಮಾನವನನ್ನು ಇಳಿಸಿದ ಗರಿಮೆ ಹೊಂದಿರುವ ಅಮೇರಿಕಾ ಇದೀಗ ಮೊದಲ ಮಹಿಳೆಯನ್ನು ಇಳಿಸಲು ತಯಾರಿಯಲ್ಲಿದೆ.

**ಹಿಂದೂ ಮಹಾಸಾಗರದಲ್ಲಿ ಆಸ್ಟ್ರೇಲಿಯಾ ಜೊತೆ 2 ದಿನಗಳ ನೌಕಾ ಸಮರಾಭ್ಯಾಸದಲ್ಲಿ ಭಾರತ ಬಾಗಿ:** ನವದೆಹಲಿ: ಪೂರ್ವ ಹಿಂದೂ ಮಹಾಸಾಗರದಲ್ಲಿ ಆಸ್ಟ್ರೇಲಿಯಾ ದೇಶದೊಂದಿಗೆ ಭಾರತವು ಎರಡು ದಿನಗಳ ನೌಕಾ ಸಮರಾಭ್ಯಾಸ ನಡೆಸಲು ಸಿದ್ಧತೆ ನಡೆಸಿದೆ. ಇದೇ ಸೆಪ್ಟೆಂಬರ್ 23 ಮತ್ತು 24 ರಂದು ಭಾರತ ಹಾಗೂ ಆಸ್ಟ್ರೇಲಿಯಾ ನೌಕಾಸೇನೆ ಸಮರಾಭ್ಯಾಸದಲ್ಲಿ ನಿರತವಾಗಲಿವೆ. ನೌಕಾಪಡೆಯ ಹೆಲಿಕಾಪ್ಟರ್‌ಗಳೂ ಕೂಡ ಈ ವ್ಯಾಯಾಮದಲ್ಲಿ ಭಾಗಿಯಾಗಲಿವೆ. ಇತ್ತೀಚಿಗೆ ಹಿಂದೂ ಮಹಾಸಾಗರದಲ್ಲಿ ಅಮೇರಿಕ ಮತ್ತು ಜಪಾನ್‌ನೊಂದಿಗೆ ಇದೇ ರೀತಿಯ ನೌಕಾ ಸಮರಾಭ್ಯಾಸವನ್ನು ಭಾರತ ನಡೆಸಿತ್ತು. ಇದೀಗ ಮತ್ತೆ ಆಸ್ಟ್ರೇಲಿಯಾ ದೇಶದೊಂದಿಗೆ ನೌಕಾ ಸಮರಾಭ್ಯಾಸ ನಡೆಸಲು ಸಿದ್ಧತೆ ನಡೆಸಿರುವುದು ಭಾರತದ ನೌಕಾಬಲದ ಹೆಚ್ಚುವರಿ ಕಾರ್ಯತಂತ್ರದ ಸಂಕೇತ ಎಂದು ಮಿಲಿಟರಿ ತಜ್ಞರು ಬಣ್ಣಿಸಿದ್ದಾರೆ.

**ಕೇಂದ್ರ ಸಚಿವ ಸುರೇಶ್ ಅಂಗಡಿ ಇನ್ನಿಲ್ಲ:** ನವದೆಹಲಿ: ಕರ್ನಾಟಕ ರಾಜ್ಯದ ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ವಿಜಯಸಾಧಿಸಿ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟದಲ್ಲಿ ಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸುರೇಶ್ ಚನ್ನಬಸಪ್ಪ ಅಂಗಡಿ ಅವರು ದಿನಾಂಕ 23 ಸೆಪ್ಟೆಂಬರ್ 2020 ರಂದು ಕೋರೋಣ ಸೋಂಕಿನ ಕಾರಣದಿಂದ ತಮ್ಮ 65 ನೇ ವಯಸ್ಸಿನಲ್ಲಿ, ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು.
* ಇವರು ಕೇಂದ್ರ ಸರ್ಕಾರದಲ್ಲಿ ರೈಲ್ವೆ ಇಲಾಖೆ ರಾಜ್ಯ ಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

* 4 ಬಾರಿ ಲೋಕಸಭೆ ಸಂಸದರಾಗಿ ಸುರೇಶ್ ಅಂಗಡಿ ಆಯ್ಕೆಯಾಗಿದ್ದರು. 2004, 2009, 2014 ಮತ್ತು 2019ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಗೆದ್ದಿದ್ದರು.
* ಸುರೇಶ್ ರವರು ಸೋಮವ್ವ ಮತ್ತು ಚೆನ್ನಬಸಪ್ಪ ಅಂಗಡಿ ದಂಪತಿಗೆ 1955 ಜೂನ್ 1 ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಕೆ.ಕೆ. ಕೊಪ್ಪಾ ಗ್ರಾಮದಲ್ಲಿ ಜನಿಸಿದರು.
* ರಾಜಕೀಯ ಜೀವನಕ್ಕೂ ಮುನ್ನ ತಮ್ಮದೇ ಆದ ಸಿಮೆಂಟ್ ಉದ್ಯಮವನ್ನು ನಡೆಸುತ್ತಿದ್ದರು.

**ಉತ್ತರ ಪ್ರದೇಶದಲ್ಲಿ 'ಆಪರೇಶನ್ ದುರಾಚಾರಿ' ಕಾರ್ಯಾಚರಣೆ ಆರಂಭ:** ಲಖನೌ : ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶ ಸರ್ಕಾರವು ಸೆಕ್ಸ್ ಸಂಬಂಧಿತ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ 'ಆಪರೇಶನ್ ದುರಾಚಾರಿ' ಎಂಬ ಕಾರ್ಯಾಚರಣೆ ಆರಂಭಿಸಿದೆ.
* ಈ ಕಾರ್ಯಾಚರಣೆಯ ಮೂಲಕ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಆರೋಪದಡಿಯಲ್ಲಿ ಸಿಕ್ಕಿಬಿದ್ದ ಆರೋಪಿಗಳ ಫೋಟೊ, ಮಾಡಿದ ಅಪರಾಧದ ಉಲ್ಲೇಖ ಇರುವ ದೊಡ್ಡ ಪೋಸ್ಟರ್ ಗಳನ್ನು ರಸ್ತೆಗಳ ಪಕ್ಕದಲ್ಲಿ ಹಾಕಲಾಗುವುದು ಈ ಮೂಲಕ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಡೆಸುವ ಆರೋಪಿಗಳ ಮಾನ ಕಳೆಯುವುದು, ತನ್ಮೂಲಕ ಅವರಿಗೆ ಪಾಠ ಕಲಿಸುವುದೇ ಈ ಕಾರ್ಯಾಚರಣೆಯ ಉದ್ದೇಶವಾಗಿದೆ.

## 25-09-2020

**ಟೈಮ್ ಮ್ಯಾಗಝಿನ್‌ನ 'ಅತ್ಯಂತ ಹೆಚ್ಚು ಪ್ರಭಾವಶಾಲಿ ವ್ಯಕ್ತಿಗಳ' ಪಟ್ಟಿ ಪ್ರಕಟ:**



ನವದೆಹಲಿ: ಟೈಮ್ ಮ್ಯಾಗಝಿನ್‌ನ 100 "ಅತ್ಯಂತ ಹೆಚ್ಚು ಪ್ರಭಾವಶಾಲಿ ವ್ಯಕ್ತಿಗಳು-2020" ಪಟ್ಟಿ ಪ್ರಕಟಗೊಂಡಿದ್ದು, ಈ ಪಟ್ಟಿಯಲ್ಲಿ ಮೂವರು ಭಾರತೀಯರು ಸ್ಥಾನ ಪಡೆದಿದ್ದು, ಅವರೆಂದರೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಲ್ಕಿಸ್ ಆಲಿಯಾಸ್ 'ಶಾಹೀನ್‌ಬಾಗ್‌ನ ದಾದಿ' ಹಾಗೂ ನಟ ಆಯುಷ್ಮಾನ್ ಖುರಾನಾ.
* ಇತ್ತೀಚಿಗೆ ತಮ್ಮ 70 ನೇ ಜನ್ಮದಿನವನ್ನಾಚರಿಸಿಕೊಂಡ ಪ್ರಧಾನಿ ಮೋದಿ ಅವರು ನಾಯಕರ ಶ್ರೇಣಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.
* ದಿಲ್ಲಿಯ ಶಾಹೀನ್‌ಬಾಗ್ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ನಡೆದ ಪ್ರತಿಭಟನೆಯ ಕೇಂದ್ರಬಿಂದುವಾಗಿದ್ದ 'ಶಾಹೀನ್‌ಬಾಗ್‌ನ ದಾದಿ' (ಅಜ್ಜಿ) ಸ್ಥಾನ ಪಡೆದಿದ್ದಾರೆ.
* ತಮ್ಮ ನಟನೆಯ ಮೂಲಕ ಜನಪ್ರಿಯರಾಗಿರುವ ಬಾಲಿವುಡ್ ನಟ ಆಯುಷ್ಮಾನ್ ಖುರಾನಾ ಅವರು ಟೈಮ್ಸ್ ನ ಪ್ರಭಾವಿಯಾಗಿದ್ದರೆ.
* ಗೂಗಲ್ ಸಿಇಒ ಸುಂದರ್ ಪಿಚಾ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕದ ಡೆಮಾಕ್ರೆಟಿಕ್ ಪಕ್ಷದ ಉಪ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹಾಗೂ ಅಧ್ಯಾಪಕ ರವೀಂದ್ರ ಗುಪ್ತಾ ಸೇರಿದಂತೆ ಹಲವರು ಟೈಮ್ ಮ್ಯಾಗಝಿನ್ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

**ಕೋರೋಣ ಕಾರಣ 2020ರಲ್ಲಿ ಭಾರತದ ಆರ್ಥಿಕತೆ ಶೇ.5.9ರಷ್ಟು ಕ್ಷೀಣಿಸಲಿದೆ: ವಿಶ್ವಸಂಸ್ಥೆ ವರದಿ:** ವಿಶ್ವಸಂಸ್ಥೆ: ಜಾಗತಿಕವಾಗಿ ವ್ಯಾಪಿಸಿರುವ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಜಗತ್ತಿನ ಬಹುತೇಕ ಎಲ್ಲ ರಾಷ್ಟ್ರಗಳು ತೀವ್ರ ಆರ್ಥಿಕ ಸಮಸ್ಯೆ ಎದುರಿಸಬೇಕಾಯಿತು. ಅದೇ ರೀತಿ ಭಾರತದ ಆರ್ಥಿಕತೆಯು 2020ರಲ್ಲಿ ಶೇ.5.9ರಷ್ಟು ಸಂಕುಚಿತಗೊಳ್ಳಲಿದೆ ಎಂದು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಘಟಕ (UNCTAD)ದ ವರದಿ ಮಾಡಿದೆ. ಇನ್ನು ಕೋವಿಡ್-19 ನಿಯಂತ್ರಣಕ್ಕೆ ಬಾರದ ಕಾರಣದಿಂದಾಗಿ ವಿಶ್ವ ಆರ್ಥಿಕತೆಯು ತೀವ್ರ ಹಿಂಜರಿತಕ್ಕೊಳಗಾಗಿದೆ ಎಂದು ವ್ಯಾಪಾರ ಮತ್ತು ಅಭಿವೃದ್ಧಿ ವರದಿ-2020 ತಿಳಿಸಿದೆ.

**ಶಿವಾಂಗಿ ಸಿಂಗ್ : ರಫೇಲ್ ಯುದ್ಧ ವಿಮಾನ ಹಾರಾಟ ನಡೆಸಲಿರುವ ಪ್ರಥಮ ಮಹಿಳಾ ಪೈಲಟ್:** ನವದೆಹಲಿ : ಭಾರತದ ರಕ್ಷಣಾ ಒಪ್ಪಂದದ ಅನುಸಾರ ಫ್ರಾನ್ಸ್ ನಿಂದ ಆಮದು ಮಾಡಿಕೊಳ್ಳಲಾದ ರಫೇಲ್ ಯುದ್ಧ ವಿಮಾನದ ಪ್ರಥಮ ಮಹಿಳಾ ಪೈಲಟ್ ಆಗಿ ಕಾರ್ಯನಿರ್ವಹಿಸಲು ಫ್ಲೈಟ್ ಲೆಫ್ಟಿನೆಂಟ್ ಶಿವಾಂಗಿ ಸಿಂಗ್ ಆಯ್ಕೆಗೊಂಡಿದ್ದಾರೆ. ಈಗಾಗಲೇ ಇವರು ಭಾರತೀಯ ವಾಯುಪಡೆಯ ಹಲವು ಯುದ್ಧ ವಿಮಾನಗಳ ಹಾರಾಟ ನಡೆಸಿದ ಅನುಭವವಿಯಾಗಿದ್ದಾರೆ. ಭಾರತೀಯ ವಾಯುಪಡೆಯಲ್ಲಿ ಯುದ್ಧ ವಿಮಾನ ಹಾರಾಟ ನಡೆಸಬಲ್ಲ 10 ಮಹಿಳಾ ಪೈಲಟ್‌ಗಳಿದ್ದು, ಇವರೆಲ್ಲ ಸೂಪರ್ ಸಾನಿಕ್ ವಿಮಾನಗಳ ಹಾರಾಟಕ್ಕೆ ಕಠಿಣ ತರಬೇತಿ ಪಡೆಯುತ್ತಿದ್ದು, ಪ್ರತಿ ಪೈಲಟ್ ತರಬೇತಿಗೆ ರೂ 15 ಕೋಟಿ ವೆಚ್ಚವಾಗಲಿದೆ.

**22 ಅಂತಾರಾಷ್ಟ್ರೀಯ ವಿಮಾನಗಳಲ್ಲಿ ಮೊಬೈಲ್ ಸೇವೆ ಆರಂಭಿಸಿದ ಜಿಯೋ:** ನವದೆಹಲಿ : ಮುಕೇಶ ಅಂಬಾನಿ ನೇತೃತ್ವದ ರಿಲಯನ್ಸ್ ಜಿಯೋ ಸಂಸ್ಥೆಯು ವಿಮಾನಯಾನ ಸಂಸ್ಥೆಗಳಾದ ಕ್ಯಾಥಯ್ ಪೆಸಿಫಿಕ್, ಸಿಂಗಪುರ್ ಏರ್ ಲೈನ್ಸ್, ಎಮಿರೇಟ್ಸ್, ಎತಿಹಾದ್ ಏರ್ ವೇಸ್, ಯೂರೋ ವಿಂಗ್ಸ್, ಲುಫ್ತಾನ್ಸಾ, ಮಾಲಿಂಡೊ ಏರ್, ಬಿಮನ್ ಬಾಂಗ್ಲಾದೇಶ್ ಏರ್ ಲೈನ್ಸ್ ಮತ್ತು ಅಲಿಟಾಲಿಯಾ ಸೇರಿ ಒಟ್ಟು 22 ವಿಮಾನಗಳಲ್ಲಿ ಮೊಬೈಲ್ ಸೇವೆಯನ್ನು ಆರಂಭಿಸಿದೆ. ಈ ಮೂಲಕ ಜಿಯೋ ಇನ್-ಫ್ಲೈಟ್ ಸೇವೆಯನ್ನು ನೀಡುತ್ತಿರುವ ಎರಡನೇ ಭಾರತೀಯ ಟೆಲಿಕಾಂ ಸಂಸ್ಥೆಯಾಗಿ ಜಿಯೋ ಹೆಗ್ಗಳಿಕೆ ಪಡೆದಿದೆ.

**ಆಸ್ಟ್ರೇಲಿಯಾದ ಕ್ರಿಕೆಟ್ ದಂತಕತೆ ಎನಿಸಿರುವ ಡೀನ್ ಜೋನ್ಸ್ ಇನ್ನಿಲ್ಲ:** ಮುಂಬೈ : ಆಸ್ಟ್ರೇಲಿಯದ ಕ್ರಿಕೆಟ್ ನ ದಂತಕತೆಯೆನಿಸಿರುವ ಮಾಜಿ ಕ್ರಿಕೆಟ್ ಆಟಗಾರ ಡೀನ್ ಜೋನ್ಸ್ ಅವರು ತೀವ್ರ ಹೃದಯಾಘಾತದ ಕಾರಣ ಭಾರತದ ಮುಂಬೈ ನಗರದಲ್ಲಿ ತಮ್ಮ 59 ನೇ ವಯಸ್ಸಿನಲ್ಲಿ ನಿಧನರಾದರು. ಪ್ರಸ್ತುತ ಯುಎಇನಲ್ಲಿ ನಡೆಯುತ್ತಿರುವ ಐಪಿಎಲ್ ಟೂರ್ನಿಯ ಪ್ರಸಾರ ವೇಳೆ ಸ್ಟಾರ್ ಸ್ಪೋರ್ಟ್ಸ್ ನ ವೀಕ್ಷಕ ವಿವರಣೆಗಾಗಿ ಮುಂಬೈ ನಗರದಲ್ಲಿ ತಂಗಿದ್ದರು. - ಜೋನ್ಸ್ ಅವರು ಆಸ್ಟ್ರೇಲಿಯದ ಪರವಾಗಿ ಮಾಡಿದ ಸಾಧನೆ :

* ಟೆಸ್ಟ್ ಪಂದ್ಯ : 52, ರನ್ ಗಳು :3,631, ಗರಿಷ್ಠ: 216 ರನ್, ಶತಕ : 11

* ಏಕದಿನ ಪಂದ್ಯ : 164, ರನ್ ಗಳು : 6,068, ಶತಕ: 7, ಅರ್ಧಶತಕ : 46

**ಎಸ್.ಎಲ್. ಭೈರಪ್ಪಗೆ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ:** ಉಡುಪಿ: ಕೋಟತಟ್ಟು ಗ್ರಾಮ ಪಂಚಾಯಿತಿ ಹಾಗೂ ಕೋಟ ಡಾ. ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನದಿಂದ ನೀಡಲಾಗುವ ಪ್ರತಿಷ್ಠಿತ 2020ನೇ ಸಾಲಿನ ಕೋಟ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿಗೆ ನಾಡಿನ ಹಿರಿಯ ಸಾಹಿತಿ, ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.
* ಕೋಟ ಶಿವರಾಮ ಕಾರಂತರ ಜನ್ಮದಿನವಾದ ಅ.10ರಂದು ಕೋಟ ಕಾರಂತ ಥೀಮ್ ಪಾರ್ಕ್‌ನಲ್ಲಿ ಭೈರಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.
* ಈ ಪ್ರಶಸ್ತಿಯನ್ನು 2005 ರಿಂದ ಆರಂಭಿಸಲಾಗಿದ್ದು, ಈಗಾಗಲೇ ರಾಜ್ಯದ ರವಿ ಬೆಳಗೆರೆ, ವೀರಪ್ಪಮೊಯ್ಲಿ, ನಿವೃತ್ತ ನ್ಯಾಯಮೂರ್ತಿ ವೆಂಕಟಾಚಲಯ್ಯ, ಗಿರೀಶ್ ಕಾಸರವಳ್ಳಿ, ಸಾಲುಮರದ ತಿಮ್ಮಕ್ಕ, ನಟ ಪ್ರಕಾಶ್ ರೈ ಸಹಿತ 15 ಸಾಧಕರು ಗೌರವಕ್ಕೆ ಪಾತ್ರರಾಗಿದ್ದಾರೆ.

**ಬಸವ ಕಲ್ಯಾಣ ಶಾಸಕ ನಾರಾಯಣ ರಾವ್ ಇನ್ನಿಲ್ಲ:** ಬೆಂಗಳೂರು : ತೀವ್ರವಾಗಿ ದೇಶದಲ್ಲಿ ವ್ಯಾಪಿಸಿರುವ ಕೊರೋನಾ ಸೋಂಕಿನ ಕಾರಣದಿಂದಾಗಿ ಬೆಂಗಳೂರು ನಗರದ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಲಬುರಗಿ ಜಿಲ್ಲೆಯ ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ನಾರಾಯಣ ರಾವ್ ನಿಧನರಾದರು.
* ಶಾಸಕ ನಾರಾಯಣ ರಾವ್ ಅವರು 2018 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು.
* ಇಲ್ಲಿಯವರೆಗೂ ದೇಶದಲ್ಲಿ ಕೊರೋನಾ ಸೋಂಕಿನ ಕಾರಣದಿಂದಾಗಿ ಒಟ್ಟು 7 ಶಾಸಕರು, 3 ಸಂಸದರು, ಹಾಗೂ 1 ರಾಜ್ಯಸಭಾ ಸದಸ್ಯರು ಬಲಿಯಾಗಿದ್ದಾರೆ.

## 26-09-2020

**ಖ್ಯಾತ ಹಿನ್ನಲೆ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಇನ್ನಿಲ್ಲ:**



ಚೆನ್ನೈ : ಭಾರತದ ಹೆಮ್ಮಯ ಪುತ್ರ, ಖ್ಯಾತ ಹಿನ್ನಲೆ ಗಾಯಕ, ಪದ್ಮವಿಭೂಷಣ ಡಾ. ಎಸ್ .ಪಿ. ಬಾಲಸುಬ್ರಹ್ಮಣ್ಯಂ ಅವರು ಅನಾರೋಗ್ಯ ಕಾರಣ ತಮ್ಮ 74 ನೇ ವಯಸ್ಸಿನಲ್ಲಿ ಚೆನ್ನೈನ ಎಂಜಿಎಂ ಆಸ್ಪತ್ರೆಯಲ್ಲಿ ದಿನಾಂಕ 25 ಸೆಪ್ಟೆಂಬರ್ 2020 ರಂದು ಮಧ್ಯಾಹ್ನ ನಿಧನರಾದರು. ಎಸ್ ಪಿ ಬಾಲಸುಬ್ರಮಣ್ಯ ಅವರ ಕಲಾ ಸೇವೆಗೆ ಭಾರತ ಸರ್ಕಾರ 2011ರಲ್ಲಿ ಪದ್ಮಶ್ರೀ, 2011ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 1946 ರ ಜೂನ್ 4 ರಂದು ಆಂಧ್ರಪ್ರದೇಶದ ನೆಲ್ಲೂರಿನಲ್ಲಿ ಜನಿಸಿದ ಇವರು ಕನ್ನಡ, ತಮಿಳು, ತೆಲುಗು, ಹಿಂದಿ, ಸೇರಿ ಭಾರತೀಯ ಒಟ್ಟು 16 ಭಾಷೆಗಳಲ್ಲಿ 40 ಸಾವಿರಕ್ಕೂ ಅಧಿಕ ಹಾಡುಗಳಿಗೆ ಧ್ವನಿ ನೀಡಿದ್ದಾರೆ

## 27-09-2020

**ಭೂಮಿಯ ಸರಾಸರಿ ಉಷ್ಣತೆ 1 ಡಿಗ್ರಿ ಏರಿದರೆ ಸಮುದ್ರ ಮಟ್ಟ 2.5 ಮೀಟರ್ ಏರಿಕೆ : ವರದಿ:** 'ನೇಚರ್' ಪತ್ರಿಕೆಯು ಇತ್ತೀಚಿಗೆ ಪ್ರಕಟಿಸಿದ ಅಧ್ಯಯನ ವರದಿಯ ಪ್ರಕಾರ ಭೂಮಿಯ ಸರಾಸರಿ ಮೇಲ್ಮೈ ಉಷ್ಣತೆ ಕೇವಲ ಒಂದು ಡಿಗ್ರಿಯಷ್ಟು ಏರಿಕೆ ಖಂಡರೆ ಅಂಟಾರ್ಕ್ಟಿಕ್ ಖಂಡವೊಂದರಲ್ಲೇ ಸಮುದ್ರದ ಮಟ್ಟವು 2.5 ಮೀಟರ್ ಏರಲಿಕೆ ಕಾಣಲಿದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. 'ನೇಚರ್' ಪತ್ರಿಕೆಯಲ್ಲಿ ಪ್ರಕಟಗೊಂಡ ಅಧ್ಯಯನ ವರದಿಯ ಪ್ರಕಾರ ನೀರ್ಣ ಮಟ್ಟ ಇಷ್ಟು ಹೆಚ್ಚಾದರೆ ಭಾರತದ ಮುಂಬೈಯಿಂದ ಅಮೆರಿಕದ ಮಯಾಮಿವರೆಗಿನ ಕಡಲ ತೀರದನಗರಗಳು ಜಲಕಂಟಕ ಎದುರಿಸಬೇಕಾಗುವದು ಅಲ್ಲದೆ ಕೋಟ್ಯಂತರ ಜನ ಆಶ್ರಯ ಕಳೆದುಕೊಳ್ಳುವರು. ಜಾಗತಿಕವಾಗಿ ಸಮುದ್ರಗಳ ಮಟ್ಟವನ್ನು 58 ಮೀಟರ್‌ಗಳಷ್ಟು ಹೆಚ್ಚಿಸಬಹುದಾದ ಪ್ರಮಾಣದಷ್ಟು ಘನೀಕೃತ ನೀರು ಅಂಟಾರ್ಕ್ಟಿಕ ಖಂಡದಲ್ಲಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ.

**ನವೆಂಬರ್ 06 ರಿಂದ 08 ರವರೆಗೆ ಬೆಂಗಳೂರಿನ ಜಿಕೆವಿಕೆಯಲ್ಲಿ ಸರಳ ಕೃಷಿ ಮೇಳ:** ಯಲಹಂಕ (ಬೆಂಗಳೂರು) : ಪ್ರತಿ ಸಲದಂತೆ ಈ ವರ್ಷವೂ ಕೂಡ

ಬೆಂಗಳೂರಿನ ಯಲಹಂಕದಲ್ಲಿರುವ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಾಮಾಜಿಕ ಅಂತರ, ಸ್ಯಾನಿಟೈಝೇಷನ್ ಸೇರಿ ಹಲವು ಮುನ್ನೆಚರಿಗೆ ಕ್ರಮಗಳೊಂದಿಗೆ ದಿನಾಂಕ ನವೆಂಬರ್ 06 ರಿಂದ 08 ರ ವರೆಗೆ ಸರಳ ಕೃಷಿ ಮೇಳ ಆಯೋಜಿಸಲಾಗುವಾದುದೆಂದು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಉಪಕುಲಪತಿಗಳಾದ ಡಾ. ರಾಜೆಂದ್ರ ಪ್ರಸಾದ್ ಮಾಹಿತಿ ನೀಡಿದ್ದಾರೆ. ಪ್ರತಿಸಲದಂತೆ ಈ ಬಾರಿಯೂ ಹಲವು ನೂತನ ಕೃಷಿ ತಂತ್ರಜ್ಞಾನ ಹಾಗೂ ಹೊಸ ತಳಿಗಳ ಬಿಡುಗಡೆ ಸೇರಿ ಪ್ರಗತಿಪರ ರೈತರಿಗೆ ರೈತ ಪ್ರಶಸ್ತಿಗಳನ್ನ ನೀಡಿ ಗೌರವಿಸಲಾಗುವುದು.

**ಸಾಂಕ್ರಾಮಿಕವಲ್ಲದ ರೋಗ ನಿಯಂತ್ರಿಸುವಲ್ಲಿ ಕೇರಳಕ್ಕೆ ವಿಶ್ವಸಂಸ್ಥೆ ಪುರಸ್ಕಾರ:**




ತಿರುವನಂತಪುರಂ: ಜಾಗತಿಕವಾಗಿ ವ್ಯಾಪಿಸಿದ ಕೊರೊನಾ ವೈರಸ್ ಸಾಂಕ್ರಾಮಿಕ ರೋಗದ ಅಬ್ಬರದ ನಡುವೆಯೂ ಕೇರಳ ಸರ್ಕಾರವು ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಮೂಲಕ ವಿಶ್ವಸಂಸ್ಥೆಯು ಪುರಸ್ಕಾರಕ್ಕೆ ಪಾತ್ರವಾಗಿದೆ. ಸಾಂಕ್ರಾಮಿಕವಲ್ಲದ ಕಾಯಿಲೆಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕುರಿತು ಈ ವರ್ಷ ವಿಶ್ವಸಂಸ್ಥೆಯ ಇಂಟರ್‌ಯಾರ್ಜೆನ್ಸಿ ಟಾಸ್ಕ್ ಫೋರ್ಸ್ (ಯುಎನ್‌ಐಎಟಿಎಫ್) ಪ್ರಶಸ್ತಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಘೋಷಿಸಿದ್ದು, 2019ರ ಸಾಲಿನ ಸಾಂಕ್ರಾಮಿಕವಲ್ಲದ ರೋಗಗಳನ್ನು ನಿಯಂತ್ರಿಸುವುದು ಮತ್ತು ಸುಸ್ಥಿರ ಅಭಿವೃದ್ಧಿಯ ಗುರಿ ಸಾದಿಸಿದ ಕೇರಳ ರಾಜ್ಯಕ್ಕೆ ಪ್ರಶಸ್ತಿ ನೀಡಲಾಗಿದೆ.

**ಅಂತಾರಾಷ್ಟ್ರೀಯ ನ್ಯಾಯಮಂಡಳಿಯಲ್ಲಿ ಭಾರತದ ವಿರುದ್ಧ ತೆರಿಗೆ ವಿವಾದದ ಕೇಸ್ ಗೆದ್ದ ವೊಡಾಫೋನ್:** ನವದೆಹಲಿ : ವೊಡಾಫೋನ್ ಸಮೂಹವು ಭಾರತ ಸರ್ಕಾರದ ವಿರುದ್ಧ ಸುಮಾರು 14,200 ಕೋಟಿ ರೂ. ಮೊತ್ತದ ಹಳೆಯ ತೆರಿಗೆ ವಿವಾದವನ್ನು ನೆದರ್‌ಲೆಂಡ್‌ನ ಹೇಗ್‌ನಲ್ಲಿರುವ ಅಂತಾರಾಷ್ಟ್ರೀಯ ನ್ಯಾಯಮಂಡಳಿಯಲ್ಲಿ ಗೆದ್ದುಕೊಂಡಿದೆ. ನೆದರ್‌ಲೆಂಡ್‌ನ ಹೇಗ್‌ನಲ್ಲಿರುವ ಅಂತಾರಾಷ್ಟ್ರೀಯ ನ್ಯಾಯಲಯವು ಭಾರತವು ವೊಡಾಫೋನ್ ಮೇಲೆ ಹೇರಿರುವ ತೆರಿಗೆ ಭಾದ್ಯತೆಯ ಜತೆಗೆ ಬಡ್ಡಿ ಮತ್ತು ದಂಡವು ಭಾರತ ಹಾಗೂ ನೆದರ್‌ಲೆಂಡ್ ನಡುವಿನ ಹೂಡಿಕೆ ಒಪ್ಪಂದದ ನಿಯಮಗಳ ಉಲ್ಲಂಘನೆಯಾಗಿದೆ ವೊಡಾಫೋನ್‌ನಿಂದ ಬಾಕಿ ವಸೂಲಿ ಮಾಡುವುದನ್ನು ತಡೆಯಬೇಕು ಎಂದು ಭಾರತಕ್ಕೆ ಸೂಚಿಸಿರುವ ನ್ಯಾಯಮಂಡಳಿ, ವೊಡಾಫೋನ್‌ನ ಕಾನೂನು ಹೋರಾಟದ ವೆಚ್ಚವಾಗಿ 5.47 ಮಿಲಿಯನ್ ಡಾಲರ್ ಹಣವನ್ನು ಪರಿಹಾರವಾಗಿ ನೀಡಬೇಕು ಎಂದು ತೀರ್ಪು ನೀಡಿದೆ.

## 28-09-2020

**ಶ್ರೀಲಂಕಾ ಜತೆಗಿನ ಬುದ್ಧಿಸ್ಟ ಒಪ್ಪಂದಕ್ಕೆ ಭಾರತದಿಂದ 15 ಮಿಲಿಯನ್ ಡಾಲರ್ ನೆರವು:** ನವದೆಹಲಿ : ಇತ್ತೀಚಿಗೆ ನೆರೆಯ ಶ್ರೀಲಂಕಾ ರಾಷ್ಟ್ರದ ಪ್ರಧಾನಿಯಾದ ಮಹಿಂದಾ ರಾಜಪಕ್ಸ ಆನ್‌ಲೈನ್ ದ್ವಿಪಕ್ಷೀಯ ಸಮ್ಮೇಳನಕ್ಕೆ ಮೋದಿಯರಿಗೆ ನೀಡಿದ ಆಹ್ವಾನವನ್ನು ಸ್ವೀಕರಿಸಿ ಮೋದಿ ಮಾತುಕತೆ ನಡೆಸಿದರು. ಆನ್‌ಲೈನ್ ದ್ವಿಪಕ್ಷೀಯ ಮಾತುಕತೆ ನಡೆಸಿದ ಮಡಿಯವರು ಭದ್ರತೆ ಮತ್ತು ಬೆಳವಣಿಗೆ (ಸಾಗರ್) ನೀತಿಯಲ್ಲಿ ಶ್ರೀಲಂಕಾಕ್ಕೆ ಮಹತ್ವ ನೀಡಲಾಗುವದು ಹಾಗೂ ಭಾರತ ಮತ್ತು ಶ್ರೀಲಂಕಾ ಸಂಬಂಧ ಸಾವಿರಾರು ವರ್ಷಗಳಷ್ಟು ಹಳೆಯದು ಎಂದು ಮೋದಿ ಬಣ್ಣಿಸಿದರು. ಇನ್ನು ಭಾರತ ಮತ್ತು ಶ್ರೀಲಂಕಾ ನಡುವಿನ ಬುದ್ಧಿಸ್ಟ ಒಪ್ಪಂದವನ್ನು ಉತ್ತೇಜಿಸುವ ಸಲುವಾಗಿ 15 ಮಿಲಿಯನ್ ಡಾಲರ್ ನೆರವು ನೀಡುವುದಾಗಿ ಇದೆ ವೇಳೆ ಪ್ರಧಾನಿ ಮೋದಿ ಪ್ರಕಟಿಸಿದರು. ಈ ಒಪ್ಪಂದದ ಪ್ರಕಾರ ಉತ್ತರ ಪ್ರದೇಶದ ಕುಶಿನಗರಕ್ಕೆ ಮೊದಲ ಉದ್ಘಾಟನಾ ವಿಮಾನದಲ್ಲಿ ಬರಲಿರುವ ಶ್ರೀಲಂಕಾದ ಬೌದ್ಧ ಯಾತ್ರಾರ್ಥಿಗಳ ನಿಯೋಗವನ್ನು ಭಾರತ ಸತ್ಕರಿಸಲಿದೆ.

**ಅರಬ್ಬಿ ಸಮುದ್ರದಲ್ಲಿ ಭಾರತ-ಜಪಾನ್ ಜಂಟಿ ಸಮರಾಭ್ಯಾಸ:** ನವದೆಹಲಿ : ಭಾರತ ಮತ್ತು ಜಪಾನ್ ನಡುವಿನ ದ್ವಿಪಕ್ಷೀಯ ಸಾಗರ ಸಮರಾಭ್ಯಾಸ "ಜಿಮೆಕ್ಸ್"ನ ನಾಲ್ಕನೆಯ ಆವೃತ್ತಿಯು ಇದೆ ಸೆಪ್ಟೆಂಬರ್ 26 ರಿಂದ 28ವರೆಗೆ ನಡೆಯುತ್ತಿದೆ. ಪ್ರತಿ ಎರಡು ವರ್ಷಕ್ಕೊಮ್ಮೆ ಭಾರತದ ನೌಕಾ ಪಡೆ ಮತ್ತು ಜಪಾನ್ ಸಾಗರ ಸ್ವಯಂ ರಕ್ಷಣಾ ದಳ (JIMSDF) ಜಂಟಿಯಾಗಿ ಉತ್ತರ ಅರಬ್ಬಿ ಸಮುದ್ರದಲ್ಲಿ ಸಾಗರ ಸಮರಾಭ್ಯಾಸ ನಡೆಸುತ್ತ ಬಂದಿವೆ. * ಸಾಗರದ ಭದ್ರತೆಯ ಸಲುವಾಗಿ ಉಭಯ ರಾಷ್ಟ್ರಗಳ ಸಹಕಾರಕ್ಕಾಗಿ 2012ರ ಜನವರಿಯಿಂದ ಜಿಮೆಕ್ಸ್ ಸರಣಿಯ ಸಾಗರ ಸಮರಾಭ್ಯಾಸವನ್ನು ಆಯೋಜಿಸಲಾಗುತ್ತಿದೆ. * ಕೊನೆಯ ಬಾರಿ ಈ ಜಂಟಿ ಸಮರಾಭ್ಯಾಸವು 2018ರ ಅಕ್ಟೋಬರ್‌ನಲ್ಲಿ ವಿಶಾಖಪಟ್ಟಣದಲ್ಲಿ ಆಯೋಜಿಸಲಾಗಿತ್ತು. * ಉಭಯ ದೇಶಗಳ ನೌಕಾಪಡೆಗಳು ಅಭಿವೃದ್ಧಿಪಡಿಸಿದ ಶಸ್ತ್ರಾಸ್ತ್ರಗಳ ಉಡಾವಣೆ, ಕ್ರಾಸ್ ಡೆಕ್ ಹಲಿಕಾಪ್ಟರ್ ಕಾರ್ಯಾಚರಣೆ, ಜಲಾಂತರ್ಗಾಮಿ ನೌಕೆಗಳ ನಿಗ್ರಹ, ವೈಮಾನಿಕ ಯುದ್ಧ ಅಭ್ಯಾಸಗಳು ಸೇರಿ ವಿವಿಧ ಕಾರ್ಯತಂತ್ರಗಳು ಜಿಮೆಕ್ಸ್ 20ರಲ್ಲಿ ಪ್ರದರ್ಶನಗೊಳ್ಳಲಿವೆ.

**ಕರ್ನಾಟಕ ವಿಶ್ವವಿದ್ಯಾಲಯಕ್ಕೆ ನೂತನ ಕುಲಪತಿಯಾಗಿ ಪ್ರೊ. ಕೆ.ಬಿ ಗುಡಸಿ ನೇಮಕ:**



ಧಾರವಾಡ : ಇಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಪ್ರೊ.ಕೆ ಬಿ ಗುಡಸಿ ಅವರನ್ನು ನೇಮಿಕ ಮಾಡಿ ರಾಜ್ಯಪಾಲರಾದ ವಜುಭಾಯ್ ವಾಲಾ ಆದೇಶ ಹೊರಡಿಸಿದ್ದಾರೆ. ಇಲ್ಲಿಯವರೆಗೆ ಕುಲಪತಿಯಾಗಿ ಸೇವೆಸಲ್ಲಿಸಿದ್ದ ಪ್ರಭಾರಿ ಕುಲಪತಿ ಪ್ರೊ.ಎಂ ವಿಶ್ವನಾಥ ಅವರಿಂದ ನೂತನವಾಗಿ ನೇಮಕಗೊಂಡ ಕುಲಪತಿ ಪ್ರೊ.ಕೆ ಬಿ ಗುಡಸಿ ಅಧಿಕಾರ ಸ್ವೀಕರಿಸಿದರು. - ಪ್ರೊ.ಕೆ.ಬಿ ಗುಡಸಿ ಕರ್ನಾಟಕ ವಿವಿಯ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತಿದ್ದರು.

**ಖ್ಯಾತ ಅರ್ಥಶಾಸ್ತ್ರಜ್ಞ ಇಶರ್ ಅಹ್ಲುವಾಲಿಯ ಇನ್ನಿಲ್ಲ:** ನವದೆಹಲಿ: ಭಾರತದ ಖ್ಯಾತ ಅರ್ಥಶಾಸ್ತ್ರಜ್ಞೆ, ಪದ್ಮಭೂಷಣ ಡಾ. ಇಶರ್ ಅಹ್ಲುವಾಲಿಯ ಅವರು ಅನಾರೋಗ್ಯ ಕಾರಣ ದಿನಾಂಕ 26 ಸೆಪ್ಟೆಂಬರ್ 2020 ರಂದು ತಮ್ಮ 74 ವರ್ಷ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.
* ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಇವರ ಸೇವೆಗಾಗಿ 2009ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು.
* ಇವರು ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷರಾದ ಮಾಂಟೆಕ್ ಸಿಂಗ್ ಅಹ್ಲುವಾಲಿಯ ಅವರನ್ನು ತಮ್ಮ ಜೀವನ ಸಂಗತಿಯನ್ನಾಗಿಸಿಕೊಂಡಿದ್ದರು.
* ದೆಹಲಿಯ ಚಿಂತನ ಚಿಲುಮೆ ಇಂಡಿಯನ್ ಕೌನ್ಸಿಲ್ ಫಾರ್ ರೀಸರ್ಚ್ ಆನ್ ಇಂಟರ್‌ನ್ಯಾಷನಲ್ ಎಕನಾಮಿಕ್ ರಿಲೇಷನ್ಸ್ (ಐಸಿಆರ್‌ಐಇಆರ್)ನ ಅಧ್ಯಕ್ಷೆಯಾಗಿ ಸುಮಾರು 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

**ಕೇಂದ್ರದ ಮಾಜಿ ಸಚಿವ ಜಸ್ವಂತ್ ಸಿಂಗ್ ನಿಧನ:** ನವದೆಹಲಿ: ಕೇಂದ್ರದ ಮಾಜಿ ಸಚಿವ ಜಸ್ವಂತ್ ಸಿಂಗ್ ತಮ್ಮ 82 ವರ್ಷ ವಯಸ್ಸಿನಲ್ಲಿ ಬಹುಅಂಗಾಂಗ ವೈಫಲ್ಯದಿಂದ ಬಳಲಿ ಅಸುನೀಗಿದರು. ರಾಜಸ್ತಾನದ ಬರ್ಮರ್ ಜಿಲ್ಲೆಯ ಜಸೋಲ್ ಗ್ರಾಮದಲ್ಲಿ ಜನವರಿ 3, 1938ರಲ್ಲಿ ಜಸ್ವಂತ್ ಜನಿಸಿದರು. 1950 ಮತ್ತು 60ರ ದಶಕಗಳಲ್ಲಿ ಭಾರತೀಯ ಸೈನ್ಯದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ನಂತರದ ದಿನಗಳಲ್ಲಿ 1970ರಲ್ಲಿ ಮೇಜರ್ ಹುದ್ದೆಗೆ ರಾಜೀನಾಮೆ ನೀಡಿ ರಾಜಕೀಯ ಸೇರ್ಪಡೆಗೊಂಡು BJP ಆಡಳಿತ ಅವಧಿಯಲ್ಲಿ ಭಾರತ ಸರ್ಕಾರದ ವಿದೇಶಾಂಗ ಇಲಾಖೆ, ರಕ್ಷಣಾ ಇಲಾಖೆ ಮತ್ತು ಹಣಕಾಸು ಇಲಾಖೆಯ ಸಚಿವರಾಗಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಇವರು ಬಿಜೆಪಿಯ ನಾಯಕರಾಗಿ ಒಟ್ಟು ಒಂಭತ್ತು ಬಾರಿ ಸಂಸತ್‌ಗೆ ಚುನಾಯಿತರಾಗಿದ್ದರು

**ಭಾರತ-ಇಸ್ರೇಲ್ ನಿಂದ ಜಂಟಿಯಾಗಿ ಹೈಟೆಕ್ ಶಸ್ತ್ರಾಸ್ತ್ರ ಉತ್ಪಾದನೆ:** ನವದೆಹಲಿ: ಭಾರತ ಮತ್ತು ಇಸ್ರೇಲ್ ರಾಷ್ಟ್ರಗಳು ಜಂಟಿಯಾಗಿ ಹೈಟೆಕ್ ಶಸ್ತ್ರಾಸ್ತ್ರ ಉತ್ಪಾದಿಸಲು ನಿರ್ಧರಿಸಿದ್ದು, ಉಭಯ ದೇಶಗಳ ರಕ್ಷಣಾ ಸಚಿವಾಲಯಗಳು ಸಬ್ ವರ್ಗಿಂಗ್ ಗ್ರೂಪ್ (SWG) ರಚಿಸಿಕೊಂಡಿವೆ. ಉಭಯ ರಾಷ್ಟ್ರಗಳ ತಂತ್ರಜ್ಞಾನ, ಅಭಿವೃದ್ಧಿ ಮತ್ತು ಉತ್ಪಾದನೆ, ತಂತ್ರಜ್ಞಾನ ಭದ್ರತೆ, ಕೃತಕ ಬುದ್ಧಿಮತ್ತೆ, ನಾವೀನ್ಯತೆ ಮತ್ತು ಜಂಟಿ ರಫ್ತು ಸೇರಿ ಹಲವು ಅಂಶಗಳನ್ನು ಎಸ್‌ಡಬ್ಲ್ಯುಜಿ ಸಂಸ್ಥೆಯು ನಿರ್ವಹಿಸಲಿದ್ದು, ಭಾರತದ ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿಸಂಜಯ್ ಜಾಜು ಮತ್ತು ಇಸ್ರೇಲ್‌ನ ಇಯಾಲ್ ಕ್ಯಾಲಿಫ್ SWG ನ ನೇತೃತ್ವ ವಹಿಸಿಕೊಂಡಿದ್ದಾರೆ.

**ಎಲ್ಲಾ ಮೂರು ರೈತ ಮಸೂದೆಗಳಿಗೆ ರಾಷ್ಟ್ರಪತಿ ಅಂಕಿತ:** ಹೊಸದಿಲ್ಲಿ: ಇತ್ತೀಚಿಗಷ್ಟೇ ಸಂಸತ್ತಿನಲ್ಲಿ ಅನುಮೋದನೆ ಪಡೆದ ಮೂರು ರೈತ ಮಸೂದೆಗಳಿಗೆ ರಾಷ್ಟ್ರಪತಿ ರಾಮನಾಥ್ ಕೊವಿಂದ ಅವರು ಅಂಕಿತ ಹಾಕಿದ್ದಾರೆ. ವಿರೋಧ ಪಕ್ಷಗಳು ಈ ಮಸೂದೆಗಳು ದೇಶದ ರೈತರ ಹಿತಕ್ಕೆ ಮಾರಕ ಹಾಗೂ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುವ ದುರುದ್ದೇಶ ಹೊಂದಿವೆ ಎಂದು ತೀವ್ರ ವಿರೋಧ ವ್ಯಕ್ತಪಡಿಸಿದ ಬೆನ್ನಲ್ಲೇ ರೈತ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಹಾಗೂ ಸೌಲಭ್ಯ) ಮಸೂದೆ, 2020, ರೈತರ (ಸಶಕ್ತೀಕರಣ ಹಾಗೂ ರಕ್ಷಣೆ) ಬೆಲೆ ಖಚಿತತೆ ಒಪ್ಪಂದ ಹಾಗೂ ರೈತ ಸೇವಾ ಮಸೂದೆ, 2020 ಹಾಗೂ ಅತ್ಯಗತ್ಯ ವಸ್ತುಗಳ (ತಿದ್ದುಪಡಿ) ಮಸೂದೆ, 2020 ಈ ಮೂರು ಮಸೂದೆಗಳಿಗೆ ರಾಷ್ಟ್ರಪತಿ ರಮಾನಾಥ್ ಕೋವಿಂದ್ ಅವರು ಇಂದು ತಮ್ಮ ಅಂಕಿತವನ್ನು ಹಾಕಿದ್ದಾರೆ. ಶೀಘ್ರದಲ್ಲೇ ಈ ಮಸೂದೆಗಳು ಕಾಯ್ದೆ ರೂಪದಲ್ಲಿ ಜಾರಿಗೆ ಬರಲಿವೆ.

## 29-09-2020

**ಸೆಪ್ಟೆಂಬರ್ 28 : ಕ್ರಾಂತಿಕಾರಿ ಭಗತ್ ಸಿಂಗ್ ಅವರ 113ನೇ ಜನ್ಮದಿನ:**



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್ ಅವರು ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಬ್ರಿಟಿಷರ ವಿರುದ್ಧ ತಮ್ಮ ಕ್ರಾಂತಿಕಾರಿ ಹೋರಾಟದ ಮೂಲಕ

ಎದೆಗುಂದದೆ ಹೋರಾಡಿ ತನ್ನ 23ನೇ ವಯಸ್ಸಿನಲ್ಲೇ ವೀರಮರಣ ಹೊಂದಿದರು. ಸೆಪ್ಟೆಂಬರ್ 28 ರಂದು ಇವರ 113ನೇ ಜನ್ಮ ದಿನವಾಗಿದೆ. ಇವರು ಸೆಪ್ಟೆಂಬರ್ 28ರ 1907ರಲ್ಲಿ ಇಂದಿನ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಫೈಸಲಾಬಾದ್ ಜಿಲ್ಲೆಯ ಬಾಂಗಾ ಗ್ರಾಮದಲ್ಲಿ ಜನಿಸಿದರು.

* ಭಗತ್ ಸಿಂಗ್ ತಂದೆ ಕಿಶನ್ ಸಿಂಗ್ ಮತ್ತು ತಾಯಿ ವಿದ್ಯಾವತಿ.

* 1919ರಲ್ಲಿ ಭಗತ್ ಸಿಂಗ್ ತಮ್ಮ 12ನೇ ವಯಸ್ಸಿನಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸ್ಥಳಕ್ಕೆ ಭೇಟಿ ನೀಡಿ, ಮೊದಲ ಬಾರಿಗೆ ಕ್ರಾಂತಿ ಮನೋಭಾವನೆ ಬೆಳೆಸಿಕೊಂಡರು.

* ಭಗತ್ ಸಿಂಗ್ ತಮ್ಮ ಕೊನೆಯುಸಿರುವವರೆಗೂ ಬ್ರಿಟಿಷರ ವಿರುದ್ಧ ಹೋರಾಡಿ 1931ರಲ್ಲಿ ಗೆಳೆಯರಾದ ರಾಜ್‌ಗುರು ಮತ್ತು ಸುಖದೇವ್ ರೊಂದಿಗೆ ಗಲ್ಲು ಶಿಕ್ಷೆಗೆ ಗುರಿಯಾಗಿ ವೀರಮರಣ ಹೊಂದಿದರು.

**ವೇಶ್ಯಾವಾಟಿಕೆ ಕ್ರಿಮಿನಲ್ ಅಪರಾಧವಲ್ಲ : ಬಾಂಬೆ ಹೈಕೋರ್ಟ್:** ಮುಂಬೈ: ಮುಂಬೈ ನಗರದಲ್ಲಿ ಇತ್ತೀಚಿಗೆ ಬಂಧನಕ್ಕೊಳಗಾಗಿರುವ ಮಹಿಳಾ ಲೈಂಗಿಕ ಕಾರ್ಯಕರ್ತೆಯರ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ಮುಂಬೈ ಹೈಕೋರ್ಟ್ ನ ನ್ಯಾಯಪೀಠವು 'ಕಾನೂನಿನ ಪ್ರಕಾರ ವೇಶ್ಯಾವಾಟಿಕೆ ಕ್ರಿಮಿನಲ್ ಅಪರಾಧ ಆಗಿರುವದಿಲ್ಲ ಹಾಗೂ ವಯಸ್ಕ ಮಹಿಳೆ ತನ್ನ ಇಚ್ಛೆಯ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವತಂತ್ರ ಹಕ್ಕು ಹೊಂದಿರುತ್ತಾಳೆ' ಎಂದು ಮಹತ್ವದ ಆದೇಶ ನೀಡಿದೆ.

* ಬಾಂಬೇ ಹೈಕೋರ್ಟ್ ನ ನ್ಯಾಯಮೂರ್ತಿ ಪೃಥ್ವಿರಾಜ್ ಚೌಹಾಣ್ ನೇತೃತ್ವದ ನ್ಯಾಯಪೀಠವು ಈ ಆದೇಶ ನೀಡಿದೆ.

**ಖ್ಯಾತ ವಿಮರ್ಶಕ ಡಾ.ಜಿ.ಎಸ್.ಆಮೂರ ನಿಧನ:** ಬೆಂಗಳೂರು: ಕನ್ನಡ ಸಾಹಿತ್ಯ ಕ್ಷೇತ್ರದ ಖ್ಯಾತ ವಿಮರ್ಶಕರಾಗಿದ್ದ ಡಾ ಗುರುರಾಜ ಶ್ಯಾಮಾಚಾರ ಆಮೂರ ಅವರು ಬೆಂಗಳೂರಿನ ಸ್ವಗೃಹದಲ್ಲಿ ತಮ್ಮ 95 ನೇ ವಯಸ್ಸಿನಲ್ಲಿ ನಿಧನರಾದರು. ಹಾವೇರಿ ಜಿಲ್ಲೆಯ ಬೊಮ್ಮನಹಳ್ಳಿ ಮೂಲದವರಾದ ಇವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಔರಂಗಾಬಾದ್ ನ ಮರಾಠವಾಡ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ನಿವೃತ್ತಿಯ ನಂತರದ ದಿನಗಳಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯಕ್ಕೆ ತಮ್ಮ ಸಾಹಿತ್ಯ ಕೊಡುಗೆ ನೀಡಿದ್ದು, ಆಧುನಿಕ ಕನ್ನಡಸಾಹಿತ್ಯ ವಿಮರ್ಶಕರಲ್ಲಿ ಅತಿ ಅಗ್ರಮಾನ್ಯ ಎನಿಸಿದ್ದರು, ಇವರ ಸಾಹಿತ್ಯ ಕೊಡುಗೆಯನ್ನು ಪರಿಗಣಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ, ಪಂಪ ಪ್ರಶಸ್ತಿ, ಮಾಸ್ತಿ ಅಯ್ಯಂಗಾರ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ.

**ಜಮ್ಮು ಕಾಶ್ಮೀರ ಅಧಿಕೃತ ಭಾಷಾ ಅಧಿನಿಯಮಕ್ಕೆ ರಾಷ್ಟ್ರಪತಿಯಿಂದ ಅನುಮೋದನೆ:** ಶ್ರೀನಗರ : ಜಮ್ಮು-ಕಾಶ್ಮೀರ ಅಧಿಕೃತ ಭಾಷಾ ಅಧಿನಿಯಮ 2020ಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ಅನುಮೋದನೆ ನೀಡಿದ್ದು, ಇದನ್ನು ಸರಕಾರದ ಗೆಜೆಟ್(ರಾಜ್ಯಪತ್ರ)ದಲ್ಲಿ ಪ್ರಕಟಿಸಿರುವದಾಗಿ ಕೇಂದ್ರ ಸರಕಾರ ತಿಳಿಸಿದೆ. ಈ ಮೊದಲು ಜಮ್ಮು ಕಾಶ್ಮೀರವು ಕೇವಲ ಉರ್ದು ಮತ್ತು ಇಂಗ್ಲಿಷ್ ಭಾಷೆಯನ್ನು ಮಾತ್ರ ಅಧಿಕೃತ ಭಾಷೆಯನ್ನಾಗಿ ಹೊಂದಿತ್ತು, ಇದೀಗ ಈ ಪಟ್ಟಿಯಲ್ಲಿ ಕಾಶ್ಮೀರಿ, ಡೋಗ್ರಿ ಮತ್ತು ಹಿಂದಿ ಭಾಷೆಯನ್ನು ಸೇರ್ಪಡೆ ಮಾಡಲು ಹೊಸ ಅಧಿನಿಯಮ ಅವಕಾಶ ನೀಡಿದೆ.

* ಜಮ್ಮು-ಕಾಶ್ಮೀರ ಅಧಿಕೃತ ಭಾಷಾ ಮಸೂದೆ 2020 ನ್ನು ಸೆಪ್ಟೆಂಬರ್ 22 ರಂದು ಲೋಕಸಭೆಯಲ್ಲಿ ಹಾಗೂ ಸೆಪ್ಟೆಂಬರ್ 23ರಂದು ರಾಜ್ಯಸಭೆಯಲ್ಲಿ ಅಂಗೀಕರಿಸಲಾಗಿತ್ತು.

**ಅಸ್ಸಾಂನ ಮೊದಲ ಹಾಗೂ ಏಕೈಕ ಮಹಿಳಾ ಮುಖ್ಯಮಂತ್ರಿ ಸೈಯದಾ ಅನ್ವರಾ ತೈಮೂರ್ ನಿಧನ:** ನವದೆಹಲಿ : ಅಸ್ಸಾಂ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡ ಮೊದಲ ಹಾಗೂ ಏಕೈಕ ಮಹಿಳೆಯಾಗಿರುವ ಸೈಯದಾ ಅನ್ವರಾ ತೈಮೂರ್ ಅವರು ತಮ್ಮ 84 ನೇ ವಯಸ್ಸಿನಲ್ಲಿ ಸೆಪ್ಟೆಂಬರ್ 28 ರಂದು ಆಸ್ಟ್ರೇಲಿಯಾದಲ್ಲಿ ನಿಧನರಾದರು. ಕಾಂಗ್ರೆಸ್ ಪಕ್ಷದ ನಾಯಕಿಯಾಗಿದ್ದ ಇವರು 1972, 1978, 1983, 1991ರಲ್ಲಿ ಶಾಸಕಿಯಾಗಿ ಆಯ್ಕೆಯಾಗಿದ್ದರು, ಹಾಗೂ 1980ರಲ್ಲಿ ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಹುದ್ದೆಗೇರಿದ್ದರು.

**ರಕ್ಷಣಾ ವಲಯದ ವಿದೇಶಿ ಹೂಡಿಕೆ ನಿಯಮ ರದ್ದು ಹಾಗೂ ರಕ್ಷಣಾ ಸಾಮಗ್ರಿ ಖರೀದಿ ಒಪ್ಪಿಗೆ:** ನವದೆಹಲಿ: ಭಾರತದ ರಕ್ಷಣಾ ಸಚಿವಾಲಯವು 'ರಕ್ಷಣಾ ಸಾಮಗ್ರಿ ಖರೀದಿ' ನಿಯಮವನ್ನು ಬದಲಾಯಿಸಿದ್ದು, ಸರ್ಕಾರ-ಸರ್ಕಾರದ ಅಥವಾ ಸರ್ಕಾರ-ವಿದೇಶಿ ಏಕ ಏಜೆನ್ಸಿಗಳ ನಡುವಿನ ಒಪ್ಪಂದದ 'ವಿದೇಶಿ ಹೂಡಿಕೆ' ಷರತ್ತನ್ನು ರದ್ದುಪಡಿಸಿದೆ. 2006 ರಲ್ಲಿ ಯುಪಿಎ ಸರ್ಕಾರ ಜಾರಿಗೆ ತಂದ ಷರತ್ತಿನ ಪ್ರಕಾರ ಇಲ್ಲಿಯವರೆಗೆ ಭಾರತವು ವಿದೇಶಿ ಕಂಪನಿಯಿಂದ ರಕ್ಷಣಾ ಸಾಮಗ್ರಿ ಖರೀದಿಸಿದಲ್ಲಿ, ಆ ಸಂಸ್ಥೆಯು ಒಂದು ಭಾಗವನ್ನು ಭಾರತದಲ್ಲೇ ಹೂಡಿಕೆ ಮಾಡುವದು ಕಡ್ಡಾಯಾಗಿತ್ತು, ಇದೀಗ ಈ ಷರತ್ತನ್ನು ತೆಗೆದುಹಾಕಲಾಗಿದೆ. ಇದೆ ವೇಳೆ ₹780 ಕೋಟಿ ಮೌಲ್ಯದ ಅಮೆರಿಕದ ಸಿಗ್ ಸೌರ್ ಬಂದೂಕುಗಳ ಖರೀದಿ ಸೇರಿದಂತೆ ಭಾರತೀಯ ರಕ್ಷಣಾ ವಲಯಕ್ಕೆ ಒಟ್ಟು ₹2,290 ಕೋಟಿ ಮೊತ್ತದ ಶಸ್ತ್ರಾಸ್ತ್ರ ಖರೀದಿಗೆ ರಕ್ಷಣಾ ಸಚಿವಾಲಯ ಸೋಮವಾರ ಒಪ್ಪಿಗೆ ನೀಡಿದೆ.

**ಇಂಫಾಲ್, ಚೆನ್ನೈ ಹಾಗೂ ರಾಂಚಿಯಲ್ಲಿ ಎನ್ಐಎ ಹೊಸ ಶಾಖೆಗಳ ಆರಂಭ:** ನವದೆಹಲಿ: ಇಂಫಾಲ್, ಚೆನ್ನೈ ಹಾಗೂ ರಾಂಚಿ ನಗರಗಳಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯ(National investigation agency) ಹೊಸ ಶಾಖೆಗಳನ್ನು ಆರಂಭಿಸಲು ಕೇಂದ್ರ ಗೃಹ ಸಚಿವಾಲಯ

ಅನುಮೋದನೆ ನೀಡಿದೆ. ರಾಷ್ಟ್ರೀಯ ತನಿಖಾ ಸಂಸ್ಥೆಯು ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳು ಹಾಗೂ ರಾಷ್ಟ್ರೀಯ ಭದ್ರತೆ ಸಂಬಂಧಿಸಿದ ಪ್ರಕರಣಗಳ ತನಿಖೆ ನಡೆಸುತ್ತದೆ. ಪ್ರಸ್ತುತ ತನಿಖಾ ಸಂಸ್ಥೆಯು ಗುವಾಹಟಿ, ಮುಂಬೈ, ಜಮ್ಮು, ಕೋಲ್ಕತ್ತ, ಹೈದರಾಬಾದ್, ಕೊಚ್ಚಿ, ಲಖನೌ, ರಾಯ್‌ಪುರ ಮತ್ತು ಚಂಡೀಗಢದಲ್ಲಿ ತನ್ನ ಕಚೇರಿಯನ್ನು ಹೊಂದಿದೆ. ಅಲ್ಲದೆ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಎನ್‌ಐಎ ವಿಶೇಷ ಘಟಕಗಳನ್ನು ಹೊಂದಿದೆ.

## 30-09-2020

**ಕಾಡುಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆಗೆ ಸಿಎಂ ಆದೇಶ:** ಬೆಂಗಳೂರು : ಕರ್ನಾಟಕ ರಾಜ್ಯದಲ್ಲಿ ಕಾಡುಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವ ಕುರಿತಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇತ್ತೀಚಿಗೆ ಆದೇಶ ನೀಡಿದ್ದಾರೆ. ರಾಜ್ಯದಲ್ಲಿ ಕಾಡುಗೊಲ್ಲ ಸಮುದಾಯದ ಜನರು ಹೆಚ್ಚಿದ್ದು, ಈ ಸಮುದಾಯದ ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸುವ ಅನಿವಾರ್ಯತೆಯಿದ್ದು, ಇದೆ ಕಾರಣದಿಂದ ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮವನ್ನು ಸ್ಥಾಪನೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆದೇಶಿಸಿದ್ದಾರೆ.

**ನಮಾಮಿ ಗಂಗೆ ಮಿಷನ್‌ನಡಿ ಆರು ಬೃಹತ್ ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ ಮೋದಿ:**




ನವದೆಹಲಿ: ಉತ್ತರಾಖಂಡ ರಾಜ್ಯದಲ್ಲಿ "ನಮಾಮಿ ಗಂಗೆ ಮಿಷನ್"ನಡಿಯಲ್ಲಿ ಒಟ್ಟು ಆರು ಬೃಹತ್ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿಯವರು ವಿಡಿಯೋ ಕಾನ್ಫರೆನ್ಸ್ ಸಭೆಯ ಮೂಲಕ ಇತ್ತೀಚಿಗೆ ಚಾಲನೆ ನೀಡಿದರು.

* 68 MLD (million litter per day) ಒಳಚರಂಡಿ ಸಂಸ್ಕರಣಾ ಘಟಕ (ಎಸ್‌ಟಿಪಿ) ನಿರ್ಮಾಣ,
* ಹರಿದ್ವಾರದ ಜಗಜ್ಜೀತ್‌ಪುರದಲ್ಲಿರುವ 27 ಎಂಎಲ್‌ಡಿ ಸ್ಥಾವರ ನವೀಕರಣ
* ಸರೈನಲ್ಲಿ 18 ಎಂಎಲ್‌ಡಿ ಎಸ್‌ಟಿಪಿ ನಿರ್ಮಾಣ ಸೇರಿ ಒಟ್ಟು 6 ಮಹತ್ವದ ಯೋಜನೆಗಳಿಗೆ ಚಾಲನೆ ನೀಡಲಾಯಿತು.

**ಲಖನೌನಲ್ಲಿ ಅಕ್ಟೋಬರ್ 10 ರಿಂದ ಮಹಿಳಾ ರಾಷ್ಟ್ರೀಯ ಕುಸ್ತಿ ಶಿಬಿರ ಆಯೋಜನೆ:** ನವದೆಹಲಿ: ಉತ್ತರಪ್ರದೇಶದ ರಾಜಧಾನಿಯಾದ ಲಕ್ನೌ ನಲ್ಲಿ ಇದೆ ಅಕ್ಟೋಬರ್ 10 ನೇ ತಾರೀಕಿನಿಂದ ರಾಷ್ಟ್ರೀಯ ಮಹಿಳೆಯರ ರಾಷ್ಟ್ರೀಯ ಕುಸ್ತಿ ಶಿಬಿರವನ್ನು ಆಯೋಜಿಸಲಾಗಿದೆ. ಈ ಕ್ರೀಡಾಕೂಟವು ಲಖನೌ ನಗರದಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ಶಿಬಿರ ನಡೆಯಲಿದೆ.

**ಟೋಕಿಯೊ ಒಲಿಂಪಿಕ್ಸ್ ಕ್ರೀಡಾ ನಿರ್ದೇಶಕರಾಗಿ ಮಿಕಾಕೊ ಕೊಟಾನಿ ಆಯ್ಕೆ:** ಟೋಕಿಯೊ: ಜಪಾನ ರಾಷ್ಟ್ರದ ಟೋಕಿಯೊ ನಗರದಲ್ಲಿ ಆಯೋಜಿಸಲಾಗಿರುವ ಒಲಿಂಪಿಕ್ಸ್‌ನ ಕ್ರೀಡಾಕೂಟದ ಕ್ರೀಡಾ ನಿರ್ದೇಶಕರಾಗಿ ಮಿಕಾಕೊ ಕೊಟಾನಿ ಅವರನ್ನು ನೇಮಿಸಲಾಗಿದೆ. ಈ ಒಲಿಂಪಿಕ್ಸ್ ಕ್ರೀಡಾಕೂಟದ ಸಂಘಟನಾ ಸಮಿತಿಗೆ ಜಪಾನ್‌ನ ಮಾಜಿ ಪ್ರಧಾನಿ ಯೋಶಿರೊ ಮೊರಿ ಅವರು ಅಧ್ಯಕ್ಷರಾಗಿದ್ದಾರೆ.

**ಮಾಲ್ಡೀವ್ಸ್ ರಾಷ್ಟ್ರಕ್ಕೆ ಡಾರ್ನಿಯರ್ ಕಣ್ಗಾವಲು ವಿಮಾನ ನೀಡಿದ ಭಾರತ:** ದೆಹಲಿ: ಭಾರತ ಸರ್ಕಾರವು ನೆರೆಯ ದ್ವೀಪ ರಾಷ್ಟ್ರ ಮಾಲ್ಡೀವ್ಸ್‌ಗೆ ಡಾರ್ನಿಯರ್ ವಿಮಾನಗಳನ್ನು ಕೊಡುಗೆಯಾಗಿ ನೀಡಿರುವುದಾಗಿ ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಈ ವಿಮಾನಗಳ ಪೂರೈಕೆಯಿಂದಾಗಿ ದ್ವೀಪರಾಷ್ಟ್ರಕ್ಕೆ ತನ್ನ ವಿಶೇಷ ಆರ್ಥಿಕ ವಲಯದ ಮೇಲೆ ನಿಗಾ ಇಡಲು ಮತ್ತು ಸಾಗರ ಭಯೋತ್ಪಾದನಾ ಚಟುವಟಿಕೆಗಳ ಮೇಲೆ ಗಮನಹರಿಸಲು ಈ ವಿಮಾನಗಳನ್ನು ಪೂರೈಕೆ ನೆರವಾಗಲಿದೆ ಎಂದು ಸರ್ಕಾರ ಹೇಳಿದೆ.

* 2016ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ, ಅಂದಿನ ಮಾಲ್ಡೀವ್ಸ್‌ನ ಅಧ್ಯಕ್ಷರಾದ ಅಬ್ದುಲ್ಲಾ ಯಮೀನ್ ಅವರ ಕೋರಿಕೆಯಂತೆ ಡಾರ್ನಿಯರ್ ವಿಮಾನಗಳನ್ನು ಪೂರೈಸಲಾಗಿದ್ದು, ವಿಮಾನದ ನಿರ್ವಹಣೆಗಾಗಿ ಪೈಲಟ್‌ಗಳು, ವೀಕ್ಷಕರು ಮತ್ತು ಎಂಜಿನಿಯರ್‌ಗಳ ಮಾಲ್ಡೀವ್ಸ್‌ನ ಏಳು ಮಿಲಿಟರಿ ಸಿಬ್ಬಂದಿಗೆ ಭಾರತೀಯ ನೌಕಾಪಡೆ ಈಗಾಗಲೇ ತರಬೇತಿ ನೀಡಿದೆ.

**ಗೋಹತ್ಯೆ ನಿಷೇದಿಸಿದ ಶ್ರೀಲಂಕಾ ಸರ್ಕಾರ :** ಕೊಲೊಂಬೋ : ಶ್ರೀಲಂಕಾದಲ್ಲಿ ಗೋಹತ್ಯೆ ಮಾಡುವದನ್ನು ನಿಷೇಧಿಸಿ ಇಲ್ಲಿನ ಸರ್ಕಾರ ಆದೇಶಿಸಿದೆ. ಆದರೆ ರಾಷ್ಟ್ರದಲ್ಲಿ ಗೋಮಾಂಸ ಸೇವನೆ ಮಾಡುವ ಜನರಿದ್ದು, ಇವರ ಅನುಕೂಲಕ್ಕಾಗಿ ಗೋಮಾಂಸವನ್ನು ಆಮದು ಮಾಡಿಕೊಳ್ಳಲು ಯಾವುದೇ ನಿರ್ಬಂಧವನ್ನು ಸಂಪುಟ ವಿಧಿಸಿಲ್ಲ,

* ಶ್ರೀಲಂಕಾ ಸರ್ಕಾರದ ಈ ನಿರ್ಧಾರವನ್ನು ಇಲ್ಲಿ ನೆಲೆಸಿರುವ ಬೌದ್ಧ ಸಮುದಾಯವನ್ನು ತುಷ್ಟೀಕರಿಸುವ ಪ್ರಯತ್ನವಾಗಿದೆ, ಇದರಿಂದ ದೇಶದ ಹೈನೋದ್ಯಮಕ್ಕೆ ಬಾರಿ ಹೊಡೆತ ಬೀಳಲಿದೆ ಎಂದು ವಿರೋಧ ಕೂಡ ವ್ಯಕ್ತವಾಗಿದೆ.